ಇ) ಪರ್ಯಾಲೋಚನಾ ಪ್ರಸ್ತಾವ

(1) ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ, 2003

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ 2003ರ ಪರ್ಯಾಲೋಚಿಸಬೇಕೆಂದು ನಿನ್ನೆ ಎಕ್ಸ್‌ಪ್ಲೇನ್ ಮಾಡಿ ಹೇಳಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಇದರ ಬಗ್ಗೆ ಎಕ್ಸ್‌ಪ್ಲೇಸ್ ಮಾಡಿ ಹೇಳಿದ್ದಾರೆ. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಅವರು ನಿನ್ನೆಯ ದಿನ ವಿಧೇಯಕದ ಬಗ್ಗೆ ಎಕ್ಸ್‌ಪ್ಲೇನ್ ಮಾಡಿ ಹೇಳಿದ್ದಾರೆ.

†ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಕುಮಾರ್‌ರವರು ಈ ಕರ್ನಾಟಕ ಮುನಿಸಿಪಲ್ ಅಮೆಂಡ್‌ಮೆಂಟ್ ಬಿಲ್‌ನ್ನು ಏನು ತೆಗೆದುಕೊಂಡು ಬಂದಿದ್ದಾರೆ. ಅದು ಸಿಮಿಲಾರಿಟಿ ಕಾರ್ಪೋರೇಷನ್‌ಗೂ ಇರುವಂತಹದ್ದು ಆಗಿದೆ. ಇದರ ಬಗ್ಗೆ ಇಡೀ ರಾಜ್ಯದಲ್ಲಿ ಚರ್ಚೆಯಾಗುತ್ತಿದೆ. ಹಿಂದೆ ಈ ಒಂದು ಸ್ವಯಂ ಘೋಷಿತ ಆಸ್ತಿ ತೆರಿಗೆಯ ಬಗ್ಗೆ ಮೂಲವಾದಂತಹ ಈ ಆ್ಯಕ್ಟ್ ಇಲ್ಲಿ ಬಿಲ್ ಪಾಸಾಗಿ ಆ್ಯಕ್ಟ್ ಆಗಿದೆ. ಅದಕ್ಕೆ ಅವರು ತಿದ್ದುಪಡಿಯನ್ನು ತರುತ್ತಿದ್ದಾರೆ. ಇವತ್ತು ಜನಪ್ರತಿನಿಧಿಗಳ ಮೂಲ ಉದ್ದೇಶವೇನಿತ್ತು ಬಹುಶಃ ವೆಕೇಟ್ ಲ್ಯಾಂಡ್ ಬಗ್ಗೆ ಪಾಯಿಂಟ್ 1 ಪರ್ಸೆಂಟ್ ಅದರ ಬಗ್ಗೆ ಒಂದಿಷ್ಟು ಅಮೆಂಡ್‌ಮೆಂಟ್ ಮಾಡುವುದನ್ನು ಬಿಟ್ಟರೆ ಉಳಿದ ಹಲವಾರು ವಿಷಯಗಳನ್ನು ಇಲ್ಲಿ ಸೇರಿಸಿದ್ದಾರೆ. ನಾನು ಎರಡು ಮೂರು ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇನೆ. ಅನಂತರ ಮಾನ್ಯ ಸದಸ್ಯರಾದ ಶ್ರೀ ಎ. ರಾಮದಾಸ್‌ರವರು ಇದರ ಬಗ್ಗೆ ಬೆಳಕನ್ನು ಚೆಲ್ಲುವವರಿದ್ದಾರೆ. ನಾನು ಎರಡು ಮೂರು ಪಾಯಿಂಟ್‌ಗಳ ಬಗ್ಗೆ ಇಲ್ಲಿ ಮಾತನಾಡುವವನಿದ್ದೇನೆ. ಸ್ವಯಂ ಘೋಷಿತ ಆಸ್ತಿತೆರಿಗೆಯ ಬಗ್ಗೆ ಆ ಮೂಲ ಉದ್ದೇಶದ ಬಗ್ಗೆ ಯಾರ ವಿರೋಧವಿಲ್ಲ. ಏಕೆಂದರೆ ಅದು ಮುನಿಸಿಪಾಲಿಟಿ ಅಥವಾ ಕಾರ್ಪೋರೇಷನ್‌ಗಳು ಇರಬಹುದು. ಇಲ್ಲಿ ತೆರಿಗೆಯ ವಸೂಲಿಯು ಸರಿಯಾಗಿ ಆಗುತ್ತಿಲ್ಲ. ಅಲ್ಲಿ ಸರಿಯಾದಂತಹ ವ್ಯಾಲ್ಯುವೇಷನ್‌ಗಳು ಆಗುತ್ತಿಲ್ಲ. ಅದರಲ್ಲಿ ಭ್ರಷ್ಟಾಚಾರಗಳೂ ಕೂಡ ನಡೆಯುತ್ತಿದೆ. ಹೀಗಾಗಿ ಇದಕ್ಕೊಂದು ವ್ಯವಸ್ಥೆ ಬೇಕಾಗಿತ್ತು. ಸರಿಯಾದಂತಹ ವ್ಯವಸ್ಥೆ ಸರಿಯಾದ ರೀತಿಯಲ್ಲಿ ತೆರಿಗೆಯನ್ನು ತುಂಬುವಂತಹ ವಾತಾವರಣ ಮತ್ತು ಆ ಒಂದು ಸ್ಥಳೀಯ ಸಂಸ್ಥೆಗಳಿಗೆ ಸಾಕಷ್ಟು ಆದಾಯ ಬರಬೇಕೆನ್ನುವಂತಹ ಆ ಮೂಲ ಉದ್ದೇಶದ ಬಗ್ಗೆ ಯಾರ ತಕರಾರು ಇಲ್ಲ. ಆದರೆ ಪ್ರಶ್ನೆ ಇಲ್ಲಿರುವುದು ಇದರಲ್ಲಿರುವಂತಹ ಕ್ಲಾಸ್‌ಗಳನ್ನು ನೋಡಿದಾಗ ಇವತ್ತು ಇದ್ದಂತಹ ತೆರಿಗೆಯ ವ್ಯವಸ್ಥೆ ಈ ಕಾನೂನಿನಲ್ಲಿ ಅಡಕವಾಗಿರುವಂತಹ ಅಂಶಗಳನ್ನು ನೋಡಿದರೆ ಇದು ಜನರಿಗೆ ತೆರಿಗೆ ತುಂಬುವಂತಹ ವ್ಯಕ್ತಿಗಳಿಗೆ ಪ್ರಿಯವಾದಂತಹ ಕಾನೂನುಗಳಾಗದೆ ಇವತ್ತು ಅವರನ್ನು ಶೋಷಣೆ ಮಾಡುವಂತಹ ಕಾನೂನು ಆಗಿದೆ. ಅವರ ಶೋಷಣೆಯು ಚಾಲು ಆಗುತ್ತದೆ. ಈಗಾಗಲೇ ಇದರ ಬಗ್ಗೆ ಎಷ್ಟೋ ಜನ ಚಾಲೆಂಜ್ ಮಾಡಿ ಹೈಕೋರ್ಟಿಗೆ ಹೋಗಿದ್ದಾರೆ. ಹೈಕೋರ್ಟಿನಲ್ಲಿ ಕೆಲವೊಂದು ರಿಟ್ ಪಿಟಿಷನ್‌ಗಳು ಪೆಂಡಿಂಗ್ ಇವೆ. ಕೆಲವೊಂದು ಅಡ್ಮಿಟ್ ಆಗಿವೆ. ಕೆಲವೊಂದಕ್ಕೆ ತಡೆಯಾಜ್ಞೆ ಆಗಿದೆ. ಎಂದು ನನಗನಿಸುತ್ತದೆ. ಬಹುಶಃ ಅದರ ಬಗ್ಗೆಯೂ ಮಾನ್ಯ ಶಿವಕುಮಾರ್‌ರವರು ವಿವರಣೆಯನ್ನು ಕೊಡಬೇಕಾಗುತ್ತದೆ. ಹೈಕೋರ್ಟಿನಲ್ಲಿ ಇದರ ಬಗ್ಗೆ ಚಾಲೆಂಜ್ ಮಾಡಿ ಎಷ್ಟು ಕೇಸ್‌ಗಳು ಪೆಂಡಿಂಗ್ ಇವೆ. ಎಷ್ಟು ಕೇಸುಗಳು ತಡೆಯಾಜ್ಞೆ ಆಗಿದೆ. ಎಷ್ಟೋ ಕೇಸುಗಳಲ್ಲಿ ಅಂತಿಮವಾದಂತಹ ತೀರ್ಪುಗಳು ಬಂದಿವೆ.

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಅಬ್ಸರ್‌ವೇಷನ್ ಏನು ಮಾಡಿದ್ದಾರೆ. ಈ ವಿಷಯವನ್ನು ಮಾನ್ಯ ಶಿವಕುಮಾರ್‌ರವರು ಸದನದ ಮುಂದೆ ಬೆಳಕಿಗೆ ತರಬೇಕಾಗುತ್ತದೆ. ಕೋರ್ಟಿನಲ್ಲಿ ಇನ್ನು ಕೇಸುಗಳಿವೆ. ಇಂತಹ ಸಂದರ್ಭದಲ್ಲಿ ಇವರು ಅಮೆಂಡ್‌ಮೆಂಟನ್ನು ತಂದಿದ್ದಾರೆ. ಕೋರ್ಟಿನಲ್ಲಿ ಕೆಲವೊಂದು ಡೈರೆಕ್ಷನ್‌ನ್ನು ಕೊಟ್ಟಿದ್ದಾರೆ. ಆ ಡೈರೆಕ್ಷನ್ ಪ್ರಕಾರ ಇವರು ಅಮೆಂಟ್‌ಮೆಂಟ್‌ನ್ನು ತಂದಿದ್ದಾರೆಯೇ ಹೇಗೆ ಇದನ್ನೂ ಸಹ ನಾವು ವಿಚಾರ ಮಾಡಬೇಕಾಗುತ್ತದೆ. ಮುಖ್ಯವಾಗಿ ನಾನು ಒಂದೆರಡು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಈ ಒಂದು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಆ್ಯಕ್ಟ್ ಮುನಿಸಿಪಾಲಿಟಿದು ಒಂದು ಅವೆಲ್ಲಾ ಸಿಮಿಲಾರಿಟಿಗಳು ಇವೆ. ಆದರೆ ಇವತ್ತು ಹುಬ್ಬಳ್ಳಿ-ಧಾರವಾಡ ಇರಬಹುದು. ಬೆಳಗಾಂ, ಗುಲ್ಬರ್ಗಾ, ಮೈಸೂರು ಇನ್ನಿತರ ಮಹಾನಗರಸಭೆಗಳು ಇರಬಹುದು ಇನ್ನಿತರ ಮುನಿಸಿಪಾಲಿಟಿಗಳು ಬಹುಶಃ ಎಷ್ಟೋ ಕಡೆ ಸ್ವಯಂ ಘೋಷಿತ ತೆರಿಗೆ ಪದ್ಧತಿ ಬಗ್ಗೆ ಈ ಒಸ ಕಾನೂನನ್ನು ತಂದಿದ್ದಾರಲ್ಲಾ ಇದನ್ನು ಅಪೋಸ್ ಮಾಡಿ ಎಷ್ಟೋ ನಗರಸಭೆಗಳು ಮತ್ತು ಪುರಸಭೆಗಳು ಈ ವ್ಯವಸ್ಥೆ ನಮಗೆ ಬೇಡವೆಂದು ರೆಸೊಲ್ಯೂಷನ್ ಪಾಸು ಮಾಡಿವೆ. ಇದರಿಂದ ಶೋಷಣೆ ಜಾಸ್ತಿಯಾಗುತ್ತದೆಂದು ರೆಸೊಲ್ಯೂಷನ್ ಮಾಡಿವೆ. ಇದರ ಬಗ್ಗೆ ಸಾಕಷ್ಟು ಬದಲಾವಣೆಗಳನ್ನು ತರಬೇಕೆಂದು ಒತ್ತಾಯಗಳು ಬಹಳಷ್ಟು ಸಲ ಬಂದಿವೆ. ಎಷ್ಟೋ ಕಾರ್ಪೋರೇಷನ್‌ಗಳು ಇದನ್ನು ಇದುವರೆವಿಗೂ ಅಡಾಪ್ಟ್ ಮಾಡಿಕೊಂಡಿರುವುದಿಲ್ಲ. ಹುಬ್ಬಳ್ಳಿ-ಧಾರವಾಡವನ್ನು ತೆಗೆದುಕೊಳ್ಳುವುದಾದರೆ ಸಂಪೂರ್ಣವಾಗಿ ಗೊಂದಲ ನಿರ್ಮಾಣವಾಗಿ ಇದನ್ನು 4-5 ಭಾರಿ ಮುಂದಕ್ಕೆ ಹಾಕಿದರು. ಇದನ್ನು ಅನುಷ್ಠಾನ ಮಾಡುವ ಬಗ್ಗೆ ಮುಂದಕ್ಕೆ ಹಾಕಿಕೊಂಡು ಬಂದರು. ಎಷ್ಟೋ ಕಡೆ ನಗರಸಭೆ ಮತ್ತು ಪುರಸಭೆಗಳಲ್ಲಿ ನಾಗರೀಕರು ಅದು ಯಾವುದೋ ಒಂದು ರಾಜಕೀಯ ಪಕ್ಷವಲ್ಲ. ಅಲ್ಲಿರುವಂತಹ ನಾಗರೀಕರೇ ಸ್ವಯಂ ಪ್ರೇರಿತವಾಗಿ ಬಂದ್‌ನ್ನು ಆಚರಣೆ ಮಾಡಿ ಈ ಒಂದು ವ್ಯವಸ್ಥೆ ಬೇಡವೆನ್ನುವ ರೀತಿಯಲ್ಲಿ ಸರ್ಕಾರಕ್ಕೆ ಪ್ರತಿಭಟನೆಯನ್ನು ಮಾಡಿದ್ದಾರೆ. ಇದರ ಅರ್ಥವೇನಾಗುತ್ತದೆಂದರೆ ಇದು ಒಂದು ಶೋಷಣೆ ಮಾಡುವಂತಹ ಕಾನೂನಾಗುತ್ತದೆ. ಇದರಲ್ಲಿ ಒಳ್ಳೆಯ ಅಂಶಗಳು ಇದ್ದರೂ ಸಹಿತ ಕೆಲವೊಂದು ಅಂಶಗಳನ್ನು ನೀವು ಇನ್‌ಕ್ಲೂಡ್ ಮಾಡಿರುವುದರಿಂದ ಬಹಳ ಕಠಿಣವಾದಂತಹ ನೀವು ನಿಯಮಗಳನ್ನು ಹಾಕಿರುವುದರಿಂದ ಅದು ಏನಾಗಿದೆ ಎಂದರೆ, ಜನರಿಗೆ ಒಳ್ಳೆಯದಾಗುವ ಬದಲು ಕರದಾತರಿಗೆ ಒಳ್ಳೆಯದಾಗುವ ಬದಲು ಅದು ಶೋಷಣೆ ಮಾಡುವಂತಹ ಒಂದು ಕರಾಳ ಕಾನೂನಾಗಿ ಪರಿವರ್ತನೆಯಾಗುತ್ತದೆ. ಇದು ಒಂದು ಕರಾಳ ಮಸೂದೆಯಾಗುತ್ತಿದೆ. ಅದರ ಬಗ್ಗೆ ಒಂದೆರಡು ಮೂರು ವಿಚಾರಗಳನ್ನು ಹೇಳಿದರೆ ಅದರ ಬಗ್ಗೆ ನನ್ನ ಈ ಒಂದು ವಾದಕ್ಕೆ ಪೂರಕವಾಗಬಹುದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಬೆಂಗಳೂರನ್ನು ಉದಾಹರಣೆಗೆ ತೆಗೆದುಕೊಳ್ಳುವುದಾದರೆ, ಬೆಂಗಳೂರು ಮಹಾನಗರಸಭೆಗೆ ಈ ಆ್ಯಕ್ಟ್ ಅಪ್ಲೈ ಆಗುತ್ತಿಲ್ಲ. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಇದೆಯಲ್ಲಾ, ಈ ಕಾನೂನಿಗೆ ತಿದ್ದುಪಡಿಯನ್ನು ತಂದಿದ್ದೀರಲ್ಲಾ, ಅದು ಬೆಂಗಳೂರಿಗೆ ಅಪ್ಲೈ ಆಗುವುದಿಲ್ಲ. ಅವರೊಂದು ಸಪರೇಟ್ ರೆಸುಲ್ಯೂಷನ್‌ನ್ನು ಮಾಡಿಕೊಂಡು ತಮ್ಮದೇ ಆದಂತಹ ಸ್ವತಂತ್ರವಾದ ವ್ಯವಸ್ಥೆಯನ್ನು ತೆಗೆದುಕೊಂಡು ಬಂದಿದ್ದಾರೆ. ಸ್ವಯಂ ಘೋಷಿತ ತೆರಿಗೆ ಪದ್ಧತಿಯನ್ನೇ ಬೆಂಗಳೂರುನವರು ಸ್ವತಂತ್ರವಾಗಿ ತೆಗೆದುಕೊಂಡು ಬಂದಿದ್ದಾರೆ. ಅವರಿಗೆ ಇದಕ್ಕೆ ಸಂಬಂಧವಿಲ್ಲ.

ಈ ಬೆಂಗಳೂರೇ ಒಂದು ರಾಜ್ಯ. ಬೆಂಗಳೂರನ್ನು ಹೊರತುಪಡಿಸಿರುವುದೇ ಒಂದು ರಾಜ್ಯವಾಗಿದೆ. ಇವತ್ತು ಇದಾಗಿದೆ. ಬೆಂಗಳೂರಿನಲ್ಲಿರುವಂತಹ ನಾಗರೀಕರಿಗೊಂದು ರೂಲ್ಸ್ ಇಡೀ ರಾಜ್ಯದಲ್ಲಿರುವಂತಹ ನಾಗರೀಕರಿಗೆ ಮತ್ತೊಂದು ರೂಲ್ಸ್ ಈ ತೆರಿಗೆಯನ್ನು ತುಂಬುವುದರಲ್ಲಿ ಆಗಿದೆ. ಇದನ್ನು ನಾನು ಇವತ್ತು ಹೇಳುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಶಿವಕುಮಾರ್‌ರವರು ಹೇಳಲಿ, ಇವತ್ತು ನೀವು ಅಮೆಂಡ್‌ಮೆಂಟ್‌ನ್ನು ತಂದಿದ್ದೀರಿ, ಹಿಂದೆ ಏನೂ ಕಾನೂನನ್ನು ತೆಗೆದುಕೊಂಡು ಬಂದಿದ್ದೀರಿ, ಅದು ಬೆಂಗಳೂರು ಜನತೆಗೆ ಅಪ್ಲೈ ಆಗುತ್ತದೆಯೇ ಅದನ್ನು ಹೇಳಿ? ಅದನ್ನು ತಾವು ಮೊದಲು ಹೇಳಬೇಕು. ಇದನ್ನು ಹೇಳಿದರೆ ಎಲ್ಲಾ ಕ್ಲಾರಿಫೈ ಆಗುತ್ತದೆ. ಬೆಂಗಳೂರಿನ ಮಹಾನಗರಸಭೆಗೆ ಅಪ್ಲೈ ಮಾಡುವಂತಹ ವ್ಯವಸ್ಥೆಗಳು ಏನಿವೆ ಅದನ್ನು ಬಹುಶಃ ನೀವು ಇಡೀ ರಾಜ್ಯದ ನಗರಸಭೆಗಳಿಗೆ, ಪುರಸಭೆಗಳಿಗೆ, ಮತ್ತು ಮಹಾನಗರಸಭೆಗಳಿಗೆ ತಂದಿದ್ದರೆ ಈ ಸಮಸ್ಯೆಗಳಾಗುತ್ತಿರಲಿಲ್ಲ. ಅಲ್ಲಿರುವ ನಿಯಮಗಳು ಬೇರೆ, ಅಲ್ಲಿರುವಂತಹ ಟ್ಯಾಕ್ಸ್ ವ್ಯಾಲ್ಯೆವೇಷನ್‌ಗಳೇ ಬೇರೆ ಮತ್ತು ಬೇರೆ ನಗರಸಭೆಗಳಲ್ಲಿರುವಂತಹ ಟ್ಯಾಕ್ಸ್ ವ್ಯಾಲ್ಯು ಏಷನ್‌ಗಳೆ ಬೇರೆಯಾಗಿದೆ. ಎಲ್ಲವೂ ಸಪರೇಟಾಗಿದೆ. ಬೆಂಗಳೂರು ರಾಜ್ಯವೇ ಬೇರೆ ಬಾಕಿ ನಗರಗಳೇ ಬೇರೆ ತರಹವಾಗಿದೆ ಅಲ್ಲಿ ಒಂದು ಕಾನೂನು ಮತ್ತು ಇಲ್ಲಿ ಒಂದು ಕಾನೂನು ಇಲ್ಲಿ ಬಂದಿರುವುದು ಇದೇ ಡಿಫರೆನ್ಸ್. ಇವತ್ತು ನೀವು ಸ್ವಯಂ ಘೋಷಿತ ತೆರಿಗೆ ಪದ್ಧತಿಯನ್ನು ತೆಗೆದುಕೊಂಡು ಬಂದಿದ್ದೀರಿ. ಇವತ್ತು ಬೆಂಗಳೂರಿನಲ್ಲಿ ಹೇಗಿದೆ? ಟ್ಯಾಕ್ಸ್ ವ್ಯಾಲ್ಯು ಏಷನ್ ತೆರಿಗೆಯನ್ನು ಯಾವ ಆಧಾರದ ಮೇಲೆ ಕ್ಯಾಲ್ಯುಕಲೇಷನ್ ಮಾಡುತ್ತೀರಿ? ಇವತ್ತು ನಿಮ್ಮ ಹೊಸ ಕಾನೂನಿನ ಪ್ರಕಾರ ನೀವು ತೆರಿಗೆಯನ್ನು ಕ್ಯಾಪಿಟಲ್ ಮೇಲೆ ಕ್ಯಾಲ್ಯುಕಲೇಷನ್ ಮಾಡುತ್ತೀರಿ, ಆದರೆ ಬೆಂಗಳೂರಿನಲ್ಲಿ ಏನಿದೆ? ರೇಟಬಲ್ ವ್ಯಾಲ್ಯುರೆಂಟಲ್ ಬೇಸಿಸ್ ಮೇಲೆ ವ್ಯಾಲ್ಯು ಏಷನ್ ಮಾಡುತ್ತೀರಿ. ಆದರೆ ಇಡೀ ರಾಜ್ಯದಲ್ಲಿರುವಂತಹ ನಗರಸಭೆ ಪುರಸಭೆ ಮತ್ತು ಮಹಾನಗರಸಭೆಗೆ ಕ್ಯಾಪಿಟಲ್ ವ್ಯಾಲ್ಯು ಏಷನ್ ಮಾಡುತ್ತಿದ್ದೀರಿ. ಇದು ಏಕೆ ಡಿಫರೆನ್ಸ್ ಆಯಿತು? ಬೆಂಗಳೂರಿನಲ್ಲಿ ಒಂದು ರೀತಿ ಅಲ್ಲಿ ಒಂದು ರೀತಿಯಾಗಿದೆ. ಇವತ್ತು ಕ್ಯಾಪಿಟಲ್ ವ್ಯಾಲ್ಯೂ ಬೇಸ್ ಏನು? ಮತ್ತು ರೇಟಬಲ್ ವ್ಯಾಲ್ಯು ಏಷನ್ ಬೇಸ್ ಏನು? ರೇಟಲಬ್ ವ್ಯಾಲ್ಯುಏಷನ್ ಯಾವುದೊಂದು ಅಸ್ತಿಯನ್ನು ನಾವು ರೆಂಟ್‌ಗೆ ಕೊಟ್ಟರೆ, ಆ ಬಾಡಿಗೆಯ ಉತ್ಪನ್ನವೆಷ್ಟು? ಅದರ ಮೇಲೆ ಟ್ಯಾಕ್ಸ್ ತುಂಬುವುದಕ್ಕೆ ಲೆಕ್ಕಾಚಾರವಿದೆ. ಇದು ರೇಟಲಬ್ ವ್ಯಾಲ್ಯು ಏಷನ್. ಆದರೆ ಕ್ಯಾಪಿಟಲ್ ವ್ಯಾಲ್ಯು ಏಷನ್‌ನ ಅರ್ಥ. ಇವತ್ತು ಪ್ರಾಪರ್ಟಿಯನ್ನು ಪರ್ಚೇಸ್ ಮಾಡುತ್ತೇವೆ. ನಾವು ಸೇಲ್ ಅಗ್ರಿಮೆಂಟ್‌ನ್ನು ಮಾಡಿಕೊಳ್ಳುತ್ತೇವೆ. ವ್ಯವಹಾರಗಳನ್ನು ಸಹ ಮಾಡುತ್ತೇವೆ. ಆ ಪ್ರಾಪರ್ಟಿ ವ್ಯಾಲ್ಯೂಏಷನ್ ಇವತ್ತು 5.00 ಲಕ್ಷ ರೂಪಾಯಿ ಅಥವಾ 10.00 ಲಕ್ಷ 20.00 ಲಕ್ಷ ರೂಪಾಯಿ ಇರಬಹುದು. ಆ ವ್ಯಾಲ್ಯೂ ಏಷನ್ ಮೇಲೆ 3.6.1 ಅದರ ಪ್ರಕಾರ ನಾವು ಕ್ಯಾಷ್ ತುಂಬಬೇಕು. ಅದರ ಉದ್ದೇಶವೇನೆಂದರೆ, ಇವತ್ತು ನೋಂದಣಿ ಇಲಾಖೆ ರಿಜಿಸ್ಟ್ರೇಷನ್ ಡಿಪಾರ್ಟ್‌ಮೆಂಟ್ ಆ ಇಲಾಖೆಯಲ್ಲಿ, ಪ್ರತಿಯೊಂದು ಊರಿನಲ್ಲಿ ಒಂದೊಂದು ಏರಿಯಾ ಪ್ರಾಪರ್ಟಿ ಬೆಲೆ ಎಷ್ಟು ಎನ್ನುವುದನ್ನು ನಿಗದಿ ಮಾಡಿ ಚಾರ್ಟ್ ಮಾಡಿದ್ದಾರೆ. ಆ ಚಾರ್ಟ್ ಪ್ರಕಾರ, ಆ ಕ್ಯಾಪಿಟಲ್ ವ್ಯಾಲ್ಯೂ ಏಷನ್ ಪ್ರಕಾರ ಟ್ಯಾಕ್ಸ್ ತುಂಬಬೇಕು. ಇವತ್ತು ನನ್ನದೇ ಒಂದು ಪ್ರಾಪರ್ಟಿ ಮಾರ್ಕೆಟ್ ವ್ಯಾಲ್ಯುವೇಷನ್ 5 ಲಕ್ಷ ರೂಪಾಯಿ ಬೆಲೆ ಇರುತ್ತದೆ. ಆದರೆ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಆ ವ್ಯಾಲ್ಯೂವೇಷನ್

ಪ್ರಕಾರ ಅದರ ಬೆಲೆ 10 ಲಕ್ಷ ರೂಪಾಯಿ ಆಗುತ್ತದೆ. ಪ್ರತಿ ಮೂರು ವರ್ಷಕ್ಕೊಮ್ಮೆ ರಿವಿಜನ್ ಮಾಡುತ್ತಾರೆ. ಆದರೆ ಆ ಬೆಲೆ ಮಾರ್ಕೆಟ್‌ನಲ್ಲಿ ಏರಲಿ, ಬಿಡಲಿ ಪ್ರತಿ ಮೂರು ವರ್ಷಕ್ಕೊಮ್ಮೆ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಬೆಲೆಯಲ್ಲಿ ಏರಿಕೆ ಮಾಡುತ್ತಾರೆ.

ಅಧ್ಯಕ್ಷರು : ರೇಟ್ ಕಡಿಮೆ ಆಗಿದ್ದರೆ;

ಶ್ರೀ ಜಗದೀಶ್ ಶೆಟ್ಟರ್ : ರೇಟ್ ಕಡಿಮೆ ಮಾಡುವುದಿಲ್ಲ. ರೇಟ್ ಏರಿಕೆ ಮಾಡುತ್ತಾರೆ. ಮಾರ್ಕೆಟ್ ಬೆಲೆ ಕಡಿಮೆಯಾಗಿದ್ದರೂ ಸಹ ಅವರು ಕಡಿಮೆ ಮಾಡುವುದಿಲ್ಲ. ಬೇಕಾದರೆ ಚಾರ್ಜ್ ತರಿಸಿ ನೋಡಿ. ಪ್ರತಿ ಮೂರು ವರ್ಷಕ್ಕೊಮ್ಮೆ ಕಡ್ಡಾಯವಾಗಿ ಏರಿಸುತ್ತಾರೆ. ಈಗ ರಿಜಿಸ್ಟ್ರೇಷನ್ ಡಿಪಾರ್ಟ್‌ಮೆಂಟ್‌ನಿಂದ ಡೈರೆಕ್ಷನ್ಸ್ ಬರಲಿಕ್ಕೆ ಆರಂಭವಾಗುತ್ತದೆ. ಅದರ ಪ್ರಕಾರ ನಿಮಗೆ ರೆವಿನ್ಯೂ ಕಡಿಮೆ ಆಗುತ್ತಿದೆ. ಸ್ಟಾಂಪ್ ಡ್ಯೂಟಿ ಕಡಿಮೆಯಾಗುತ್ತಿದೆ ಎಂದು. ಆದ್ದರಿಂದ ಅದಕ್ಕೆ ಪ್ರತಿಯಾಗಿ ಪ್ರತಿ ವರ್ಷವೂ ಪ್ರಾಪರ್ಟಿಯ ಬೆಲೆ ಏರಿಸುತ್ತಿದ್ದಾರೆ. ಅದರ ಬೆಲೆ ಈ ವರ್ಷ 2 ಲಕ್ಷ ರೂ ಇದ್ದರೆ ಮುಂದಿನ ವರ್ಷ 3 ಲಕ್ಷ ರೂ ಆಗುತ್ತದೆ. ಮತ್ತೊಂದು ಸಲ ಮೂರೂವರೆ ಲಕ್ಷ ರೂ ಇವತ್ತು ಅದರ ಬೆಲೆ ಮಾರ್ಕೆಟ್‌ನಲ್ಲಿ ಏನಿದೆ ವಾಸ್ತವಿಕ ಕಿಮ್ಮತ್ತು ಏನಿದೆ ಅದರ ಬಗ್ಗೆ ಏನೂ ವಿಚಾರ ಮಾಡುವುದಿಲ್ಲ. ಅವರ ಡೈರೆಕ್ಷನ್ ಬೆಲೆ ಏರಿಕೆ ಬಗ್ಗೆ ಟ್ಯಾಕ್ಸ್ ಬಗ್ಗೆ ಇಲ್ಲಿಯವರೆಗೆ ಎಲ್ಲಾ ಕಡೆ ಒಂದೇ ಸಿಸ್ಟಮ್ ಇದೆ. ರೇಟಬಲ್ ವ್ಯಾಲ್ಯೂ ಇದೆ. ಬಾಡಿಗೆ ಎಷ್ಟು ಬರುತ್ತದೆ. ಆ ಒಂದು ವರ್ಷದ ಬಾಡಿಗೆಯ ಬೆಲೆ ಇರುತ್ತದೆ ಅದರ ಮೇಲೆ ಪರ್ಸೆಂಟೇಜ್ ಕ್ಯಾಲ್ಯೂಕಲೇಷನ್ ನೀವು ಮಾಡುತ್ತಿದ್ದೀರಿ. ಅದು ರೀಸನಬಲ್, ಅದನ್ನು ನೀವು ಮಾಡಿದ್ದರೆ ಅದನ್ನು ನಾವು ಸ್ವಾಗತ ಮಾಡುತ್ತಿದ್ದೆವು. ಅದು ಬಿಟ್ಟು ನೀವು ಕ್ಯಾಪಿಟಲ್ ವ್ಯಾಲ್ಯೂ ಮೇಲೆ ಮಾಡಿದರೆ ಅದನ್ನು ಹೇಗೆ ಸ್ವಾಗತ ಮಾಡುವುದು? ಇದರ ಬಗ್ಗೆ ಹಿಂದೆ ಚರ್ಚೆ ಮಾಡಿದ್ದೇವೆ. ಇದರ ಮೇಲೆ ತಿದ್ದುಪಡಿಯನ್ನು ತಂದರೆ ನಾವು ಸ್ವಾಗತ ಮಾಡುತ್ತೇವೆ. ಅದಕ್ಕೆ ನೀವು ತಯಾರಿಲ್ಲ. ಬೆಂಗಳೂರಿನಲ್ಲಿ ಅದೇ ಸಿಸ್ಟಂ ಇದೆ. (ರೇಟೇಬಲ್ ವ್ಯಾಲ್ಯೂ), ಕ್ಯಾಪಿಟಲ್ ವ್ಯಾಲ್ಯೂ ಬೇರೆ ನಗರಕ್ಕೆ ಇವತ್ತು ಬೆಂಗಳೂರಿನಲ್ಲಿದ್ದಂತಹ ಆಸ್ತಿ ಬೆಲೆ ಎಷ್ಟು? ಪಕ್ಕದಲ್ಲಿರುವ ಪುರಸಭೆಗಳಲ್ಲಿರುವ ಆಸ್ತಿ ಬೆಲೆ ಎಷ್ಟು? ಇವತ್ತು ಬೆಳಗಾಂ, ಹುಬ್ಬಳ್ಳಿ, ಧಾರವಾಡ, ಮಂಗಳೂರಿನಲ್ಲಿರುವ ಆಸ್ತಿ ಬೆಲೆ ಎಷ್ಟು? ಅದನ್ನು ನಾವು ಬೆಂಗಳೂರಿನ ಬೆಲೆಯೊಂದಿಗೆ ಕಂಪೇರ್ ಮಾಡಲಿಕ್ಕಾಗುತ್ತದೆಯೇ? ಇಲ್ಲಿ ಕೋಟಿ ರೂಪಾಯಿ ಬೆಲೆ ಆಸ್ತಿ ಅಲ್ಲಿ 10 ಲಕ್ಷ ರೂಪಾಯಿ ಆಗುತ್ತದೆ. ಆದ್ದರಿಂದ ಈ ವೇರಿಯೇಷನ್ ಬಗ್ಗೆ ಮಾನ್ಯ ಶಿವಕುಮಾರ್‌ರವರಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಈ ಕ್ಯಾಪಿಟಲ್ ವ್ಯಾಲ್ಯೂ ಏಷನ್ ಅನ್ನುವುದನ್ನು ತೆಗೆಯಿರಿ, on the basis of the ratable value, you have to fix the calculation of the tax. ಅಂದಾಗ ಮಾತ್ರ ಇದನ್ನು ನಾವು ಸ್ವಾಗತ ಮಾಡಲಿಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಗ್ರಾಹಕರಿಗೆ ಇದರಿಂಧ ಶೋಷಣೆಯಾಗುತ್ತದೆ. ಇನ್ನೊಂದು ಪ್ರತಿ ವರ್ಷ ಸ್ವಯಂಘೋಷಿತ ತೆರಿಗೆಯ ಅರ್ಜಿಯನ್ನು ತುಂಬಿಕೊಡಬೇಕು. ಇದು ಹೊಸ ಕಾನೂನು ಪ್ರಕಾರ ನಡೆಯುತ್ತಿದೆ. ಇದು ಯಾವ ನ್ಯಾಯ? ನನಗೆ ಅರ್ಥವಾಗುತ್ತಿಲ್ಲ. ಒಬ್ಬ ನಾಗರೀಕನಿಗೆ ತನ್ನ ನಿತ್ಯದ ಜೀವನ ನಡೆಸಲಿಕ್ಕೆ, ಯಾವ ರೀತಿ ಉದ್ಯೋಗ ಮಾಡಬೇಕು. ಹಣ ಸಂಪಾದಿಸಬೇಕೆಂಬುದರ ಬಗ್ಗೆ ಚಿಂತನೆ ಮಾಡಲಿಕ್ಕೆ ಸಮಯ ಸಿಗುತ್ತಿಲ್ಲ. ಅದರಲ್ಲಿ ಈ ಅರ್ಜಿ ತುಂಬಲಿಕ್ಕೆ ವರ್ಷದಲ್ಲಿ ಎರಡು ತಿಂಗಳು ಅಡ್ಡಾಡಬೇಕು. ಬೇರೆ ಉದ್ಯೋಗವೇ ಇಲ್ಲ. ಪ್ರತಿ ವರ್ಷ ಫಾರಂ ತರಬೇಕು ತುಂಬಬೇಕು. ಇಲ್ಲದಿದ್ದರೆ ಅವನ ಮೇಲೆ ದಂಡ ಕಾನೂನು ರೀತ್ಯ ಕ್ರಮಗಳು ಜಾರಿಯಾಗುತ್ತವೆ. ಇವತ್ತು ಬೆಂಗಳೂರು

ಮಹಾನಗರಸಭೆಗೆ ಐದು ವರ್ಷಕ್ಕೊಮ್ಮೆ ಅರ್ಜಿ ತುಂಬಿಕೊಡಬೇಕೆಂದು ಕಾನೂನು ಇದೆ. ಉಳಿದವರು ಒಂದು ವರ್ಷಕ್ಕೊಮ್ಮೆ ಇದು ಯಾವ ನ್ಯಾಯ? ನೀವು ಐದು ವರ್ಷಕ್ಕೊಮ್ಮೆ ಅರ್ಜಿ ನೀಡಬೇಕೆಂದು ಮಾಡಿ, ಯಾರೂ, ಬೇಡವೆನ್ನುವುದಿಲ್ಲ. ಅದಕ್ಕೂ ನೀವು ತಯಾರಿಲ್ಲ. ಪ್ರತಿ ವರ್ಷ ಅರ್ಜಿ ತುಂಬುವುದು ಇದು ಬಹಳ ತಪ್ಪು ನಿರ್ಣಯವೆಂದು ನಾನು ಹೇಳುತ್ತೇನೆ. ಇವತ್ತು ಯಾವ ನಾಗರೀಕ ಈ ಸ್ವಯಂ ಘೋಷಿತ ತೆರಿಗೆಯನ್ನು ಅಡಾಪ್ಟ್ ಮಾಡಿಕೊಳ್ಳುತ್ತೇನೆ. ಇದು ನನಗೆ ಬಿಟ್ಟಿರುವಂತಹ ವಿಷಯ. ನನ್ನ ಚಾಯ್ಸ್ ನಾನು ಬೇಕಾದರೆ ಅದನ್ನು ಅಡಾಫ್ಟ್ ಮಾಡಿಕೊಳ್ಳುತ್ತೇನೆ. ಇಲ್ಲದಿದ್ದರೆ ಬೇಡ. ಇವತ್ತು ಬೇಡ ಎನ್ನುವವನು ಕರೆಕ್ಟ್ ಟ್ಯಾಕ್ಸ್ ತುಂಬುತ್ತಾನೋ ಅದರ ಎರಡೂವರೆ ಪಟ್ಟು ತುಂಬಿದರೆ ಅವನ ಕೆಲಸ ಮುಗಿಯಿತು. ಅವನಿಗೆ ಮತ್ತೆ ಸೆಲ್ಫ್ ಅಸೆಸ್‌ಮೆಂಟ್ ಟ್ಯಾಕ್ಸ್ ಬೆಂಗಳೂರಿನವರಿಗೆ ಬೇಕಾಗಿಲ್ಲ. ಬೇರೆ ಕಡೆ ಇರುವಂತಹ ಪುರಸಭೆ, ಮಹಾನಗರಸಭೆಗಳಲ್ಲಿರುವ ನಾಗರೀಕರು ಕಡ್ಡಾಯವಾಗಿ ಈ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಆ ವ್ಯಾಪ್ತಿಯೊಳಗಾಗಿ ತೆರಬೇಕು ಹಾಗಾದರೆ ಅವರಿಗೊಂದು ರೂಲ್, ಇವರಿಗೊಂದು ರೂಲ್ ಏಕೆ? ಬಿಟ್ಟುಬಿಡಿ, ಅವರವರ ಆಫಷನಲ್‌ಗೆ ಬಿಡಿ, ಹಾಗೆ ಒಂದು ತಿದ್ದುಪಡಿಯನ್ನು ಜಾರಿಗೆ ತರಬೇಕು. optional, choice it is left to the citizen. ಅದನ್ನು ನಾವು ಅಡಾಫ್ಟ್ ಮಾಡಬಹುದು. ಇಲ್ಲದಿದ್ದರೆ ಬಿಡಬಹುದು. ಅಡಾಫ್ಟ್ ಮಾಡಿದವರಿಗೆ ಯಾವೊಮದು ರೇಟೆಬಲ್ ವ್ಯಾಲ್ಯೂ ಏಷನ್ ಮಾಡುವುದು. ಅಡಾಫ್ಟ್ ಮಾಡದವರಿಗೆ ಎರಡೂವರೆ ಪಟ್ಟು ರೀಸನಬಲ್ ಮಾಡಿ, ಇವತ್ತೇನೂ ಟ್ಯಾಕ್ಸ್ ತುಂಬುತ್ತಿದ್ದಾನೆ. ಅದರ ಎರಡೂವರೆ ಪಟ್ಟು ಟ್ಯಾಕ್ಸ ತುಂಬುವ ಹಾಗೆ ತಿದ್ದುಪಡಿ ಮಾಡಿ. ಹೀಗಾಗಿ ಇದರ ಬಗ್ಗೆ ಹೆಚ್ಚು ಚಿಂತನೆಯಾಗಬೇಕಾಗಿದೆ. ಆದ್ದರಿಂದ ಈಗ ತಂದಿರುವ ಈ ಕಾನೂನು ಸರಿಯಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಸ್ವಯಂಘೋಷಿತ ತೆರಿಗೆಯಲ್ಲಿ ಖುಲ್ಲಾ ಜಾಗದ ಮೇಲೆ ತೆರಿಗೆ ಹಾಕುವುದನ್ನು ಸೇರಿಸಬೇಡಿ ಎಂದು ಎಲ್ಲಾ ಕಡೆಗಳಲ್ಲೂ ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ಈ ಖುಲ್ಲಾ ಜಾಗವನ್ನು ಆ ವ್ಯಾಪ್ತಿಯಿಂದ ತೆಗೆಯುತ್ತೇವೆಂದು ಒಪ್ಪಿಕೊಂಡಿದ್ದರು. ಆದರೆ ಇವತ್ತು ಏನು ಹೇಳಿದ್ದಾರೆಂದರೆ, "in clause (41A), for the words 'value of any buildings or lands or both' the words 'value of any building including any land occupied by it or vacant land or both' shall be substituted." ಮೊದಲು ಕಟ್ಟಡ ಅಥವಾ ಖುಲ್ಲಾ ಜಾಗ ಅನ್ನುವ ಬದಲಿಗೆ ಈಗ ಕಟ್ಟಡ ಇನ್‌ಕ್ಲೂಡಿಂಗ್ ಲ್ಯಾಂಡ್ ಎಂದು ಬಂದಿದೆ. ಅಂದರೆ ಅಳಿಯ ಅಲ್ಲ ಮಗಳ ಗಂಡ ಅನ್ನುವ ಹಾಗಿದೆ. ಹಿಂದಿನ ಕಾನೂನಿನಲ್ಲಿ ತಂದಂತಹ ಕ್ಲಾಸಿಗೆ ಇವತ್ತಿನ ತಿದ್ದುಪಡಿಯಲ್ಲಿ ಏನೂ ಬದಲಾವಣೆಯಾಗುತ್ತಿಲ್ಲ. ಇದಕ್ಕಿಂತ ಹೆಚ್ಚಿನ ಪರಿಣಾಮವನ್ನು ಬೀರುತ್ತಿದೆ. ಇವತ್ತು ಖಾಲಿಯಿರುವ ಜಾಗದಲ್ಲಿನ ಕಟ್ಟಡ, ಖಾಲಿಯಿರುವ ಜಾಗ, ಸುತ್ತಮುತ್ತಲಿನ ಜಾಗ ಎಲ್ಲವನ್ನೂ ಇದರಲ್ಲಿ ಸೇರಿಸಲಾಗುತ್ತಿದೆ. ಇದರಿಂದ ಹೋದ ಸಲಕ್ಕಿಂತ ಇನ್ನೂ ಹೆಚ್ಚಿನ ದುಷ್ಪರಿಣಾಮ ಬೀರುವಂತದ್ದಾಗುತ್ತಿದೆ. ಈ ವೆಕೆಂಟ್ ಲ್ಯಾಂಡ್ ಅನ್ನು ಕಾನೂನಿನ ವ್ಯಾಪ್ತಿಯಿಂದ ಹೊರಗಿಡಬೇಕೆಂದು ನಾವು ಏನು ಹೇಳಿದ್ದೆವು ಅದಕ್ಕೆ ಪೂರಕವಾಗಿ ಮಂತ್ರಿಗಳು ಇದನ್ನು ತಿದ್ದುಪಡಿ ಮಾಡಲಿಲ್ಲ. ಮತ್ತೆ ಇಲ್ಲಿ ಒಂದು ಪರ್ಸೆಂಟ್ ಅಂತ ಹೇಳಿದ್ದಾರೆ. ಮೊದಲು ಇಲಿ. 3 ಯಿಂದ 6 ಎಂದು ಇತ್ತು. The residential building and buildings other than commercial building. at such percentage..... ಇದು ಮೊದಲಿನ ಕ್ಲಾಸ್‌ನಲ್ಲಿದ್ದುದ್ದು, ಮೊದಲಿದ್ದ ಆಕ್ಟ್‌ನಲ್ಲಿ 0.3 ನಿಂದ 6 ವರೆಗೆ ಈ ವೆಕೆಂಟ್

ಲ್ಯಾಂಡ್‌ನ ವ್ಯಾಲ್ಯೂ ಏಷನ್ ಮಾಡಬೇಕೆಂದಿತ್ತು. ಆದರೆ ಈಗ ಅವರು 1 ರಿಂದ 2 ಎಂದು ತಿದ್ದುಪಡಿ ಮಾಡಲಾಗಿದೆ. ಆದರೆ ಕ್ಷೇತ್ರದ ವಿಸ್ತೀರ್ಣ ಬಹಳ ಕಡಿಮೆ ಇಟ್ಟಿದ್ದಾರೆ. ಹೀಗಾದರೆ ಆ ತೆರಿಗೆದಾರರಿಗೆ ಲಾಭವಾಗುವ ಸಾಧ್ಯತೆ ಇಲ್ಲ. ಇದನ್ನು ಸರಿಪಡಿಸಬೇಕು. ಈ ಖಾಲಿ ಜಾಗದ ಬಗ್ಗೆ ಹೇಳುವುದಾದರೆ, ಕೆಲವು ಕಡೆಗಳಲ್ಲಿ ಅಂದರೆ ದಕ್ಷಿಣ ಕನ್ನಡ ಇರಬಹುದು. ಉತ್ತರ ಕನ್ನಡ ಜಿಲ್ಲೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಇರಬಹುದು ಅಲ್ಲಿ ಖಾಲಿಜಾಗವೇ ಅರ್ಧ ಎಕರೆ ಜಮೀನಿನಷ್ಟಿರುತ್ತದೆ. ಹೀಗಾದರೆ ಅವರ ಮೇಲೆ ತೆರಿಗೆ ಬಹಳಷ್ಟು ಬರುತ್ತದೆ. ಖಾಲಿ ಜಾಗದಲ್ಲಿ ಕೆಲವು ಕಡೆ ಬಾವಿ, ಹೊಂಡ, ಬಂಡೆ ಕಲ್ಲು, ಖಾಸಗಿ ರಸ್ತೆಗಳು, ಕೆರೆ, ಕಾಲುದಾರಿಗಳು, ಹೊಲಕ್ಕೆ ಹೋಗುವಂತಹ ರಸ್ತೆಗಳು, ತೆಂಗಿನ ಮತ್ತು ಅಡಿಕೆ ಮರಗಳು ಇವೆಲ್ಲಾ ಅದರಲ್ಲಿ ಸೇರಿರುತ್ತವೆ. ಹೀಗಾಗಿ ಅದರಿಂದ ಇನ್ನೂ ಹೆಚ್ಚು ತೊಂದರೆಯನ್ನು ನಮ್ಮ ನಾಗರಿಕರೂ ಅನುಭವಿಸುವಂತಹ ಸಾಧ್ಯತೆಯಿದೆ. ಇವತ್ತು ಬೆಂಗಳೂರಿನಲ್ಲಿ ಫೈನಾನ್ಸ್ ಕಮಿಟಿಗೆ ಅಪೀಲ್ ಮಾಡುತ್ತಾರೆ. ಏನಾದರೂ ಹೆಚ್ಚು ಕಡಿಮೆ ಇದ್ದರೆ ಫೈನಾನ್ಸ್ ಕಮಿಟಿಗೆ ಅಪೀಲ್ ಮಾಡುತ್ತಾರೆ. ಇವತ್ತು ಡಿಸ್ಟ್ರಿಕ್ಟ್ ಕೋರ್ಟ್‌ಗೆ ಅಪೀಲು ಕೊಟ್ಟಿದ್ದಾರೆ. ಅಲ್ಲಿ ಮುನಿಸಿಪಾಲಿಟಿಯಲ್ಲಿ, ಕಾರ್ಪೋರೇಷನ್‌ನಲ್ಲಿ ಒಂದು ಟ್ಯಾಕ್ಸ್ ಕಮಿಟಿ ಇದೆ. ಕಮೀಷನರ್ ಇದ್ದಾರೆ. ಅವರಿಗೆ ಅಪೀಲ್ ಹೋಗುವ ಹಾಗಿಲ್ಲ. ಈ ಸ್ವಯಂಘೋಷಿತ ತೆರಿಗೆಯಲ್ಲಿ ಲೆಕ್ಕಾಚಾರದಲ್ಲಿ ಸ್ವಲ್ಪ ಏನಾದರೂ ಹೆಚ್ಚುಕಡಿಮೆ ಆದರೆ ಅದಕ್ಕೆ ಆಗ್ರೀವ್ಡ್ ಪಾರ್ಟಿ ಡಿಸ್ಟ್ರಿಕ್ಟ್ ಕೋರ್ಟ್‌ಗೆ ಅಪೀಲ್ ಹೋಗಬೇಕು. ಬೇರೆ ಎಲ್ಲೂ ಇಲ್ಲ. ಕಾರ್ಪೋರೇಷನ್ ಲೆವೆಲ್‌ನಲ್ಲಿ ಎಲ್ಲೂ ಇಲ್ಲ. ನೇರವಾಗಿ ಡಿಸ್ಟ್ರಿಕ್ಟ್ ಕೋರ್ಟ್‌ಗೆ ಹೋಗಬೇಕು. ಆದರೆ ಬೆಂಗಳೂರಿನಲ್ಲಿ ತೆರಿಗೆ ಸಮಿತಿ ಅಂತ ಇದೆ. ಅಲ್ಲಿಗೆ ಹೋಗಿ ಅಪ್ರೋಚ್ ಆಗಬಹುದು. ಹೀಗೆ ಬೇರೆಬೇರೆ ಫೋರಮ್‌ಗಳ ಇವೆ. ಅಲ್ಲಿಗೆ ಬೇಕಾದರೆ ಹೋಗಬಹುದು. ಆದರೆ ಇಲ್ಲಿ ಹಾಗೆ ಇಲ್ಲ. ಹಾಗಾಗಿ ಇದರಿಂದ ಬಹಳಷ್ಟು ತೊಡಕುಗಳು ಉಂಟಾಗಿ ಇಲ್ಲಿಟರೇಟ್ ಪರ್ಸನ್ಸ್‌ಗೆ ಫಾರಮ್‌ಗಳನ್ನು ತುಂಬುವುದು ಮತ್ತು ಪ್ರತಿವರ್ಷ ಇದನ್ನೆಲ್ಲಾ ಮಾಡುವಂಥಾದ್ದು ಏನಿದೆ ಇದರಲ್ಲಿ ತೊಂದರೆ ಆಗುವಂಥಾದ್ದು ಇದೆ. ಹೀಗಾಗಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಬೇಕು ಎನ್ನುವಂಥಾದ್ದು ಮತ್ತು ಇನ್ನೊಂದು ಏನೆಂದರೆ ಬೆಂಗಳೂರು ಮಹಾನಗರ ಸಭೆ ಇರಬಹುದು ಮತ್ತು ಇನ್ನಿತರ ನಗರ ಪಟ್ಟನ ಇರಬಹುದು. ನೀವು ಎ.ಬಿ.ಸಿ.ಡಿ ಎಂದು ಕ್ಯಾಟಗರಿ ಮಾಡಬೇಕಾಗಿತ್ತು. ಇವತ್ತು ಬೆಂಗಳೂರು ಮಹಾನಗರಸಭೆಗೆ ಇರುವಂತಹ ಕ್ಷೇತ್ರ ಇಲ್ಲಿ ಇರುವಂತಹ ವಾತಾವರಣ, ಇಲ್ಲಿ ಇರುವಂತಹ ವ್ಯಾಲ್ಯು ಆಫ್ ಪ್ರಾಪರ್ಟಿ ಅದಕ್ಕೂ ಒಂದೇ ಕ್ಯಾಟಗರಿ ಮತ್ತು ಇವತ್ತು ಮಂಗಳೂರು ಮಹಾನಗರಸಭೆ, ಗುಲ್ಬರ್ಗಾಕ್ಕೂ ಒಂದೇ ಮತ್ತು ಹುಬ್ಬಳ್ಳಿ–ಧಾರವಾಡ ಮಹಾನಗರಸಭೆ ಹಾಗೂ ಬೆಳಗಾವಿಗೂ ಕೂಡ ಒಂದೇ ಆಗುತ್ತದೆ. ಹಾಗಾದರೆ ಇವೆಲ್ಲವೂ ಅಲ್ಲಿದ್ದು ಪ್ರಾಪರ್ಟಿ ವ್ಯಾಲ್ಯುಯೇಶನ್ ಮತ್ತು ಈ ಟ್ಯಾಕ್ಸ್ ಇಂಪೋಸಿಶನ್ ಇದೆಲ್ಲಾ ಡಿಫರೆಂಟ್ ಆಗುತ್ತದೆ. ಇದನ್ನು ಕನ್ಸಿಡರೇಶನ್ ಮಾಡಿಲ್ಲ. ಹೀಗಾಗಿ ಇದೊಂದು ಅವೈಜ್ಞಾನಿಕವಾದಂಥ ಬಿಲ್‌ನ್ನು ತೆಗೆದುಕೊಂಡು ಬಂದಿದ್ದಾರೆ. ಇದರಲ್ಲಿ ಇನ್ನೂ ಹೊಸದಾಗಿ ಸೇರಿಸಿದ್ದಾರೆ. ಆದರೆ ಬಗ್ಗೆ ಮಾನ್ಯ ರಾಮದಾಸ್ ಅವರು ಹೆಚ್ಚಿನ ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ. ಇದು ಒಂದು ಅವೈಜ್ಞಾನಿಕವಾದಂಥ, ಜನವಿರೋಧಿಯಾದಂಥ, ಕರಾಳವಾದಂಥ ಬಿಲ್. ಕೆಲವೊಂದು ನಾವೇನು ಸಲಹೆಸೂಚನೆಗಳನ್ನು ಕೊಟ್ಟಿದ್ದೇವೆ. ಅದನ್ನು ಸೇರಿಸಿ ತೆಗೆದುಕೊಂಡು ಬನ್ನಿ ಆಗ ನಾವು ಇದನ್ನು ಸ್ವಾಗತ ಮಾಡುತ್ತೇವೆ. ಆಗ ಎಲ್ಲರೂ ಕೂಡಿ ಇದನ್ನು ಪಾಸ್ ಮಾಡೋಣ. ಈ ತಿದ್ದುಪಡಿ ಮಾಡುವುದಕ್ಕೆ

ನೀವು ಬೇಕಾದರೆ ಶಾಸಕರು ಮತ್ತು ಜನಪ್ರತಿನಿಧಿಗಳ ಒಂದು ಸಭೆಯನ್ನು ಕರೆಯಿರಿ. ಎಲ್ಲರೂ ಸೇರಿ ಪ್ರತ್ಯೇಕವಾಗಿ ಇದರ ಬಗ್ಗೆ ಚರ್ಚೆ ಮಾಡೋಣ. ಈ ಸಂಸ್ಥೆಗಳಿಗೂ ಹೆಚ್ಚಿನ ಟ್ಯಾಕ್ಸ್, ರೆವಿನ್ಯೂ ಬೇಕು. ಅದಕ್ಕಾಗಿ ಇದನ್ನು ಸುಲಭ ರೀತಿಯಲ್ಲಿ ಸರಳ ರೀತಿಯಲ್ಲಿ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ತೆಗೆದುಕೊಂಡು ಬನ್ನಿ. ನಿನ್ನೆ ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಪಂಚಾಯತ್‌ರಾಜ್ ಆ್ಯಕ್ಟ್‌ಗೆ ತಿದ್ದುಪಡಿಯನ್ನು ತೆಗೆದುಕೊಂಡು ಬಂದರು. ಆದು ಸರ್ವಾನುಮತದಿಂದ ಪಾಸ್ ಆಯಿತು. ಅದಕ್ಕೆ ಒಂದು ಜಂಟಿ ಸದನ ಸಮಿತಿಯನ್ನು ಮಾಡಿದ್ದರು. ಅಲ್ಲಿ ಸಲಹೆ ಸೂಚನೆಗಳನ್ನು ಕೇಳಿಕೊಂಡು ನಂತರ ಒಂದು ಪರಿಪೂರ್ಣವಾದಂಥ ಕಾನೂನನ್ನು ತೆಗೆದುಕೊಂಡು ಬಂದರು. ಅಧಿಕಾರ ವಿಕೇಂದ್ರೀಕರಣದಲ್ಲಿ ಯಾವರೀತಿ ಗ್ರಾಮಸಭೆಗಳಿಗೆ ಅಧಿಕಾರ ಕೊಡಬೇಕು ಎನುವುದರ ಬಗ್ಗೆ ಚರ್ಚೆಮಾಡಿ ಸಮಗ್ರವಾದಂಥ ಬಿಲ್ಲನ್ನು ಅವರು ತೆಗೆದುಕೊಂಡು ಬಂದರು. ಅದನ್ನು ನಾವು ಪಾಸ್ ಮಾಡಿಕೊಟ್ಟೆವು. ಅದೇರೀತಿ ಇದು ಇಡೀ ರಾಜ್ಯದಲ್ಲಿ ಜಲಂತವಾಗಿರುವ ಸಮಸ್ಯೆ. ನಾಳೆ ಇದು ನಿಮಗೆ, ಸರ್ಕಾರಕ್ಕೆ ಮಾರಕವಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ ಇದನ್ನು ನೀವು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಇದೇನೂ ಸಣ್ಣ ವಿಚಾರ ಅಲ್ಲ. ಇಡೀ ರಾಜ್ಯದಲ್ಲಿ ಬೇರೆಬೇರೆ ಕಡೆ ಹೋರಾಟಗಳು ನಡೆಯುತ್ತಿವೆ ಮತ್ತು ನಾಗರೀಕರಲ್ಲಿ ಆಕ್ರೋಶ ಇದೆ. ಆದ್ದರಿಂದ ಇದರ ಬಗ್ಗೆ ಕುಳಿತು ಚರ್ಚೆ ಮಾಡೋಣ. ಇದಕ್ಕೆ ಎಲ್ಲಿಯಾದರೂ ಒಂದು ಸಭೆಯನ್ನು ಕರೆಯಿರಿ. ಯಾರ್‍ಯಾರಿಗೆ ಇದರ ಬಗ್ಗೆ ಆಸಕ್ತಿ ಇದೆ ಅವರ ಸಲಹೆ–ಸೂಚನೆಗಳನ್ನು ತೆಗೆದುಕೊಂಡು ಅಮೂಲಾಗ್ರವಾದ ಬದಲಾವಣೆಯನ್ನು ತೆಗೆದುಕೊಂಡು ಬರಬೇಕು. ಇದೇರೀತಿ ನೀವು ಈ ತಿದ್ದುಪಡಿಯನ್ನು ತೆಗೆದುಕೊಂಡು ಬಂದರೆ ಇದು ಒಂದು ಕರಾಳವಾದಂಥ ಮಸೂದೆಯಿಂದ ನಾನು ಹೇಳುತ್ತಿದ್ದೇನೆ. ಆದ್ದರಿಂದ ಇದನ್ನು ಹಿಂದಕ್ಕೆ ತೆಗೆದುಕೊಂಡು ಇನ್ನೂ ಹಲವಾರು ವಿಷಯಗಳನ್ನು ಸೇರಿಸಿ ಹೊಸದಾದ ಬಿಲ್‌ನ್ನು ತೆಗೆದುಕೊಂಡು ಬನ್ನಿ. ಆಗ ಎಲ್ಲರೂ ಕುಳಿತುಕೊಂಡು ಇದನ್ನು ಪಾಸ್ ಮಾಡೋಣ. ನಮ್ಮ ಸಂಸ್ಥೆಗಳು ಬದುಕಬೇಕು. ಆ ರೀತಿಯಲ್ಲಿ ಈ ಕಾನೂನನ್ನು ಮಾಡಿಕೊಡೋಣ. ಅದಕ್ಕಾಗಿ ಮಾನ್ಯ ಶಿವಕುಮಾರ್ ಅವರು ದಯವಿಟ್ಟು ಈ ಬಿಲ್‌ನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮತ್ತು ಹೊಸದಾದ ಇನ್ನೂ ಕೆಲವು ಸಲಹೆ–ಸೂಚನೆಗಳನ್ನು ಇಟ್ಟುಕೊಂಡು ಹೊಸದಾದಂಥ ಬಿಲ್‌ನ್ನು ತೆಗೆದುಕೊಂಡು ಬರಬೇಕು ಎನ್ನುವಂತಹ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಮತ್ತು ಇದರ ಬಗ್ಗೆ ಅವರು ತಕ್ಷಣ ಸ್ಪಂದನ ಕೊಡಬೇಕು ಎನ್ನುವಂತಹ ವಿಚಾರವನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಬಿ. ಸೋಮಶೇಖರ್ (ಮಳವಳ್ಳಿ)** : ಮಾನ್ಯ ಸಭಾಧ್ಯಕ್ಷರೆ, ಏನು ತಿದ್ದುಪಡಿಯನ್ನು ತಂದಿದ್ದಾರೆ. ಇದರ ಉದ್ದೇಶಗಳಲ್ಲಿ ನಗರಪ್ರದೇಶಗಳಲ್ಲಿ ವೈಜ್ಞಾನಿಕವಾಗಿ ಟ್ಯಾಕ್ಸ್ ಅಸೆಸ್‌ಮೆಂಟ್ ಆಗಬೇಕು ಎನ್ನುವ ಒಂದು ತಾತ್ವಿಕ ನಿಲುವನ್ನು ನಾನು ಒಪ್ಪುತ್ತೇನೆ. ಆದರೆ ಕೆಲವು ಅನುಮಾನಗಳು ಇಲ್ಲಿ ಬರುತ್ತವೆ. ಇಲ್ಲಿ ಒಂದೆರಡು–ಮೂರು ವಿಚಾರಗಳು – to dispense with requiement of sanction of the Government to levy tax ಇದನ್ನು ಒಪ್ಪಿಕೊಳ್ಳಬಹುದು. ಡಿಸೆಂಟ್ರಲೈಸ್ ಮಾಡತಕ್ಕಂಥಾದ್ದು ಸರ್ಕಾರಕ್ಕೆ ಎಲ್ಲಾ ಬರಬಾರದು ಎಂಬುದನ್ನು ಒಪ್ಪಿಕೊಳ್ಳೋಣ. To reduce the rate of property tax on vacant land from the existing rate of minimum... several objections...ಇದು ಆಗಬಹುದು. ಮತ್ತೆ ಇನ್ನೊಂದು to provide

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

for exemption from levy of property tax in respect of places of public worship, choultries for charitable purposes. ಅಂದರೆ ಚೌಲ್ಟ್ರೀಸ್ ಅಂತ ಇಟ್ಟುಕೊಂಡು ಮದುವೆಗಳಿಗೆ ಕೊಟ್ಟರೆ ನೀವು ಅದಕ್ಕೆ ಟ್ಯಾಕ್ಸ್ ಹಾಕಬಾರದು ಎನ್ನತಕ್ಕಂಥಾದ್ದು ಏನಿದೆ, ಏನೋ ಚಾರಿಟೆಬಲ್ ಉದ್ದೇಶಕ್ಕೆ ಕೊಟ್ಟರೆ ಹಾಕಬಹುದು. ಆದರೆ ಇದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. If you exempt the choultries from collecting the tax, that will not be proper. ಆಮೇಲೆ ಇನ್ನೊಂದು ನಾನೂ ಸಹ ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ...

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಮಂತ್ರಿ) : ಸೋಮಶೇಖರ್‌ರವರೆ, ಅದು ಮುಂದೆ ಬರುತ್ತದೆ. ಇದು ಮುನಿಸಿಪಾಲಿಟಿಯದ್ದು. ಇದು ಕಾರ್ಪೊರೇಷನ್‌ಗೆ ಸಂಬಂಧಪಟ್ಟಿದ್ದು ಅದಕ್ಕೆ ಮುಂಚೆಯೇ ಇರುವಂತಹ ಬಿಲ್.

ಶ್ರೀ ಬಿ. ಸೋಮಶೇಖರ್ : ಪ್ರಾಪರ್ಟಿ ಟ್ಯಾಕ್ಸ್ ಬಗ್ಗೆ ಇದನ್ನು ವೈಜ್ಞಾನಿಕವಾಗಿ ಮಾಡತಕ್ಕಂಥಾದ್ದಕ್ಕೆ ನನ್ನ ಸಂಪೂರ್ಣವಾದಂಥ ಸಹಮತ ಇದೆ. ಈಗ ನಾವು ಪ್ರಾಪರ್ಟಿ ಟ್ಯಾಕ್ಸ್‌ಗಳ ಮೇಲೆ ಏನು ಸಬ್‌ರಿಜಿಸ್ಟ್ರಾರ್ ಅವರ ಗೈಡ್‌ಲೈನ್ಸ್ ಮೇಲೆ ನಾವು ರಿಜಿಸ್ಟ್ರೇಶನ್ ಮಾಡುತ್ತೇವೆ. ನಾನು ಇಲ್ಲಿ ಹೇಳುವುದೇನೆಂದರೆ ಸಬ್‌ರಿಜಿಸ್ಟ್ರಾರ್ ಗೈಡ್‌ಲೈನ್ಸ್ ವ್ಯಾಲ್ಯೂ ಅಂದರೆ ಎರಡು-ಮೂರು ವರ್ಷ ಆಗುತ್ತದೆ ಎನ್ನತಕ್ಕಂಥದ್ದು. ಈಗ ನಮ್ಮ ಸರ್ಕಾರ ಇದ್ದಾಗ ನಿಮ್ಮ ಅಧಿಕಾರಿಗಳೇ ನಮ್ಮ ಐ.ಜಿ.ಆರ್. ಆಗಿದ್ದರು. ಆವಾಗ ನಾವು ತಿದ್ದುಪಡಿಯನ್ನು ತಂದು ಗೈಡೆನ್ಸ್ ವ್ಯಾಲ್ಯೂವನ್ನು ಎರಡುವರ್ಷ-ಮೂರು ವರ್ಷ ಅಂತ ಇದ್ದರೂನು ತಾಲ್ಲೂಕು ಮಟ್ಟದಲ್ಲಿ ಈ ಗೈಡೆನ್ಸ್ ವ್ಯಾಲ್ಯುಗೆ ಪ್ರಪೋಸಲ್ ಕೊಟ್ಟು ಅದರ ಅಪ್ರೂವಲ್‌ಗೋಸ್ಕರ ಎರಡು-ಮೂರು ವರ್ಷ ಸರ್ಕಾರದಲ್ಲಿ ಕಾಯುತ್ತಿದ್ದುದು ನಿಜ. ಸರ್ಕಾರ ಅಪ್ರೂವಲ್ ಕೊಡುವ ತನಕ ಅನೇಕ ಏರುಪೇರುಗಳು ಆಗುತ್ತಾ ಇದ್ದವು. ಅದಕ್ಕೆ ನಮ್ಮ ಸರ್ಕಾರ ಇದ್ದಾಗ ನಾವು ಏನು ಮಾಡಿದೆವು ಎಂದರೆ they must dicide at their level as and when it is required depending upon the value of the property. You can reduce or you can increase. ನೀವು ಅಲ್ಲೇ ಮೀಟಿಂಗ್ ಸೇರಿ, ಅಲ್ಲಲ್ಲೇ ನೀವು ಡಿಸೈಡ್ ಮಾಡಿ ನೋಟೀಸ್ ಬೋರ್ಡ್‌ಗೆ ಹಾಕಬೇಕು. ಆರು ತಿಂಗಳು ಇದ್ದರೂ ಒಂದು ಸಲ ಬದಲಾವಣೆ ಮಾಡಬಹುದು. ಎರಡು ತಿಂಗಳಿಗೆ ಬದಲಾವಣೆ ಮಾಡಬಹುದು. ಯಾವ್ಯಾವ ಸಂದರ್ಭದಲ್ಲಿ ಮಾರ್ಕೆಟ್ ವ್ಯಾಲ್ಯೂನಲ್ಲಿ ಏನೇನು ಏರುಪೇರಾಗಿದೆ ಅದನ್ನು ಅಲ್ಲೇ ಸ್ಥಳೀಯ ಸಮಿತಿಗಳು ಕುಳಿತು ಚರ್ಚೆ ಮಾಡಿ ಅನೌನ್ಸ್ ಮಾಡಬಹುದು ಎನ್ನತಕ್ಕಂಥ ಸರಳೀಕರಣವನ್ನು ನಾವು ಮಾಡಿದ್ದೆವು. ಅದನ್ನು ನೀವು ಸರಿಯಾಗಿ ಅನುಷ್ಠಾನಕ್ಕೆ ತಂದರೆ ಅದು ಗೈಡೆನ್ಸ್ ವ್ಯಾಲ್ಯುವನ್ನು ನೀವು ತೆಗೆದುಕೊಳ್ಳಬಹುದು. ಮತ್ತೆ ಇನ್ನೊಂದು ಬೆಂಗಳೂರು ಮೆಟ್ರೊಪಾಲಿಟನ್ ಏರಿಯಾ ಮತ್ತು ಬೇರೆ ಅರ್ಬನ್ ಏರಿಯಾಗೆ ವ್ಯತ್ಯಾಸ ಮಾಡತಕ್ಕಂಥಾದ್ದು ಸರಿಯಲ್ಲ. ಏಕೆಂದರೆ ಎರಡು ಅರ್ಬನ್ ಬಾಡಿಗಳೂ ಒಂದೇ. Both are urban bodies under the Urban Municipality Act. ಆದ್ದರಿಂದ ನೀವು ಅದೇಬೇರೆ ಇದೇ ಬೇರೆ ಎಂದು ಹೇಳತಕ್ಕಂಥಾದ್ದು ಸರಿಯಲ್ಲ. Whatever policies you adopt, it should be applicable to the entire state whether it is metropolitan area, municipal area or ಬೇರೆ ಯಾವುದಾದರೂ ಕಾರ್ಪೊರೇಷನ್ ಇರಬಹುದು ಅದನ್ನು ನೀವು ಮಾಡಬೇಕು ಮತ್ತು ಇನ್ನೊಂದು

ಈ ಖಾಲಿ ಜಾಗಕ್ಕೂ ನೀವು ಟ್ಯಾಕ್ಸ್ ಹಾಕತಕ್ಕಂಥಾದ್ದು ಸರಿಯಲ್ಲ. ಒಂದು ಕಡೆ ನೀವೇ ಸ್ವಲ್ಪ ಸ್ಥಳವನ್ನು ಬಿಡಬೇಕೆಂದು ಹೇಳುತ್ತೀರಿ. ಹಾಗೆ ಬಿಟ್ಟು ಮರ, ಗಿಡ, ಹಣ್ಣುಹಂಪಲುಗಳನ್ನು ಬೆಳೆಸಿರುತ್ತಾರೆ. ನೀವು ಅದನ್ನೂ ಖಾಲಿ ಜಾಗ ಅಂತ ಹೇಳಿ ಅದಕ್ಕೂ ಕೂಡ ಟ್ಯಾಕ್ಸ್ ಹಾಕುತ್ತಾ ಹೋದರೆ ಅದು ದೊಡ್ಡ ಹೊರೆಯಾಗುತ್ತದೆ ಆದ್ದರಿಂದ ಅದನ್ನು ಕೈಬಿಡಬೇಕಾಗುತ್ತದೆ. ಮತ್ತೆ ಇನ್ನೊಂದು ನಮ್ಮ ಸರ್ಕಾರ ಇದ್ದಾಗ ನಾವು ಚಿಂತನೆ ಮಾಡಿದ್ದೆವು. ನಿಮ್ಮ ರವಿಕುಮಾರ್ ಅವರು ಮತ್ತು ನಾವೆಲ್ಲರೂ ಬಹಳ ಪ್ರಯತ್ನ ಮಾಡಿದೆವು. ಅದೇನೆಂದರೆ – throughout State micro level evaluation of property should be done on a scientific basis ಎಂದು ಯಾವುದಾದರೂ ಒಂದು ಸಂಸ್ಥೆಗೆ ಕೊಟ್ಟು ಪ್ರತಿಯೊಂದು ಪ್ರಾಪರ್ಟಿಗೆ ರೋಡ್‌ವೈಸ್, ಸ್ಟ್ರೀಟ್‌ವೈಸ್ ಆಗಿ ಎಲ್ಲವನ್ನೂ ವೈಜ್ಞಾನಿಕವಾಗಿ ಅಸೆಸ್ ಮಾಡಿ ಇಷ್ಟು ಪ್ರಾಪರ್ಟಿ ವ್ಯಾಲ್ಯೂ ಎಂದು ಅದನ್ನು ಕಂಪ್ಯೂಟರೈಸ್ ಮಾಡಿ ಇಟ್ಟುಬಿಟ್ಟರೆ ಅದರ ಪ್ರಕಾರ ನೀವು ಟ್ಯಾಕ್ಸ್ ಕಲೆಕ್ಟ್ ಮಾಡಬಹುದು. ರಿಜಿಸ್ಟ್ರೇಶನ್ ಮಾಡಬಹುದು. ಇದಕ್ಕೆಲ್ಲಾ ಪ್ರಯತ್ನ ನಡೆಸಿದ್ದೆವು. ಇದಕ್ಕೆ ಗುಜರಾತಿನಿಂದ ಯಾರನ್ನೋ ಕರೆಸಿಕೊಂಡಿದ್ದೆವು. ಅದನ್ನು ನೀವು ಮಾಡಬಹುದು. ಇದರಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತದೆ. ಆದರೆ ಏನಾಗಿದೆ ಎಂದರೆ ಅವರು ಬೇಕಾದಹಾಗೆಲ್ಲಾ ನಿಮ್ಮ ಇನ್‌ಸ್ಪೆಕ್ಟರ್‌ಗಳು ಒಂದೊಂದು ಕಡೆ ಒಂದೊಂದು ವ್ಯಾಲ್ಯುವನ್ನು ಫಿಕ್ಸ್ ಮಾಡುತ್ತಾರೆ. ಈಗ ಅವರೇ ಸೆಕ್ರೆಟರಿ ಇರುವುದರಿಂದ ಅವರು ಉತ್ತಮವಾದ ಅಧಿಕಾರಿ ಇದ್ದಾರೆ. ನಮ್ಮ ರಾಜ್ಯದ ಬೊಕ್ಕಸಕ್ಕೆ ಎಷ್ಟು ಹಣ ಬರಬಹುದು ಎಂದು ಯೋಚನೆ ಮಾಡಿ ಸ್ಟ್ರೀಮ್‌ಲೈನ್ ಮಾಡತಕ್ಕಂಥ ಥಿಂಕಿಂಗ್ ಅವರ ಹತ್ತಿರ ಇರುವುದನ್ನು ತೆಗೆದುಕೊಂಡು ಇವತ್ತು ನೀವು ಮೈಕ್ರೊ ಲೆವಲ್‌ನಲ್ಲಿ ವೈಜ್ಞಾನಿಕವಾಗಿ ಪ್ರತಿಯೊಂದು ಪ್ರಾಪರ್ಟಿಯನ್ನು ಅದು ಸ್ಟ್ರೀಟ್‌ವೈಸ್ ಇರಬಹುದು. ಸಬ್ ಸ್ಟ್ರೀಟ್ ಇರಬಹುದು. ಮೇನ್‌ರೋಡ್ ಇರಬಹುದು. ವ್ಯಾಲ್ಯು ಇಷ್ಟಿಷ್ಟು ಆಗುತ್ತದೆ ಎಮದು ಅಸೆಸ್ ಮಾಡಿ ಕಂಪ್ಯುಟರೈಸೇಶನ್ ಮಾಡಿ ಇಟ್ಟುಬಿಟ್ಟರೆ ಅದರ ಪ್ರಕಾರ ಗೈಡೆನ್ಸ್ ವ್ಯಾಲ್ಯು ಏನಿರುತ್ತದೆ ಅದರಂತೆ ಟ್ಯಾಕ್ಸ್ ತೆಗೆದುಕೊಳ್ಳಬಹುದು ಮತ್ತು ರಿಜಿಸ್ಟ್ರೇಶನ್ ಕೂಡ ಅದರ ಪ್ರಕಾರ ಆಗುತ್ತದೆ. ಇದರಿಂದ ಬಹಳ ಅನುಕೂಲವಾಗುತ್ತದೆ ಮತ್ತು ಅದನ್ನು ಮಾಡಿದರೆ ಒಳ್ಳೆಯದು. ಅದನ್ನು ತಿದ್ದುಪಡಿ ಮಾಡಬೇಕೆಂದು ಇವತ್ತು ನಾನು ಹೇಳುತ್ತೇನೆ. ಆದರೆ ಇದನ್ನು ಏನು ವ್ಯತ್ಯಾಸ ಮಾಡಿದ್ದೀರಿ ಬೆಂಗಳೂರು ಮೆಟ್ರೊಪಾಲಿಟಿನ್ ಬೇರೆ ಮತ್ತು ಬೇರೆ ಕಡೆಯದ್ದೇ ಬೇರೆ ಎಂಬುದೇನಿದೆ ಅದನ್ನು ತಾವು ತೆಗೆಯಬೇಕು ಎನ್ನತಕ್ಕಂಥಾದ್ದು ನನ್ನ ಒತ್ತಾಯ.

† **ಶ್ರೀ ಎ. ರಾಮದಾಸ್ (ಕೃಷ್ಣರಾಜ)** : ಮಾನ್ಯ ಅಧ್ಯಕ್ಷರೆ, ಪ್ರಮುಖವಾಗಿ ಈ ಸದನದಲ್ಲಿ ಶಾಸನವಾಗಿ ಸಮಗ್ರವಾಗಿ ಒಂದು ವೈಜ್ಞಾನಿಕವಾದಂಥ ಬದಲಾವಣೆ ಟ್ಯಾಕ್ಸ್ ಸಿಸ್ಟಮ್‌ನಲ್ಲಿ ತರಬೇಕೆಂದು ಹೇಳಿ ಬೇರೆ ಬೇರೆ ನ್ಯಾಯಾಲಯಗಳಲ್ಲಿ ಸುಮಾರು ಎಂಟುನೂರು ದಾವಾಗಳು ಇದ್ದವು. ಆ ಪ್ರಯತ್ನವನ್ನು ಈ ಸರ್ಕಾರ ಮಾಡಿತು. ಅದಕ್ಕಾಗಿ ನಾನು ಅಪ್ರೀಷಿಯೇಟ್ ಮಾಡುತ್ತೇನೆ. ಜೊತೆಗೆ ಹೊಸ ಸೆಲ್ಫ್‌ಅಸೆಸ್‌ಮೆಂಟ್ ಏನು ಬಂದಿದೆ ಅದು ವೈಜ್ಞಾನಿಕವಾಗಿರುವಂತಹ ಪದ್ಧತಿ. ಆದರೆ ಅದರ ಒಂದು ಭಾಗ ಏನಿದೆ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಸೆಲ್ಫ್ ಅಸೆಸ್‌ಮೆಂಟ್‌ನ್ನು ತೆಗೆದುಕೊಂಡುಹೋಗಿ ಸ್ವತಃ ಅವರೇ ಡಿಕ್ಲರೇಶನ್ ಕೊಡುವಾಗ ವ್ಯಾಲ್ಯು ಏಶನ್ ಯಾವ ಬೇಸಿಸ್ ಮೇಲೆ ಮಾಡಬೇಕು ಎನ್ನುವಂಥಾದ್ದು ಈ ಸದನದಲ್ಲೇ ನಾವು ಪಾಸ್ ಮಾಡಿದಂಥ ಬಿಲ್‌ಗೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಆಗುತ್ತದೆ ಎಂದರೆ ನಾವು ಎಷ್ಟು ವೈಜ್ಞಾನಿಕವಾಗಿ ಚಿಂತನೆ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಮಾಡಿದೆವು ಎನ್ನುವಂಥಾದ್ದನ್ನು ನಾವು ಯೋಚನೆ ಮಾಡಬೇಕಾದ ವ್ಯವಸ್ಥೆ ನಮ್ಮ ಮುಂದೆ ಇದೆ. ಹೀಗಾಗಿ ನಮ್ಮ ನಾಯಕರು ಹೇಳುವಾಗ ಹೇಳಿದರು. ಈ ತಿದ್ದುಪಡಿ ಏನು ಬಂದಿದೆ ಇದರ ವಿರುದ್ಧವಾಗಿ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸುಮಾರು ಹದಿನಾಲ್ಕು ಕೇಸ್‌ಗಳು ಇವೆ. ಇದರಲ್ಲಿ ಕಳೆದಬಾರಿ ತಿದ್ದುಪಡಿಯನ್ನು ತಂದಂಥ ಸಂದರ್ಭದಲ್ಲಿ ಸರ್ಕಾರದಲ್ಲಿ ಮೆಜಾರಿಟಿ ಇದೆಯೆಂದು ಹೇಳಿ ಅದು ಪಾಸ್ ಆಯಿತು. ಮತ್ತೆ ಮೈಸೂರಿಗೆ ಸಂಬಂಧಪಟ್ಟಹಾಗೆ ಈ ಅಸೆಸ್‌ಮೆಂಟ್‌ನ್ನು ಮಾಡುವಂತಹ ಸಂದರ್ಭದಲ್ಲಿ ಇದು ಅವೈಜ್ಞಾನಿಕವಾಗಿದೆ ಎನ್ನುವ ಬಗ್ಗೆ ನಾನೇ ಒಬ್ಬ ಪಿಟಿಶನರ್ ಆಗಿ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಶನ್ ಮೂಲಕ ನ್ಯಾಯಾಲಯದ ಮುಂದೆ ಕೇಸನ್ನು ಹಾಕಿದ್ದೆ.

11.50 ಪಿಎಂ

ಅಲ್ಲಿ ನ್ಯಾಯಾಲಯ ಇಡೀ ಸರ್ಕಾರ ಏನೊಂದು ನೋಟಿಫಿಕೇಶನ್ ಮಾಡಿತ್ತು ಅಷ್ಟನ್ನು ತಡೆಯಾಜ್ಞೆ ಮಾಡಿದೆ. ಇವತ್ತೂ ಕೂಡ ಜಾತಿಯಲ್ಲಿಲ್ಲ. ಕಾರಣವೇನೆಂದರೆ ಇಲ್ಲಿರುವಂತಹ ಅನಾಮಲೀಸ್ ಏನು ಇದೆ ಇದಕ್ಕೆ ಸಂಬಂಧಪಟ್ಟ ಹಾಗೆ ನ್ಯಾಯಾಲಯ ಅಡ್ವೊಕೇಟ್ ಜನರಲ್ ಮೂಲಕವಾಗಿ ಸರ್ಕಾರ ಕೆಲವೊಂದನ್ನು ಒಪ್ಪಿಕೊಂಡಿತು. ಅಫಿಡವಿಟ್‌ನ್ನು ಫೈಲ್ ಮಾಡಿದರು ಇದರಲ್ಲಿ ಕೆಲವು ಅನಾಮಲೀಸ್ ಇದೆ. ಅದು ನ್ಯಾಯಾಲಯದ ಆಜ್ಞೆಯ ವಿರುದ್ಧವಾಗಿದೆ ಇದನ್ನು ಸರಿ ಮಾಡಿದ ನಂತರದಲ್ಲಿ ನಾವು ಜಾರಿಗೆ ತರುತ್ತೇವೆಂದು ಹೇಳಿದರು. ಇದರ ಪ್ರಕಾರದಲ್ಲಿ ನನ್ನ ಈ ಒಂದು ಕೇಸ್‌ನಲ್ಲಿ ಸಂಬಂಧಪಟ್ಟಿದ್ದು ಬಂದಾಗ ನಾನು ಅದನ್ನು ಹೇಳುತ್ತೇನೆ. The High Court at Bangalore in write Petition No. 2558/2003 ಸ್ಟೇಟ್ ಆಫ್ ಕರ್ನಾಟಕ ಮತ್ತು ಮೈಸೂರು ಮಹಾನಗರಪಾಲಿಕೆಯನ್ನು ಪಾರ್ಟಿ ಮಾಡಿದಂತಹ ಕೇಸ್‌ನಲ್ಲಿ ಜಡ್ಜಮೆಂಟ್ ಆಗಿದೆ ಅದರ ಕಾಪಿ ನನ್ನ ಹತ್ತಿರ ಇದೆ. ಇಲ್ಲಿ ನಾನು ಆಗಲೇ ಹೇಳಿದೆ, ನಾನು ಸೆಲ್ಫ್ ಅಸ್ಸೆಸ್‌ಮೆಂಟನ್ನು ಸ್ವಾಗತ ಮಾಡುತ್ತೇನೆ. ನಾನು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿ ಸೆಕ್ಷನ್ ವೈಸ್ ನಾನು ವಿಚಾರವನ್ನು ಕೊಡುತ್ತಿದ್ದೇನೆ. ತಾವು ಅದಕ್ಕೆ ಅವಕಾಶವನ್ನು ಕೊಡಬೇಕೆಂದು ಹೇಳಿ ನಾನು ತಮ್ಮನ್ನು ಮೊದಲು ಕೇಳಿಕೊಳ್ಳುತ್ತೇನೆ. ಇದರಲ್ಲಿ ತಾವು ಸೆಕ್ಷನ್–2 ಇದಕ್ಕೆ ಸಂಬಂಧಪಟ್ಟ ಹಾಗೆ Clause 41A: "The value of any building or land or both" ಅದನ್ನು ಬದಲಾಯಿಸಿ "value of any buildings including any land occupied by it or vacant land or both." ಈ ವಿಚಾರವನ್ನು ನೀವು ಬದಲಾವಣೆ ಮಾಡುವುದಕ್ಕೆ ಹೊರಟಿದ್ದೀರಿ. ಮುಂಚೆ ಏನು ಇತ್ತು ಬಿಲ್ಡಿಂಗ್ ಅಥವಾ ಖಾಲಿ ಸೈಟ್ ಏನೂ ಕಟ್ಟಿರಲಿಲ್ಲ ಅಥವಾ ಕಟ್ಟಿದ ಜಾಗದಲ್ಲಿ ಇರುವುದನ್ನು ಕನ್ಸೀಡರ್ ಮಾಡಬೇಕೆಂದು ಇತ್ತು. ಅವರು ಬದಲಾವಣೆ ಏನನ್ನು ತಂದಿದ್ದಾರೆ ಅಂದರೆ ಇದರಲ್ಲಿ ಒಂದು "value of any buildings including any land occupied by it" ಅಂದರೆ ಉದಾಹರಣೆಗೆ 50 x 80 ಸೈಟ್‌ನಲ್ಲಿ 4 ಚದರ ಮನೆಯನ್ನು ಕಟ್ಟಿರುತ್ತಾರೆ. 4 ಚದರ ಪ್ರದೇಶ ಇನ್‌ಕ್ಲೂಡ್ ಆಗಿರುತ್ತದೆ ಅಷ್ಟೇ. ಆದರೆ ಅದಕ್ಕಿಂತ ಹೆಚ್ಚು ಪ್ರದೇಶ ಏನು ಇದೆ ಎಲ್ಲಿ ಗಾರ್ಡನ್ ಮಾಡಿಕೊಂಡಿರುತ್ತಾರೆ ಎಲ್ಲಿ ಆ ಮನೆಗೆ ಗಾಳಿ ಬೆಳಕು ದೃಷ್ಟಿಯಿಂದ ಗಿಡಮರಗಳನ್ನು ಹಾಕಿಕೊಂಡಿರುತ್ತಾರೆ. ಇವೆಲ್ಲವನ್ನೂ ಕೂಡ ಅದಕ್ಕೆ ಸಂಬಂಧಪಟ್ಟ ಹಾಗೆ ಅದರಲ್ಲಿ ಇನ್‌ಕ್ಲೂಡ್ ಆಗುವುದಿಲ್ಲ. ಇನ್‌ಕ್ಲೂಡ್ ಆಗುವುದಿಲ್ಲ ಎನ್ನುವಂತಾದ್ದು ಇದರೊಳಗಡೆ ಬಂದಿದೆ. ಅಂದರೆ ಅದಕ್ಕೆ ಪ್ರತ್ಯೇಕವಾಗಿ ಒಂದು ಟ್ಯಾಕ್ಸ್ ಹಾಕುವಂತಹ

ಪದ್ಧತಿ ಇದೆ ಇದು ವೈಜ್ಞಾನಿಕವಾದಂತಹ ಪದ್ಧತಿಯಲ್ಲ. ಆ ದೃಷ್ಟಿಯಿಂದ ದಯವಿಟ್ಟು ಆ ಬಿಲ್ಡಿಂಗ್ ಅಂದರೆ ಪ್ರತ್ಯೇಕವಾಗಿ ಲ್ಯಾಂಡ್ ಮತ್ತು ಬಿಲ್ಡಿಂಗ್ ಎರಡನ್ನೂ ಪ್ರತ್ಯೇಕಿಸಿದರೆ ಪೂರ್ಣವಾದ ಜಾಗ ಏನು ಇದೆ ಅದನ್ನು ಪೂರ್ತಿ ಪ್ರಾಪರ್ಟಿ ಅಂತ ತೆಗೆದುಕೊಳ್ಳುವಂತಾದ್ದು ಆಗಬೇಕು. ದಯವಿಟ್ಟು ಇದನ್ನು ಒಮಿಷನ್ ಆಗುವಂತಹ ಕೆಲಸ ಆಗಬೇಕು ಅದು 41(ಎ) ಅಂತ ಏನು ಮಾಡಿದ್ದೀರಿ ಅದು ಒಮಿಟ್ ಆಗಬೇಕು ಎನ್ನುವಂತಾದ್ದು ನನ್ನ ವಿಚಾರ. ಎರಡನೆಯದು 44(ಎ)ನಲ್ಲಿ, vacant land means, "land not built upon." ಇದನ್ನು ನಾನು ಸ್ವಾಗತ ಮಾಡುತ್ತೇನೆ. ವೇಕೆಂಟ್ ಲ್ಯಾಂಡ್ ಎಂದು ಕರೆದಿದ್ದನ್ನು ಅಲ್ಲಿ ಏನೂ ಬಿಲ್ಡಿಂಗ್ ಕಟ್ಟಿರುವುದಿಲ್ಲ. ಅಂತಹವರ ಮೇಲೆ ಎಷ್ಟು ಟ್ಯಾಕ್ಸ್ ಹಾಕಬೇಕು ಎನ್ನುವಂತಾದ್ದನ್ನು ಮಾಡುತ್ತೀರಿ ಅದನ್ನು ಮಾಡಿ. ಆದರೆ ಬಿಲ್ಡಿಂಗ್ ಕಟ್ಟಿ ಅದರ ಜೊತೆಗೆ ಇರುವಂತಹ ಪ್ರದೇಶವನ್ನು ವೇಕೆಂಟ್ ಲ್ಯಾಂಡ್ ಅಂತ ಹೇಳಿ ಏನು ಕನ್ಸೀಡರ್ ಮಾಡುವುದು ಇದೆ ಅದು ಅವೈಜ್ಞಾನಿಕವಾದಂತಾದ್ದು ಮತ್ತು ಸಂವಿಧಾನಬಾಹಿರವಾದಂತಹ ವಿಚಾರ. ಹಾಗೆಯೇ ನಾವು ಎಲ್ಲವನ್ನೂ ವಿರೋಧ ಮಾಡುವುದಿಲ್ಲ. ಸೆಕ್ಷನ್ 94 ಬಹಳ ಸ್ವಾಗತಾರ್ಹವಾದಂತಹ ವಿಚಾರ. ಅದು ಇವತ್ತಿನ ವ್ಯವಸ್ಥೆಯೊಳಗಡೆ ನೀವು ಇನ್‌ಕ್ಲೂಜನ್ ಏನು ಮಾಡಿದ್ದೀರಿ ಅದನ್ನು ತಾವು ಸೆಕ್ಷನ್ 94ಕ್ಕೆ ತಂದಿರುವಂತಹ ತಿದ್ದುಪಡಿಯನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಅದರಲ್ಲಿ ಒಂದು ಸೆಕ್ಷನ್ 4ರಲ್ಲಿ "The officer authorised under the subsection may agter such inspection may report to the government. ಏನೆಂದರೆ ನಗರಪಾಲಿಕೆಯಲ್ಲಿ ಅಥವಾ ಮುನಿಸಿಪಾಲಿಟಿಗಳಲ್ಲಿ ಏನಾದರೂ ಒಂದು ಅನ್ಯಾಯವಾಗಿರುತ್ತದೆ. ಅಲ್ಲಿ ಏನಾದರೂ ಕೂಡ ಕಾನೂನುಬಾಹಿರವಾದ ಕ್ರಮವನ್ನು ತೆಗೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಸರ್ಕಾರದವರು ಒಬ್ಬ ಅಧಿಕಾರಿಯನ್ನು ನೇಮಕ ಮಾಡುತ್ತಾರೆ. ಅವರು ಹೋಗಿ ಎಲ್ಲಾ ಡಾಕ್ಯುಮೆಂಟನ್ನು ನೋಡಲಿಕ್ಕೆ. ಅವರು ಯಾವ ಪ್ರದೇಶದಕ್ಕೆ ಬೇಕಾದರೂ ಹೋಗಬಹುದು ಎಲ್ಲಾ ಅಧಿಕಾರವನ್ನು ಅವರಿಗೆ ಕೊಡುತ್ತಾರೆ. ಕೊಟ್ಟ ನಂತರದಲ್ಲಿ ಅಲ್ಲಿ ಬಂದಿರುವಂತಹ ವರದಿ ಇದೆಯಲ್ಲಾ ಆ ವರದಿಯನ್ನು he may submit or may not submit. ಅಂದರೆ ಹೋದಂತಹ ಒಬ್ಬ ಇನ್‌ಕ್ವೈರಿ ಆಫೀಸರ್ ಏನೇನು ಅನ್ಯಾಯಗಳು ಆಗಿದೆ. ಅಲ್ಲಿ ಏನಾದರೂ ವ್ಯವಹಾರಗಳು ಅಡ್ಜಸ್ಟ್ ಆಗಿಬಿಟ್ಟರೆ ಅವನು ಸುಮ್ಮನೆ ಇದ್ದುಬಿಡುತ್ತಾನೆ. ಏಕೆ ಎಂದು ಏಕೆ ಸೇರಿಸುತ್ತೀರಿ? ತೆಗೆದುಹಾಕಿಬಿಡಿ. ನಿಮ್ಮನ್ನು ನಾನು ಸ್ವಾಗತ ಮಾಡುತ್ತೇನೆ. ಒಬ್ಬ ಅಧಿಕಾರಿಯನ್ನು ತಾವು ಅಲ್ಲಿಗೆ ನಿಯೋಜಿಸಿದ ಮೇಲೆ ಅಲ್ಲಿ ಬಂದಿರುವಂತಹ ಅಕ್ರಮಗಳು ಅಲ್ಲಿ ನಡೆದಿರುವಂತಹ ಅನ್ಯಾಯಗಳು ಅಲ್ಲಿ ನಡೆದಿರುವಂತಹ ದಾಂದಲೆಗಳು ಏನೇನು ಆಗಿದೆ ಅದೆಲ್ಲವನ್ನೂ ಕೂಡ ನೋಡುವಂತಹ ಅಧಿಕಾರವನ್ನು ತೆಗೆದುಕೊಳ್ಳುತ್ತಿದ್ದೀರಿ ಅದು ಸರಿ. ಆದರೆ ಆ ವರದಿಯನ್ನು ಕೊಡುವಂತಾದ್ದಕ್ಕೆ ಆಪ್ಷನ್ ಮಾಡಬೇಡಿ. May ಎನ್ನುವುದನ್ನು ತೆಗೆದು ಹಾಕಿ "shall" ಎಂದು ಸೇರಿಸಿ. ಅವನು ಹೋದ ನಂತರದಲ್ಲಿ ಅಲ್ಲಿ ಏನಾಗಿದೆ ಎಂದು ಸರ್ಕಾರಕ್ಕೆ ವರದಿ ಕೊಡಲೇಬೇಕು ಅವರು. ಅದನ್ನು ಸೇರಿಸಿರುವುದು ನಿಜವಾಗಿಯೂ ಬಹಳ ಒಳ್ಳೆಯ ವಿಚಾರ ಇದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆಮೇಲೆ ತಿದ್ದುಪಡಿ ಸೆಕ್ಷನ್ 103 ಇದರಲ್ಲಿ ಕ್ಲಾಸ್ (ಬಿ)ಯಲ್ಲಿ ಒಂದು ಹೇಳುತ್ತೇನೆ. It reads thus:

> with the sanction of the government, rents not exceeding those specified in the schedules IV and VIII, the words 'the rates not exceeding those specified in this Act' shall be substituted."

ಇಲ್ಲಿ ಏನಾಗುತ್ತದೆ ಒಂದು ನೀವು ಆಪ್ಷನ್ ಕೊಟ್ಟಿದ್ದೀರಿ. 03 ಯಿಂದ 05. ಹಾಗೆಯೇ ಅಲ್ಲಿಗೆ ಬಂದಾಗ ಹೇಳುತ್ತೇನೆ. 0 ಪಾಯಿಂಟ್ 1 ರಿಂದ 0 ಪಾಯಿಂಟ್ 15, ಇಲ್ಲಿಯವರೆಗೂ ಆಪ್ಷನ್ ಕೊಟ್ಟಿದ್ದೀರಿ. ಈ ಆಪ್ಷನ್ ಅನ್ನು ಎಕ್ಸಿಕ್ಯೂಟ್ ಮಾಡುವಂತಹ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಅಲ್ಲಿ ಪ್ರಾವಿಜನ್ ಇರಬೇಕು. ಅಲ್ಲಿರುವಂತಹವರಿಗೆ ಅವಕಾಶ ಇರಬೇಕು.
"with the approval of the government" ಅದಕ್ಕೆ ಏನಿದೆ ಇದನ್ನು ದಯವಿಟ್ಟು ಅದನ್ನು ತೆಗೆದು ಹಾಕುವಂತಹ ಕೆಲಸ ಆಗಬೇಕು. ಬಾಕಿ ವಿಚಾರವನ್ನು ನಾವು ಸ್ವಾಗತ ಮಾಡುತ್ತೇವೆ. ಎರಡನೆಯದು ಒಮಿಷನ್ ಆಫ್ ಸೆಕ್ಷನ್ 103(ಎ) ಅಂತ ಹೇಳಿದ್ದೀರಿ. ನಾನು ವಿಶೇಷವಾಗಿ ನಾನೂ ಕೂಡ ಬೆಂಚ್ ಕುಟ್ಟಿ ಸ್ವಾಗತ ಮಾಡುತ್ತೇನೆ. ಇನ್ನು 20 ಪರ್ಸೆಂಟ್ ವಾಟರ್‌ಸೆಸನ್ನು ಹಾಕುವಂತಾದ್ದು ಇತ್ತು ಇದು against the Supreme Court decision ಅಂತ ನಾನು ವಾದ ಮಾಡಿದ್ದೆ. ಯಾವುದೇ ಸೆಸ್ 44 ಪರ್ಸೆಂಟ್‌ಗಿಂತ ಎಕ್ಸೀಡ್ ಆಗಬಾರದು. ಅದು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದೆ. ಅದರ ಮೇಲೆ 20 ಪರ್ಸೆಂಟ್ ಹಾಕುವುದು ಅಂತ ಮಾಡಿದ್ದರು. ಈಗ ಅದನ್ನು ತೆಗೆದಿದ್ದಾರೆ. ಒಮಿಟ್ ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ ಒಮಿಷನ್ ಆಫ್ ಸೆಕ್ಷನ್ 103 ಮತ್ತು 105ರ ಬಗ್ಗೆ ಈಗತಾನೇ ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ಹೇಳಿದರು. ಒಂದರಲ್ಲಿ ಸರ್ಕಾರ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕು ಎನ್ನುವಂತಹ ವಿಚಾರ ಇದೆ. ಅದು ವಿಶೇಷವಾಗಿ ರಾಜೀವ್‌ಗಾಂಧಿಯವರು ಅದರಲ್ಲಿ ತಂದಂತಹ ಒಂದು ತಿದ್ದುಪಡಿಯ ಮೂಲಕವಾಗಿ ಅದು ಆಗಿದೆ ಎಂದು ಬೇರೆ ಬೇರೆ ಸಮಯದಲ್ಲಿ, ಚುನಾವಣೆ ಸಮಯದಲ್ಲಿ ಅದನ್ನು ಹೇಳುತ್ತೀರಿ. ಆದರೆ ಸ್ಥಳೀಯ ಸಂಸ್ಥೆಗಳಿಗೆ ಇದರ ಪ್ರಕಾರ ಅಧಿಕಾರ ಇದೆ. ಸೆಕ್ಷನ್ 104 ಮತ್ತು ಸೆಕ್ಷನ್ 105ರ ಪ್ರಕಾರ ನೀವು ಲೋಕಲ್‌ಬಾಡಿಗಳಿಗೆ ಈ ಒಂದು ಸಂಬಂಧವಾಗಿ...

ಶ್ರೀ ಪರಮೇಶ್ವರ ನಾಯಕ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮದಾಸ್‌ರವರು ಸ್ಥಳೀಯ ಸಂಸ್ಥೆಗಳ ಬಗ್ಗೆ ಮಾತನಾಡುವಾಗ ನೀವು ಅದಕ್ಕೆ ಅಧಿಕಾರ ಕೊಡುವಾಗ ಚುನಾವಣೆ ಸಂದರ್ಭದಲ್ಲಿ ಅಲ್ಲಲ್ಲಿ ಹೇಳಿದ್ದೀರಿ ಎನ್ನುವಂತಹ ಪ್ರಸ್ತಾವವನ್ನು ಅವರು ಮಾಡಿದರು. 1987ನೇ ಇಸವಿಯಲ್ಲಿ ನಾನೂ ಕೂಡ ಮಂಡಲ್ ಪಂಚಾಯತ್‌ಗೆ ಚುನಾಯಿತನಾಗಿ ಹೋದಂತಹ ಸಂದರ್ಭದಲ್ಲಿ ಅಲ್ಲಿ ಯಾವ ಆರ್ಥಿಕ ಹಣಕಾಸಿನ ಸೌಲಭ್ಯ ಇರಲಿಲ್ಲ.1988ರಲ್ಲಿ ಆಗಿನ ಪ್ರಧಾನ ಮಂತ್ರಿಗಳಾದ ಮಾನ್ಯ ರಾಜೀವ್‌ಗಾಂಧಿಯವರು ಜವಾಹರ್‌ರೋಜ್‌ಗಾರ ಎನ್ನುವಂತಹ ಒಂದು ಯೋಜನೆಯನ್ನು ಜಾರಿಗೆ ತಂದು ಸ್ಥಳೀಯ ಸಂಸ್ಥೆಗಳಿಗೆ ಹಣಕಾಸಿನ ವ್ಯವಸ್ಥೆಯನ್ನು ಅವರು ಕಲ್ಪಿಸಿ ಕೊಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಮಾನ್ಯ ರಾಮದಾಸ್‌ರವರಿಗೆ ನೆನಪು ಮಾಡಿಕೊಡುತ್ತೇನೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಕಂದಾಯವನ್ನು ನಿಶ್ಚಯ ಮಾಡಲಿಕ್ಕೋಸ್ಕರವಾಗಿ ಆಗಲೇ ನಾನು ಹೇಳಿದ ಹಾಗೆ ಬೆಂಗಳೂರು ಮಹಾನಗರಪಾಲಿಕೆಯಲ್ಲಿರುವಂತಹ ಅಧಿಕಾರಿಗಳು ಅಲ್ಲಿರುವಂತಹ ನಗರಪಾಲಿಕೆಯ ಸದಸ್ಯರುಗಳು ಅಲ್ಲಿರುವಂತಹ ಮೇಯರ್ ಅಲ್ಲಿರುವಂತಹ ಆ ಕಮಿಟಿಯವರು ಕಂದಾಯವನ್ನು ನಿಶ್ಚಯ ಮಾಡಲಿಕ್ಕೆ ಸೆಕ್ಷನ್ 104 ಮತ್ತು 105ರಲ್ಲಿ ಅವಕಾಶ ಇದೆ. ಹಾಗಾದರೆ ಹುಬ್ಬಳ್ಳಿಯಲ್ಲಿರುವಂತಹವರು ಮೈಸೂರಿನಲ್ಲಿರುವಂತಹವರು ಬೇರೆಯವರಿಗೆ ಏಕೆ ಆ ಅವಕಾಶ

ಇರಬಾರದು? ಏಕೆ ಅದನ್ನು ಒಮಿಟ್ ಮಾಡುತ್ತಿದ್ದೀರಿ? ಸೆಕ್ಷನ್ 104 ಮತ್ತು 105 ರಲ್ಲಿ ಇರತಕ್ಕಂಥಾದ್ದು ದಯವಿಟ್ಟು ಒಮಿಟ್ ಮಾಡುವಂತಹ ಕೆಲಸ ಮಾಡಬೇಡಿ. ಅದು ಏನಿದೆ ಅದನ್ನು ಹಾಗೇ ಉಳಿಸಿ. ಆಯಾಯ ಸ್ಥಳೀಯ ಸಂಸ್ಥೆಗಳು ಅಲ್ಲಿಯ ಪ್ರದೇಶಕ್ಕೆ ಆಧಾರವಾಗಿ ಅಲ್ಲಿರುವಂಥವರು ಅದನ್ನು ಮಾಡಿಕೊಳ್ಳಲಿ. ಮಾನ್ಯ ಸೋಮಶೇಖರ್‌ರವರು ಹೇಳಿದರು ಗ್ರೇಡೇಷನ್ಸ್ ಬರಬೇಕು ಅಂತ. ಮೆಜೆಸ್ಟಿಕ್‌ನಲ್ಲಿರುವಂತಹರಿಗೆ ಒಂದು ರೀತಿಯಾದಂತಹ ಟ್ಯಾಕ್ಸ್‌ನ್ನು ಹಾಕಿದರೆ ಯಾರೂ ಏನನ್ನೂ ಹೇಳುವುದಿಲ್ಲ. ಅಲ್ಲಿರುವ ಅದೇ ತರಹದ ಪದ್ಧತಿಯನ್ನು ಇನ್ಯಾವುದೋ ಒಂದು ಕಲಾಸಿಪಾಳ್ಯದಲ್ಲಿ ಇದ್ದಂತಹವರಿಗೆ ಇನ್ನೊಬ್ಬರಿಗೆ ಕೊಟ್ಟರೆ ಅದರ ಬಗ್ಗೆ ವಿಚಾರ ಚಿಂತನೆಯನ್ನು ಮಾಡುತ್ತಾರೆ. ಹಾಗಾಗಿ ಸೆಕ್ಷನ್ 104 ಮತ್ತು 105ರಲ್ಲಿ ಆಯಾಯಾ ಸ್ಥಳೀಯ ಸಂಸ್ಥೆಗಳಲ್ಲಿ ಇರುವಂತಹ ನಗರಪಾಲಿಕೆ ಸದಸ್ಯರು ಮತ್ತು ಮುನಿಸಿಪಾಲಿಟಿಗಳಲ್ಲಿ ಇರುವಂತಹ ಸದಸ್ಯರ ಅಧಿಕಾರವನ್ನು ಮೊಟಕು ಮಾಡುವಂತಹ ಕೆಲಸವನ್ನು ಮಾಡಬೇಡಿ. ಅವೆರೆಡೂ ಜವಾಬ್ದಾರಿಯನ್ನು ಅವರಿಗೆ ಕೊಡಿ. 104 ಮತ್ತು 105 ಅನ್ನು ಒಮಿಟ್ ಮಾಡುವಂತಹದ್ದನ್ನು ದಯವಿಟ್ಟು ತೆಗೆದುಹಾಕಿ. ಮತ್ತು ಸೆಕ್ಷನ್ 103ಕ್ಕೆ ಸಂಬಂಧಪಟ್ಟ ಹಾಗೆ ಪ್ರಮುಖವಾಗಿ ನಾನು ಹೇಳುವಂತಹ ಸಂದರ್ಭದಲ್ಲಿ ನಾನು ಸೆಕ್ಷನ್ 108ಕ್ಕೆ ಬಂದಾಗ ಹೇಳುತ್ತೇನೆ. ನಾವು 108ಕ್ಕೆ ಬಂದಾಗ "buildings or land or both" ಎನ್ನುವಂತಾದ್ದನ್ನು "buildings or vacant land or both" ಎಂದು ಮಾಡಿದ್ದೀರಿ. ಆದರೆ ಇಲ್ಲಿ ತಾವು ಮುಂದೆ (ಎ)ನಲ್ಲಿ ಹೇಳುವಾಗ "property tax shall be levied in case of the commercial building at such percentage not less than 0.5% Rupees Five per Thousand not exceeding.... ಅಂದರೆ ಮಾನ್ಯ ಅಧ್ಯಕ್ಷರೆ ಇಲ್ಲಿ ಹೇಗೆ ಹೊಸದಾಗಿ ತಂದಿದ್ದಾರೆ. ಒಂದು 0.5 ಒಂದು ಸಾವಿರಕ್ಕೆ 5 ರೂಪಾಯಿಗಳನ್ನು ಕಮರ್ಷಿಯಲ್ ಬಿಲ್ಡಿಂಗ್‌ಗೆ ಕೊಡಬಹುದು. ಇದು ವೇರಿಏಷನ್ ಎಷ್ಟು? 0.5 ಇಂದ 0.15. ಅಂದರೆ ಅಧಿಕಾರಿ ಅಸೆಸ್‌ಮೆಂಟ್ ಮಾಡುವುದಕ್ಕೆ ಹೋದಾಗ, ಅವನು ಒಂದು ರೂಪಾಯಿ ಮಾಡಬಹುದು. ಎರಡು ರೂಪಾಯಿ ಮಾಡಬಹುದು. ಮೂರು ರೂಪಾಯಿ ಮಾಡಬಹುದು. ಅಲ್ಲಿಗೆ ಹೋದಂತಹ ಅಧಿಕಾರಿಗಳಿಗೆ ನೀವು ಚೆನ್ನಾಗಿ ಆಹಾರವನ್ನು ಕೊಟ್ಟಹಾಗೆ ಆಗುತ್ತದೆ ಒಂದು ಸ್ಪೆಸಿಫಿಕೇಷನ್ ಇರಬೇಕು. ಒಷ್ಟು ವೇರಿಯೇಷನ್ ಒಳ್ಳೆಯದಲ್ಲ. ನೀವು ವಾಸದ ಕಟ್ಟಡಗಳಿಗೆ ಕೊಟ್ಟಿದ್ದೀರಿ. 0.3 ಯಿಂದ 0.5 ಅಂದರೆ ವೇರಿಯೇಷನ್ ಎಷ್ಟು 0.2 ಪರ್ಸೆಂಟ್. ಆದರೆ ಇಲ್ಲೆಷ್ಟು ಕೊಟ್ಟಿದ್ದೀರಿ. 0.5 ನಿಂದ 0.15 ನಾಳೆ ಅಧಿಕಾರಿಗಳು ಬೇಕಾದಷ್ಟು ಲಂಚವನ್ನು ತೆಗೆದುಕೊಂಡು ಬೇಕಾದಂಥ ರೀತಿಯಲ್ಲಿ ಅವರ ಮುಂದೆ ಇಡುವುದಕ್ಕೋಸ್ಕರವಾಗಿ ಅವಕಾಶ ಮಾಡಿದಹಾಗೆ ಆಗುತ್ತದೆ. ಈ ವೇರಿಯೇಷನ್ ಇಡುವುದು ಒಳ್ಳೆಯದಲ್ಲ. ಇನ್ನು ಉಳಿಕೆಯಾದುದು ಏನಿದೆ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಇಲ್ಲಿ ಒಂದು ಪ್ರಮುಖವಾದ ಅಂಶವನ್ನು ತಾವು ತಂದಿದ್ದೀರಿ. ಅದರಲ್ಲಿ "ಬಿ" – Amendment to Section 108(2) sub-section (b) - "Residential buildings and buildings other than the Commercial buildings". ಇಲ್ಲಿ ಪ್ರಶ್ನೆ ಇರುವಂಥಾದ್ದು, ಮುಂಚೆ ಏನು ಮಾಡಿದ್ದರು. ಕಳೆದ ಬಾರಿಯ ವಾಸದ ಕಟ್ಟಡಗಳು ಮತ್ತು ಕಮರ್ಷಿಯಲ್ ಬಿಲ್ಡಿಂಗ್ ಇವೆರಡಕ್ಕೂ ಬೇರೆ ಬೇರೆ ರೀತಿಯ ವ್ಯವಸ್ಥೆ ಇತ್ತು. ಇಲ್ಲಿ ವಾಸದ ಕಟ್ಟಡಗಳಿಗೆ ತಂದಿರುವಂಥ ವ್ಯವಸ್ಥೆ ಏನಾಗಿದೆಯೆಂದರೆ, ಉದಾಹರಣೆಗೆ ಅಧ್ಯಕ್ಷರ ಮನೆ ಪಕ್ಕದಲ್ಲಿ ಯಾವುದೋ ಒಂದು ಊರಿನಲ್ಲಿ ಒಂದು ವಾಸದ ಮನೆ ಇದೆ. ಆ ಮನೆ

ಮುಂದೆ ಅವನೊಂದು ಗ್ಯಾರೇಜೋ ಏನೋ ಒಂದು ಇಟ್ಟುಕೊಂಡಿರುತ್ತಾನೆ. ಅಲ್ಲೇನಾದರೂ ಒಂದು ಅಂಗಡಿಯೋ, ಒಂದು ಟೈಲರ್ ಷಾಪೋ ಅವನು ಸ್ವಂತಕ್ಕೆ ನಡೆಸುತ್ತಾನೆಂದರೆ, ಇದರ ಪ್ರಕಾರದಲ್ಲಿ ಮನೆಗೇ ಬೇರೆ ರೀತಿಯಾದಂಥ ಅಸೆಸ್‌ಮೆಂಟ್ ಆಗಬೇಕು. ಮುಂದುಗಡೆ ಒಂದು ಅಥವಾ ಎರಡು ಮಳಿಗೆ ಇದೆಯಲ್ಲಾ ಅವರಿಗೇ ಸಪರೇಟಾದಂಥ ಅಸೆಸ್‌ಮೆಂಟ್ ಆಗಬೇಕು. ಅಂದರೆ ಎರಡು ಖಾತೆಗಳು ಅದಕ್ಕೆ ಬೇರೆ ರೀತಿಯಾದಂಥ ಕಂದಾಯ, ಇದಕ್ಕೆ ಬೇರೆ ರೀತಿಯಾದಂಥ ಕಂದಾಯ. ಆದರೆ, ಇಲ್ಲಿ ಯಾರು ಸ್ವಂತಕ್ಕೆ ಇಟ್ಟುಕೊಂಡಿದ್ದಾನೆ ಅದಕ್ಕೆ ಇಲ್ಲವೇ ಇಲ್ಲ. ಅವನ ಸ್ವಂತಕ್ಕೆ ಅಂಗಡಿ ಮಳಿಗೆ ಇರಲಿ, ಇಲ್ಲದೇ ಹೋಗಲಿ. ನಿಜವಾಗಿಯೂ ಟೌನ್ ಪ್ಲಾನಿಂಗ್ ಆಕ್ಟ್‌ನಲ್ಲಿ ಏನಿದೆ, 30–40 ಜಾಗ ಇದ್ದರೆ ಅವನು ಸ್ವಂತಕ್ಕೆ ಎಂದು ಎರಡು ಅಂಗಡಿ ಇಟ್ಟುಕೊಳ್ಳಬಹುದೆಂದು ನೀವು ಪ್ರಾವಿಷನ್ ಮಾಡಿಕೊಡುತ್ತೀರಿ. 60–40 ಇದ್ದಾಗ ಮೂರು ಅಂಗಡಿಗಳನ್ನು ಇಟ್ಟುಕೊಳ್ಳಬಹುದೆಂದು ಪ್ರಾವಿಷನ್ ಮಾಡಿ ಕೊಡುತ್ತೀರಿ. ಆದರೆ, ಇಲ್ಲಿ ಒಂದೇ ಖಾತೆಯನ್ನು ಎರಡು ಬೈಫಕೇಷನ್ ಯಾವರೀತಿ ಮಾಡುತ್ತೀರಿ? ಇದು ಕಾನೂನಿಗೆ ವಿರುದ್ಧವಾದುದು. ನಾಳೆ, ಯಾರಾದರು ತಡೆಯಾಜ್ಞೆ ಕೇಳಿದರೆ, ನ್ಯಾಯಾಲಯ ತಡೆಯಾಜ್ಞೆ ಕೊಡುತ್ತೆ. ಒಂದೇ ಬಿಲ್ಡಿಂಗ್‌ನಲ್ಲಿ ಒಂದು ಭಾಗವನ್ನು ಕಮರ್ಷಿಯಲ್, ಒಂದು ಭಾಗವನ್ನು ವಾಸಕ್ಕೆ ಎಂದು ಮಾಡಿದ್ದೀರಿ. ವಾಸದ ಕಟ್ಟಡಗಳಿಗೆ ವಿನಾಯಿತಿ ಕೊಡುತ್ತೇವೆ. ಸ್ವಂತ ಅಂಗಡಿಯನ್ನು ಇಟ್ಟುಕೊಂಡವನಿಗೆ ವಿನಾಯಿತಿ ಕೊಡುವುದಿಲ್ಲವೆಂದರೆ ಸರಿಹೋಗುವುದಿಲ್ಲ. ದಯವಿಟ್ಟು ಅದನ್ನು ತೆಗೆದುಹಾಕಬೇಕು. ಕಟ್ಟಡ, ಕಟ್ಟಡವೇ ಅದು ವಾಸದ ಮನೆಯ ಕಟ್ಟಡವೂ ಅಷ್ಟೇನೇ, ಕಮರ್ಷಿಯಲ್‌ಗೆ ಟ್ಯಾಕ್ಸನ್ನು ಹಾಕಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದ್ದರಿಂದ "ಬಿ"-ನಲ್ಲಿ ವಾಸಕ್ಕೆ ಎಂಬುದೇನಿದೆ ಅದನ್ನು ತೆಗೆಯಬೇಕೆಂಬುದು ನನ್ನ ವಿಚಾರ. ಇದರಲ್ಲಿ 0.3 ಪರ್ಸೆಂಟ್, 0.6 ಪರ್ಸೆಂಟ್ ಎಂದು ನೀವು ಮುಂದೆ ಸಮೂದಿಸಿದ್ದೀರಿ. ಆದರೆ, ನಾವು ಈ ವ್ಯವಸ್ಥೆಯನ್ನು ವಿರೋಧ ಮಾಡುತ್ತಿರುವುದರಿಂದ, ಇದರ ಬಗ್ಗೆ ನಾನು ಹೆಚ್ಚಿನ ವಿಚಾರವನ್ನು ಹೇಳುವುದಕ್ಕೆ ಬಯಸುವುದಿಲ್ಲ. ಅದರಲ್ಲಿ ಒಂದು ಒಮಿಷನ್‌ನ್ನು ಕೇಳಿದ್ದಾರೆ. ಸೆಕ್ಷನ್ 108, ಸಬ್ ಸೆಕ್ಷನ್ 3, ಅದರಲ್ಲಿ ಮೂರನೇಯದು. "Explanation shall be ommitted." ಇದನ್ನು ಒಮಿಟ್ ಮಾಡಿದರೆ ಪರಿಸರ ಇಲಾಖೆಯವರು ಏನು ಮಾಡುತ್ತಾರೆಂದು ತಾವೇ ಹೇಳಬೇಕು. "For the purpose of this section "building" includes any land appurtenant to such building used as garden and grounds for the more beneficial enjoyment of such building, not exceeding thrice the area by such building." ಅಂದರೆ, ಆ ಕಟ್ಟಡದ ಸುತ್ತ, ನಾವು 50 ಚದರ ಮೀಟರ್ ತೆಗೆದುಕೊಂಡರೆ, 150 ಚದರ ಮೀಟರ್‌ನಲ್ಲಿ ಗಿಡ, ಮರ ಎಲ್ಲವನ್ನೂ ಬೆಳಸಿ ಎಂದು ತಾವು ಆಕ್ಟ್‌ನಲ್ಲಿ ಪ್ರಾವಿಷನ್ ಮಾಡಿದ್ದೀರಿ. ಇದನ್ನು ತೆಗೆದು ಹಾಕಿ ಎಂದರೆ? ನಾಳೆ ಪಲ್ಯೂಷನ್ ಕಂಟ್ರೋಲ್ ಬೋರ್ಡ್ ಏಕಿದೆ? ನಗರ ಪ್ರದೇಶದಲ್ಲಿ ಗಿಡಗಳನ್ನು ಬೆಳಸಿ ಎಂದು ಏಕೆ ಹೇಳುತ್ತೇವೆ? ಇದನ್ನು ಒಮಿಟ್ ಮಾಡುವಂಥಾದ್ದು ಇದೆಯಲ್ಲಾ, ದಯವಿಟ್ಟು ಒಮಿಟ್ ಮಾಡುವುದು ಬೇಡ. ಅದು ಇರಲೇಬೇಕು. ಏಕೆಂದರೆ, ತಾವು ಹೇಳಿದಿರಿ; "Explanation shall be omitted" Why? what is the reason for omitting it? ಅದರ ಜೊತೆಯಲ್ಲಿ ನಿನ್ನೆ ಹೇಳುವಾಗ ಮಾನ್ಯ ಸಚಿವರು ಹೇಳಿದರು. 50 ಚದರ ಮೀಟರ್‌ವರೆಗೆ ವಾಸದ ಜಾಗದಲ್ಲಿರುವುದಕ್ಕೆ ನಾವು ವಿನಾಯಿತಿ ಕೊಡುತ್ತೇವೆ ಎಂದು. ಇಲ್ಲಿ ವಿನಾಯಿತಿ

ಕೇಳುವಂಥಾದ್ದು ಕೇವಲ 50 ಮೀಟರ್ ಪ್ರಶ್ನೆ ಅಲ್ಲ. ಯಾವ ಪ್ರದೇಶದಲ್ಲಿ ಬೆಲೆಯನ್ನು ತೆಗೆದುಕೊಳ್ಳುವಾಗ, ಯಾವ ಬಿಲ್ಡಿಂಗ್‌ನಲ್ಲಿರುತ್ತಾನೆ. ಅದರ ಪ್ರಾಪರ್ಟಿ ಏನಿದೆ ಅದಕ್ಕೆ ಉಪಯೋಗವಾಗುವಂಥ ಯು.ಜಿ.ಡಿ. ವಾಟರ್ ಅಲ್ಲಿರುವಂಥ ವ್ಯವಸ್ಥೆಗಳನ್ನು ಕೊಟ್ಟಿರುವುದಕ್ಕೋಸ್ಕರವಾಗಿ ನಾವು ಟ್ಯಾಕ್ಸನ್ನು ಅವರ ಮೇಲೆ ಹಾಕುತ್ತೇವೆ. ಖಾಲಿ ಇರುವಂಥ ಜಾಗದಲ್ಲಿ 50 ಮೀಟರನ್ನು ಬಿಟ್ಟು ಉಳಿಕೆ ಎಲ್ಲದಕ್ಕೂ ಟ್ಯಾಕ್ಸ್ ಹಾಕುತ್ತೇವೆನ್ನುವಂಥಾದ್ದು ಕಾನೂನುಬಾಹಿರ ಮತ್ತು ವಿರೋಧವಾದಂಥ ವಿಚಾರ ಎನ್ನುವುದನ್ನು ತಮಗೆ ತಿಳಿಸಲಿಕ್ಕೆ ಬಯಸುತ್ತೇನೆ. ಇವತ್ತು ಅದರ ಜೊತೆಯಲ್ಲಿ ಸೆಕ್ಷನ್ 109 ಇದು ಪ್ರಮುಖವಾಗಿ ಇರುವಂಥ ಅಂಶ. ಸೆಕ್ಷನ್ 109ರಲ್ಲಿ ಆಗಲೇ ಹೇಳಿದಹಾಗೆ the words togather with land occupied by it shall be" substituted. ಹಾಗಾದರೆ, ಈ ಉದ್ದೇಶ ಏನು? ಯಾವ ಭೂಮಿಯ ಮೇಲೆ, ಎಷ್ಟು ಭೂಮಿಯಲ್ಲಿ ನಾವು ಮನೆಯನ್ನು ಕಟ್ಟಿದ್ದೇವೆ. ಅದು ಮತ್ತು 60–40 ನಿವೇಶನವನ್ನು ಪ್ರಾಪರ್ಟಿ ಎಂದು ತೆಗೆದುಕೊಳ್ಳುತ್ತಿದ್ದೆವು. ಈ ಕಾನೂನು ಬಂದಮೇಲೆ ನಾಲ್ಕು ಚದರ ಮೀಟರ್ ಕಟ್ಟಿದ್ದರೆ ನಾಲ್ಕು ಚದರ ಮೀಟರ್ ಮಾತ್ರ ಪ್ರಾಪರ್ಟಿ ಎಂದು ನಾವು ತೆಗೆದುಕೊಳ್ಳುತ್ತೇವೆ. ಅದಕ್ಕೊಂದು ಟ್ಯಾಕ್ಸ್. ಪಕ್ಕದಲ್ಲಿರುವಂಥ ಜಾಗಕ್ಕೂ ಒಂದು ಟ್ಯಾಕ್ಸ್. ಇದು ಎಲ್ಲೂ ಕೂಡ ಪರ್ಮಿಸಬಲ್ ಅಲ್ಲ. ದಯವಿಟ್ಟು ಈ ಪದವನ್ನು ತೆಗೆದು ಹಾಕತಕ್ಕ ಕೆಲಸ ಆಗಬೇಕು. ಇನ್ನೊಂದು ಸೆಕ್ಷನ್ 45ಎ ಇದರಲ್ಲಿ ಬಹಳ ಮುಖ್ಯವಾಗಿರುವಂಥಾದ್ದು. ಇದರಲ್ಲಿ ತಾವು ಒಂದು ಮಾತನ್ನು ಹೇಳುತ್ತೀರಿ.

Section 109 sub-section (iii) :

``assessed having regard to the market value guidelines of properties published under section 45B of the Karnataka Stamp Act, 1957 minus depreciation at the time of assessment as may be notified by the Government from time to time" shall be substituted.

ದಯಮಾಡಿ, ಮಂತ್ರಿಗಳು ಒಂದು ಸಲ ಇದರ ಬಗ್ಗೆ ಚಿಂತನೆ ಮಾಡಬೇಕೆಂದು ನನ್ನ ಮನವಿ. ಏಕೆಂದರೆ, ನನ್ನ ಪಿಟಿಷನ್‌ನಲ್ಲೂ ಕೂಡ ನೇರವಾಗಿ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟಿನ ವಿರುದ್ಧವಾಗಿ ಹೇಗೆ ಆಗಿದೆ ಎಂಬುದನ್ನು ನಾನು ಹೇಳುತ್ತೇನೆ. ಸುಪ್ರೀಂಕೋರ್ಟಿನಲ್ಲಿ ಒಂದು ಜಡ್ಜಮೆಂಟ್ ಆಗಿದೆ. Shivarudramma Vs State of Karnataka AIR 1996 S.C. 2086 ಇದರಲ್ಲಿ ವ್ಯಾಲ್ಯುಯೇಷನ್ ಎಂದರೆ ಏನು ಎಂಬುದನ್ನು ಹೇಳಿದ್ದಾರೆ. ವ್ಯಾಲ್ಯುಯೇಷನ್ ಎಂದರೆ, ಅದರ ಪ್ರಕಾರದಲ್ಲಿ ಯಾವುದೇ ವ್ಯಾಲ್ಯುಯೇಷನ್ ಕೇವಲ 45ಬಿ ಇರುವಂಥಾದ್ದು ರಿಜಿಸ್ಟ್ರೇಷನ್ ಉದ್ದೇಶಕ್ಕೋಸ್ಕರವಾಗಿ, ರಿಜಿಸ್ಟ್ರೇಷನ್‌ನ್ನು ಬಿಟ್ಟು ಯಾವುದೇ ಉದ್ದೇಶಕ್ಕೋಸ್ಕರವಾಗಿ ಮಾರ್ಕೆಟ್ ವ್ಯಾಲ್ಯೂವನ್ನು ತೆಗೆದುಕೊಳ್ಳಬಾರದು ಎಂದು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದೆ. ಹಾಗಾದರೆ, ಆ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ವಿರುದ್ಧ ನಾವು ಆಕ್ಟ್ ಮಾಡುವುದಕ್ಕಾಗುತ್ತದೆಯೇ? ಇದರ ಆಧಾರದ ಮೇಲೆ ನ್ಯಾಯಾಲಯಗಳಲ್ಲಿ ಕೇಸುಗಳಿವೆ. ಈ ದೃಷ್ಟಿಯಲ್ಲಿ ದಯಮಾಡಿ ಒಂದು ಸಲ ಚಿಂತನೆಯನ್ನು ಮಾಡಬೇಕು. ವೆಸ್ಟ್ ಬಂಗಾಳದ ಒಂದು ಕೇಸ್ ನಮ್ಮ ಮುಂದೆ ಇದೆ. ವೆಸ್ಟ್ ಬೆಂಗಾಳ್ ಹೈಕೋರ್ಟ್‌ನಲ್ಲೂ ಕೂಡ, ಇದೇ ರೀತಿಯಾದಂಥ ಒಂದು ಜಡ್ಜಮೆಂಟ್ ಆಗಿ ಅಸೆಸ್‌ಮೆಂಟ್ ಮಾಡುವಂಥ ಸಮಯದಲ್ಲಿ, ಆಗಲೇ ನಮ್ಮ ನಾಯಕರು ಹೇಳಿದ ರೀತಿಯಲ್ಲಿ,

annual rent is the only criterion for assessing the tax. ಎಂದು ವೆಸ್ಟ್ ಬಂಗಾಳದಲ್ಲಿ ಆಗಿರುವಂಥ ಕೇಸ್ ಇವತ್ತು ನಮ್ಮ ಮುಂದೆ ಇದೆ. ಹೀಗಾಗಿ 45 ಬಿ ಏನಿದೆ, ಇದನ್ನು ಅಸೆಸ್‌ಮೆಂಟ್ ಎಂದು ತೆಗೆದುಕೊಳ್ಳಬಾರದು. ಹಾಗಾದರೆ, ಏನು ಮಾಡಬಹುದೆಂದು ತಾವೇ ಕೇಳುತ್ತೀರಿ. ಇವತ್ತು ಪಶ್ಚಿಮ ಬಂಗಾಳದಲ್ಲಿ ಅದನ್ನೇ ಮಾಡಿದ್ದಾರೆ. ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಅವರ ಸ್ಥಳೀಯ ವ್ಯವಸ್ಥೆಯೊಳಗಡೆ, ಅಲ್ಲಿ ಅಧಿಕಾರಿಗಳ ಸಮಿತಿಯನ್ನು ರಚನೆ ಮಾಡಿ, ಆಯಾ ಪ್ರದೇಶದಲ್ಲಿ ಗೈಡ್‌ಲೈನ್ ವ್ಯಾಲ್ಯೂ ಏನಿದೆ ಇದಕ್ಕೂ ಅದಕ್ಕೂ ಸಂಬಂಧವೇ ಇಲ್ಲ. ಆ ಪ್ರದೇಶದಲ್ಲಿರುವಂಥ ವ್ಯಾಲ್ಯುಯೇಷನ್ಸ್ ಏನಿದೆ

rant ಏನಿದೆ, ಎರಡನ್ನೂ ಒಟ್ಟಿಗೆ ಸೇರಿಸಿ, ಆ ಸಮಿತಿಯ-ವರದಿಯ ಆಧಾರದ ಮೇಲೆ, ವೈಜ್ಞಾನಿಕವಾಗಿ ಪ್ರತಿಯೊಂದು ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳಲ್ಲಿ ಸರ್ಕಾರದ ಅಪ್ರೂವಲ್ ತೆಗೆದುಕೊಂಡು ವ್ಯಾಲ್ಯುಯೇಷನ್ ಎಂದು ಇಟ್ಟುಕೊಂಡಿದ್ದಾರೆ. ಈ ಕೆಲಸ ಆಗಬೇಕೇ ಹೊರತು ಸೆ. 45(ಬಿ)ಯನ್ನು, ಸ್ಟ್ಯಾಂಪ್ ಆಕ್ಟ್‌ನ್ನು ಇದರಡಿಯಲ್ಲಿ ತರುವಂಥಾದ್ದು ಕಾನೂನುಬಾಹಿರ ಮತ್ತು ಸುಪ್ರೀಂ ಕೋರ್ಟಿಗೆ ವಿರುದ್ಧವಾದಂಥಾದ್ದು. ಆ ದೃಷ್ಟಿಯಲ್ಲಿ ದಯವಿಟ್ಟು, ಆ ಕೆಲಸವನ್ನು ಮಾಡಬೇಡಿ. ನೀವು ಹೇಳುವುದರ ಬಗ್ಗೆ ನಮಗೆ ಆಸಕ್ತಿಯಿಲ್ಲ. ನಮಗೆ ಮೆಜಾರಿಟಿ ಇದೆಯೆನ್ನುವುದಾದರೆ, ನಾನು ಆಗಲೇ ಹೇಳಿದಹಾಗೆ ಮತ್ತೆ ಇದೇ ಪರಿಸ್ಥಿತಿಯಲ್ಲಿ ನಾವು ಶಾಸಕರಾಗಿ ನೊಂದು, ನ್ಯಾಯಾಲಯದ ಮೊರೆ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಫೆನಾಲ್ಟಿ ಕ್ಲಾಸ್. ಇವತ್ತು ಯಾವುದೇ ಬ್ಯಾಂಕಿಗೆ ಹೋದರೂ ಎಂಟು ಪರ್ಸೆಂಟ್ ಬಡ್ಡಿ ಕೊಡುತ್ತಾರೆ. ಯಾರಾದರೂ ಕೂಡ ಅನಿವಾರ್ಯವಾಗಿ ಹಣವನ್ನು ಕಟ್ಟಲಿಕ್ಕೆ ಆಗದೇಹೋದರೆ 24 ಪರ್ಸೆಂಟ್ ಇಂಟ್ರೆಸ್ಟ್. ಇದನ್ನು ಯಾವರೀತಿಯಲ್ಲಿ substantiate ಮಾಡಿಕೊಳ್ಳುವುದಕ್ಕೆ ಆಗುತ್ತೆ? ದಯವಿಟ್ಟು ತಾವು ಅಮೆಂಡ್‌ಮೆಂಟ್ 112 ಸಬ್ ಸೆಕ್ಷನ್ 4ರಲ್ಲಿ ಇದನ್ನು ಹಾಕಿದ್ದೀರಿ. ಇದನ್ನು ತೆಗೆಯುವಂಥ ಕೆಲಸವನ್ನು ಮಾಡಬೇಕು. ಮತ್ತೊಂದು ಪ್ರತಿ ವರ್ಷ assesment ಮಾಡುವಂಥದು ಅಲ್ಲ, ಆ ದೃಷ್ಟಿಯಲ್ಲಿ property tax ನ್ನು ಅಸೆಸ್ ಮಾಡುವ ಸಂದರ್ಭದಲ್ಲಿ ಇದ್ದಂತಹ ಒಂದು ಅಧಿಕಾರವೇನಿದೆ ಅದನ್ನು ತೆಗೆದುಹಾಕುವಂಥದ್ದು ಆಗುವುದಿಲ್ಲ. ಏಕೆಂದರೆ ಆಕ್ಟಿನಲ್ಲಿ ಅವಕಾಶ ಇದೆ. Section 148 in the Principal Act shall be omitted.... ಅಂತ ಇದೆ 148 ಸೆಕ್ಷನ್‌ನಲ್ಲಿ ಏಕೆ ಒಮಿಟ್ ಮಾಡುತ್ತಾ ಇದ್ದೀರಿ, 148ರಲ್ಲಿ ಏನು ಹೇಳುತ್ತೀರಿ? The Corporation shall revise any tax imposed by it once every five years. Whenever enchancement of the rate is evidence necessary shall levy the enhanced rate after following in procedure prescribed for imposition of tax. 5 ವರ್ಷಕ್ಕೊಂದು ಸಲ ಟ್ಯಾಕ್ಸ್ ರಿವಿಜನ್ ಮಾಡುವುದು 5 ವರ್ಷಕ್ಕೊಂದು ಸಲ ಅಪೀಲ್ ಮಾಡಲಿಕ್ಕೆ ಅಂತ ಇದೆ. ಇದನ್ನು ಯಾಕೆ ತೆಗೆಯುತ್ತಿದ್ದೀರಿ? ಪ್ರತಿವರ್ಷವೂ ಜನವರಿ 31ನೇ ತಾರೀಖು ಅವನು ಸಬ್ಮಿಟ್ ಮಾಡಬೇಕು. ಮಾಡದೇ ಹೋದರೆ ಫೆನಾಲ್ಟಿ ಎಷ್ಟು? ಸಾವಿರ ರೂಪಾಯಿ ಫೆನಾಲ್ಟಿ ಅವನು ಕಟ್ಟುವ ಟ್ಯಾಕ್ಸಿನಲ್ಲಿ ಡಬಲ್, ಯಾಕೆ ಪ್ರತಿ ವರ್ಷ ನಾವು ಕೊಡಬೇಕು? ಐದು ವರ್ಷಗಳ ಅವಕಾಶ ಇದೆ. ಇದನ್ನು ಹಾಗೇ ಉಳಿಸುವಂತಹ ಕೆಲಸ ಮಾಡಿ. ಅಧ್ಯಕ್ಷರೇ ಇಷ್ಟೇ ಅಲ್ಲ, ನಾವೇನೋ ಇದ್ದೇವೆ. ಜನಸಾಮಾನ್ಯರ ಪರಿಸ್ಥಿತಿ ಏನು? 148ರ ಕೆಳಗೆ ನಿಮ್ಮ ಮನೆಗೆ ಇಷ್ಟು ಕಂದಾಯ ಫಿಕ್ಸ್ ಮಾಡುತ್ತಿದ್ದೇವೆ ಅಂತ ಒಂದು notification

ಹಾಕುತ್ತಾರೆ. objections ಕರೆಯುತ್ತಾರೆ ಅವನದೇನಾದರೂ ಸಮಸ್ಯೆ ಇದ್ದರೆ 45 ದಿವಸದೊಳಗೆ objection ಹಾಕುತ್ತಾನೆ. ಪಕ್ಕದ ಮನೆಯವರಿಗೆ ಇಷ್ಟು ಟ್ಯಾಕ್ಸ್ ಹಾಕಿದ್ದೀರಿ ನನಗೆ ಇಷ್ಟು ಕಡಿಮೆ ಮಾಡಿದ್ದೀರಿ, ಅಥವಾ ಜಾಸ್ತಿ ಹಾಕಿದ್ದೀರಿ, ಇಲ್ಲ ಈ ತರಹ ಆಗಿದೆ ಅಂತ objections ಹಾಕುತ್ತಾನೆ, ಅದಕ್ಕೆ ಪ್ರಾವಿಷನ್ನೇ ತೆಗೆದುಹಾಕಿಬಿಟ್ಟರೆ ನೀವು?

ಅಧ್ಯಕ್ಷರು : ರಾಮದಾಸ್ ನಮ್ಮ ಮುಂದೆ ಬಹಳ ಮುಖ್ಯವಾದ ವಿಧೇಯಕಗಳು ಇನ್ನೂ ಬೇಕಾದಷ್ಟಿವೆ. ದಯವಿಟ್ಟು ಬೇಗ ಮುಗಿಸಿ. ಒಂಬತ್ತು ಹತ್ತು ಕ್ಲಾಸ್‌ಗಳ ಬಗ್ಗೆ ಮಾತನಾಡಿದ್ದಾರಲ್ಲ.

ಶ್ರೀ ಎ. ರಾಮದಾಸ್ : ನೊಂದು ಯಾಕೆ ಹೇಳಿದೆ ಅಂದರೆ, ಚರ್ಚೆ ಬೇಡ ಅಂದರೆ ಮತ್ತೆ ನ್ಯಾಯಾಲಯದಲ್ಲಿ ತಡೆಹಾಕಿಬಿಟ್ಟರು ಅಂದರೆ ನನಗೂ ನಾಚಿಕೆ ಈ ಸದನಕ್ಕೇ ನಾಚಿಕೆ. ಇಡೀ ರಾಜ್ಯಕ್ಕೆ ಅಷ್ಟೆ ಆಗುತ್ತದೆ. ನಾವೆಲ್ಲಾ ಶಾಸನ ಮಾಡಿ ನಾವೇ ಹೋಗಿ ನ್ಯಾಯಾಲಯದಲ್ಲಿ ಸ್ಟೇ ತರಬೇಕಾದರೆ ಇಂತಹ ಪರಿಸ್ಥಿತಿ ಹಣೆಬರಹ ನಮಗೆ ಬರುತ್ತಲ್ಲಾ ಅಂತ.

ಶ್ರೀ ಜಗದೀಶ್ ಶೆಟ್ಟರ್ .: ಜನ ಏನು ಹೇಳುತ್ತಾರೆ ಅಂದರೆ ಯಾಕೆ ಈ ವಿಚಾರ ನೀವು ಇಲ್ಲಿ ಹೇಳಲೇ ಇಲ್ಲ ಅಂತ ನಮ್ಮನ್ನು ಕೇಳುತ್ತಾರೆ.

ಅಧ್ಯಕ್ಷರು : 12 ಕ್ಲಾಸ್ ಮೇಲೆ ಮಾತನಾಡಿದ್ದಾರೆ...

ಶ್ರೀ ಎ. ರಾಮದಾಸ್ : ಹೌದು ಎಲ್ಲಾ ಕ್ಲಾಸ್ ಮೇಲೂ ಹೇಳಬೇಕಲ್ಲಾ ದಯವಿಟ್ಟು ಬೇರೆ ಸಂದರ್ಭದಲ್ಲಿ ನಾನು ಮಾತನಾಡುವುದಿಲ್ಲ.

ಅಧ್ಯಕ್ಷರು : ಹಾಗಿದ್ದರೆ ನೀವೇ initiate ಮಾಡಬಹುದಿತಲ್ಲಾ.

ಶ್ರೀ ಎ. ರಾಮದಾಸ್ : ಇಲ್ಲಿ 5 ವರ್ಷಕ್ಕೊಮ್ಮೆ assesment ಮಾಡುವುದಕ್ಕೆ ಒಮಿಟ್ ಮಾಡಿರುವುದನ್ನು ತೆಗೆದು as it is principal act ನಲ್ಲಿರುವುದನ್ನು ಹಾಗೇ ಉಳಿಸುವ ಅಧಿಕಾರ ಮಾಡಬೇಕು. ಅಧ್ಯಕ್ಷರೇ, ನಾನು ಆಗಲೇ ಹೇಳಿದೆ: the power of the government to require the corporation to impose taxes - ಇದರಲ್ಲಿ ಆಯಾ ನಗರಪಾಲಿಕೆಗಳು ತನ್ನ ಆರ್ಥಿಕ ಸ್ಥಿತಿ ವ್ಯವಸ್ಥೆಗಳನ್ನೆಲ್ಲಾ ಇಟ್ಟುಕೊಂಡು ಎಷ್ಟು ಟ್ಯಾಕ್ಸ್ ಫಿಕ್ಸ್ ಮಾಡಬೇಕು ಅಂತ ಹೇಳಲು ಅಧಿಕಾರ ಇರುವುದು ಸೆ 146ರಲ್ಲಿ ಆದರೆ ಇದರಿಂದ ಕಾರ್ಪೋರೇಷನ್ನಿನ ಅಧಿಕಾರವನ್ನೇ ಯಾಕೆ ಮೊಟಕು ಮಾಡಲು ಹೋಗುವಿರಿ? ದಯವಿಟ್ಟು ಅವರವರಿಗೇ ಬಿಡಿ. ಅವರವರ ವ್ಯವಸ್ಥೆಯಲ್ಲಿ ಅವರ finance ಹೇಗೆ ನಡೆಸಬೇಕೆಂಬುದಕ್ಕೆ ಸ್ಥಳೀಯ ಸಂಸ್ಥೆಗಳಿಗೆ ಅವಕಾಶ ಕೊಡಲು 146ರಲ್ಲಿ ಪ್ರಾವಿಜನ್ ಇದೆ. ಅದನ್ನು ಹಾಗೇ ಬಿಡುವಂತಹ ಕೆಲಸ ಆಗಬೇಕು ಎಂಬುದು ನನ್ನ ಅಭಿಪ್ರಾಯ. ಇದು ಒಂದು ಭಾಗ ಅಧ್ಯಕ್ಷರೇ. ತಾವು ಹೇಳಿದಿರಿ, ಯಾಕೆ ಸೆಕ್ಷನ್‌ವೈಸ್ ಹೋದಿರಿ ಅಂತ. ಕಳೆದ ಬಾರಿಗೂ ಈ ಬಾರಿಗೂ ಏನಾಗಿದೆ ಅಂತ, ಇಲ್ಲಿಯವರೆಗೆ ನಮ್ಮ ನಾಯಕರು ಹೇಳಿದ ಹಾಗೆ ಜನಸಾಮಾನ್ಯನ ಮನೆಯ ಕಂದಾಯದ ಬಗ್ಗೆ ಆಯಿತು. ಆದರೆ ಇನ್ನೂ 5 ಸೆಕ್ಷನ್ ಸೇರಿಸಿಬಿಟ್ಟಿದ್ದಾರಲ್ಲಾ ಇದರಲ್ಲಿ, ಅದರ ಭಗ್ಗೆನೂ ಹೇಳಬೇಕಾಗಿದೆ. ಅದಕ್ಕೆ ಮೊದಲು ಕಂದಾಯದ ವೈಜ್ಞಾನಿಕ ವ್ಯವಸ್ಥೆಗಳನ್ನು ನೋಡಿಕೊಳ್ಳುವಾಗ ಹೀಗೆ 5 ವರ್ಷಕ್ಕೊಮ್ಮೆ ಇರುವಂತಹದು. ಪ್ರತಿ ವರ್ಷ ಡಿಕ್ಲರೇಷನ್ ಕೊಡುವಂತಹದು, ಸೈಟ್‌ಗೆ ಮನೆಗೆ ಸಪರೇಟಾಗಿ ಕೊಡುವಂತಹದು ಮತ್ತು ವಾಸಮಾಡುವಂತಹರಿಗೆ exemption clause 50% ಅಂತ ಏನಿತ್ತು ಅದರಲ್ಲಿ ತಾವು ಕೊಡುವಂತಹ residential building ಅಂತ ಸೇರಿಸಿ differentiate ಮಾಡುವಂತಹದು– ಇವೆಲ್ಲವನ್ನೂ ಏನೇನು ಬಿಡಬೇಕು

ಅಂತ ಹೇಳಿದ್ದೇನೆ ಅವನ್ನು ಬಿಟ್ಟರೆ ನಾವಿದ್ದನ್ನು ಸ್ವಾಗತ ಮಾಡುತ್ತೇವೆ. ಆದರೆ ಹೀಗೆ ಯಾಕೆ ಸೆಕ್ಷನ್‌ಗಳನ್ನು ತಂದಿರಿ ಅಂತ ನನಗೆ ಗೊತ್ತಾಗುವುದಿಲ್ಲ. ಸೆಕ್ಷನ್ 176ರಲ್ಲಿ in sub-section (1) the words "the value of which does not exceed Rupees two thousand in each instance" shall be omitted. In the same section, for the words twelve months the words two years shall be substituted..... ಅವರು ಹೇಳಿದಾಗ ಒಂದನ್ನು ನಾನು ಸ್ವಾಗತ ಮಾಡಿದೆ. ನಗರಪಾಲಿಕೆಗಳಲ್ಲಿ ಮುನಿಸಿಪಾಲಿಟಿಗಳಲ್ಲಿ ಪ್ರಾಪರ್ಟಿಗಳನ್ನು ಲೀಸ್‌ಗೆ ಕೊಡುವಂತಹದಿರಲಿ ಮಾರಾಟ ಮಾಡಬಾರದು – ನಾನು ತುಂಬಾ ಸ್ವಾಗತ ಮಾಡಿ ಅದನ್ನು ಪತ್ರಿಕಾಗೋಷ್ಠಿಯಲ್ಲೂ ಹೇಳಿದೆ, ಬಹಳ ಒಳ್ಳೆಯ ವಿಚಾರ, ಹಾಗಾದರೆ ಇದನ್ಯಾಕೆ ತಂದಿರಿ? ಯಾವ್ಯಾವ ಮುನಿಸಿಪಾಲಿಟಿಗಳ ಪ್ರಾಪರ್ಟಿ ಉಳಿಸಿಕೊಳ್ಳಬೇಕೂಂತ ಹೇಳುತ್ತೀರಿ ಸೆಕ್ಷನ್ 176ರಲ್ಲಿ "Disposal of property and interest therein" ಇದರಲ್ಲೇನಿದೆ ಯಾವುದಾದರೂ ಅನಿವಾರ್ಯವಾದ ಒಂದು ಪರಿಸ್ಥಿತಿ ಬಂದಾಗ 12 ತಿಂಗಳಿಗೋಸ್ಕರ ಯಾರೋ phisically handicapped ಇರಬಹುದು ಹೀಗೆ ಏನೇನು ಸೆಕ್ಷನ್ ಇದೆ, ಅದರ ರೀತ್ಯಾ ಅವರಿಗೆ 2000 ರೂಪಾಯಿಗಳಿಗಿಂತ ಮೀರದ ರೀತಿಯಲ್ಲಿ ಅಂದರೆ ವರ್ಷಕ್ಕೆ ವ್ಯಾಲ್ಯೂ 2000ಕ್ಕಿಂತ ಜಾಸ್ತಿ ಆಗಬಾರದು ಅಂತಹ ಪ್ರಾಪರ್ಟಿಗಳೇನಾದರೂ ಇದ್ದರೆ ಅಂಥದನ್ನು ಕೊಡಲು ಅವರಿಗೆ ಪ್ರಾವಿಜನ್ ಇದೆ ಅಂತ, ಆದರೆ ನೀವು 2000 ರೂಪಾಯಿ ವ್ಯಾಲ್ಯೂಯೇಷನ್ ಇರುವುದನ್ನು ತೆಗೆದುಹಾಕಿಬಿಡುತ್ತೇವೆ ಅಂದರೆ ಎರಡು ಲಕ್ಷವಾಗಬಹುದು ಎರಡು ಕೋಟಿಯಾಗಬಹುದು ಎಷ್ಟು ಬೇಕಾದರೂ ಆಗಬಹುದು, ಅದರ ವ್ಯಾಲ್ಯೂ ಎಷ್ಟು ಬೇಕಾದರೂ ಹಾಕಲು ನೀವೇ ಪ್ರಾವಿಜನ್ ಮಾಡಿಕೊಟ್ಟಹಾಗಾಯಿತಲ್ಲಾ ಯಾಕೆ ಇದನ್ನು ತಂದಿದ್ದೀರಿ?' ಒಂದು ಕಡೆ ತಾವು ಹೇಳಿದ್ದನ್ನು ನಾನು ಸ್ವಾಗತ ಮಾಡಿದೆ ಆದರೆ ಇಲ್ಲಿ ಯಾಕೆ 2000 ಅಂತ ಇಟ್ಟಿದ್ದಾರೆ? ಅದರ ವ್ಯಾಲ್ಯೂಯೇಷನ್ ಯಾವುದೇ ಕಾರಣಕ್ಕೂ does not exceed Rs. 2000/- in each instance..... ಅಂದರೆ 2000 ರೂಪಾಯಿಗಿಂತ ವ್ಯಾಲ್ಯೂಯೇಷನ್ ಇಲ್ಲದೇ ಇರುವಂತಹದು, ಅಂದರೆ 200 ರೂಪಾಯಿ ಏನೋ ಬಾಡಿಗೆ ಕೊಡುವ ವ್ಯವಸ್ಥೆ ಇರುತ್ತದೆ. ಅದನ್ನು ಮಾತ್ರ ಕೊಡಲು ಆಯಾ local bodiesಗೆ ಅವಕಾಶ ಕೊಟ್ಟಿದ್ದೀರಿ 2000 ರೂಪಾಯಿ ಅನ್ನುವುದು ತೆಗೆದುಬಿಟ್ಟರೆ ನಾಳೆ ಮೆಜೆಸ್ಟಿಕ್‌ನಲೋ ಮೈಸೂರಿನಲ್ಲೋ heart of the city ಯಲ್ಲಿನ ಒಂದು ಪ್ರಾಪರ್ಟಿಯನ್ನು ಯಾವುದನ್ನು ಬೇಕಾದರೂ ಲೀಸ್‌ಗೆ ಕೊಡಬಹುದು. ಆದರೆ ವ್ಯಾಲ್ಯೂಯೇಷನ್ ಎರಡು ಲಕ್ಷವಾಗಬಹುದು ಎರಡು ಕೋಟಿಯಾಗಬಹುದು. ಯಾಕೆ ತೆಗೆಯುತ್ತಿದ್ದೀರಿ? ದಯವಿಟ್ಟು ತೆಗೆಯಬೇಡಿ. ಆ 2000 ಅನ್ನುವುದು ಇದೆ ಆದ್ದರಿಂದ physically handicapped ಅಂಥವರಿಗಾಗಿ ಉಳಿಸುವಂತಹದು ಆಗಬೇಕು. ಜೊತೆಗೆ 12 ತಿಂಗಳಿಗೆ ಮಾತ್ರ ಅಂತ ಇದೆ. ಕಳೆದ ಬಾರಿ ಮಾನ್ಯ ಶ್ರೀಕಂಠಯ್ಯನವರು ರೆಂಟ್ ಆಕ್ಟ್ ತಂದಿದ್ದರಲ್ಲು ಹಾಗೇ ಇದೆ. 11 ತಿಂಗಳ ಆಗ್ರಿಮೆಂಟ್ ಅಂತ ಇದೆ. ಅದಕ್ಕೇ ಕಾರ್ಪೋರೇಷನ್‌ನಲ್ಲೂ 11 ತಿಂಗಳು ಅಂತಾನೇ ಇದೆ. ಅದನ್ನು 2 ವರ್ಷಕ್ಕೆ ನೀವು ಎಕ್ಸ್‌ಟೆಂಡ್ ಮಾಡಿದ್ದೀರಿ, ಅಂದರೆ ಎರಡೆರಡು ವರ್ಷಕ್ಕೊಮ್ಮೆ ಅದನ್ನು ಕೊಡಬಹುದು. ಇದರಿಂದ ಪ್ರಾಪರ್ಟಿಗಳನ್ನು ಹಾಳು ಮಾಡಿಕೊಳ್ಳಲಿಕ್ಕೆ ವಿಶೇಷವಾಗಿ local bodies ನಲ್ಲಿ ಅದು ಬಹಳ ನಡೆಯುತ್ತಿದೆ. ಅದು ಆಗಬಾರದು. In subsection 2 it is said, the value of which does not exceed Rs. 5000/

- in each instance shall be omitted.... ನಾವು ನಿನ್ನೆ ಅಂದಿದ್ದಕ್ಕೆ ಬಹಳ ಬೇಸರ ಮಾಡಿಕೊಂಡರು, ಅವರು ಹೇಳಿದ ಹಗಲುದರೋಡೆ ಎಂಬ ಪದ ಹೇಳುವುದಿಲ್ಲ. ನಾನು ಆ ಪದ ಉಪಯೋಗಿಸುವುದಿಲ್ಲ. ಆದರೆ ಇಲ್ಲಿಯತಕ್ಕೋಸ್ಕರ ಆ ಪದ ಇದೆ? 5000 ರೂಪಾಯಿ ವ್ಯಾಲ್ಯೂಯೇಷನ್‌ಗಿಂತ ಹೆಚ್ಚು ಆಗಿರಬಾರದು, ಯಾವುದನ್ನಾದರೂ ನಗರಪಾಲಿಕೆ ಮುನಿಸಿಪಾಲಿಟಿಗಳು ಬೇರೆಯವರಿಗೆ ಲೀಸ್‌ಗೋ ವಗೈರೆಗೋ ಕೊಡುತ್ತೇವೆ ಅನ್ನುವುದಾದರೆ ಆದರ ವ್ಯಾಲ್ಯೂಯೇಷನ್ 5000 ಕ್ಕಿಂತ ಜಾಸ್ತಿ ಆಗಬಾರದು ಅಂತ ಇದೆ. ಆದರೆ ಇದನ್ನು ಒಮಿಟೇ ಮಾಡಿಬಿಟ್ಟರೆ ಅವರಿಗೆ ಫ್ರೀ ಸಿಕ್ತಲ್ಲಾ ಎಷ್ಟಕ್ಕಾದರೂ ಯಾವ ಆಸ್ತಿಯನ್ನು ಬೇಕಾದರೂ ಯಾರಿಗಾದರೂ ಕೊಟ್ಟುಕೊಳ್ಳಬಹುದಲ್ಲಾ. ಮುನಿಸಿಪಲ್ ಅಧ್ಯಕ್ಷ ಒಬ್ಬೊಬ್ಬ ಬಂದಾಗಲೂ ಏನು ಬೇಕಾದರೂ ಮಾಡಿಕೊಳ್ಳಬಹುದು. ದಯವಿಟ್ಟು ಇಂಥದಕ್ಕೆ ತಾವು ಅವಕಾಶ ಕೊಡಬಾರದು, ಇದನ್ನು ತೆಗೆದುಹಾಕಬೇಕು ಎಂಬುದು ನನ್ನ ಭಾವನೆ ಸೆಕ್ಷನ್ 346 "Leases for places in which animals are kept"- ಇಲ್ಲಿರುವಂತಹದ್ದು ಅಧ್ಯಕ್ಷರೇ, ಪ್ರಾಣಿಗಳ ಸಂರಕ್ಷಣೆ ಮಾಡುವಂತಹದಿರಬಹುದು ಕೋಳಿ ಫಾರಂ ಇಟ್ಟುಕೊಳ್ಳುವಂತಹದಿರಬಹುದು ಅಲ್ಲಿ ಮಟನ್‌ಶಾಪ್ ತೆರೆಯುವಂತದಿರಬಹುದು ಇಂಥದೆಲ್ಲಾ ಆಯಾ ಪ್ರದೇಶದಲ್ಲಿ ಕೇವಲ 11 ತಿಂಗಳ ಆಧಾರದ ಮೇಲೆ ಕೊಡಬಹುದು ಅಂತ ಪ್ರಾವಿಜನ್ ಇದೆ. ಒಂದು ಸಲ ತೆಗೆದುಕೊಂಡ ಮೇಲೆ 5 ವರ್ಷವೂ ಅವನು ಅಲ್ಲೇ ಇರಬಹುದು ಎಂಬುದಕ್ಕೆ ನಾವು ಪ್ರಾವಿಜನ್ ಮಾಡಿಕೊಟ್ಟರೆ ನಗರಗಳ ಹೃದಯಭಾಗದಲ್ಲಿರುವ ಪ್ರದೇಶಗಳಲ್ಲಿ ಒಂದು ಸಲ ನಾವೇನಾದರು licensing authority ಗೆ ಕೊಟ್ಟಿದ್ದೇ ಆದರೆ ನಾಳೆ ಮಟನ್ ಮಾರ್ಕೆಟ್ ಎಲ್ಲೆಲ್ಲಿ ನಗರ ಮಧ್ಯದ ಪ್ರದೇಶ ಇರುತ್ತದೋ ಅಲ್ಲಿಂದ

12.20 ಪಿ.ಎಂ.

ಬೇರೆ ಕಡೆಗೆಲ್ಲೂ ಹೋಗುವುದಿಲ್ಲ. ಹೆಂಡದ ಅಂಗಡಿಗಳು ಎಲ್ಲೆಲ್ಲಿ ಇರಬಾರದು ಎಂದು ಹೇಳುತ್ತೇವೆ ಈ ಲೈಸೆನ್ಸ್ ಸಿಸ್ಟಂನ್ನು ಐದು ವರ್ಷ ಎಂದು ತೆಗೆದುಕೊಂಡು ಹೋದರೆ ಒಂದು ಬಾರಿ ಹೆಂಡದ ಅಂಗಡಿಯನ್ನು ತೆಗೆದರೆ ಐದು ವರ್ಷಗಳ ಕಾಲ ಅವರನ್ನು ಏನೂ ಮಾಡುವ ಹಾಗೆ ಇಲ್ಲ. ಅದಲ್ಲದೆ ಅಬಕಾರಿ ಇಲಾಖೆಯವರು ಅದನ್ನು ಕ್ಯಾನ್ಸಲ್ ಮಾಡಿದರೂ ಕೂಡ ಈ ಒಂದು ಆಕ್ಟ್‌ನ ಅಡಿಯಲ್ಲಿ ಅವಕಾಶವನ್ನು ಮಾಡಿಕೊಂಡು ಹೈಕೋರ್ಟಿಗೆ ಹೋಗಿ ಸ್ಟೇಯನ್ನು ತರುತ್ತಾರೆ. ಏಕೆ ಮಾಡುತ್ತಿದ್ದೀರಿ? ನಿಮಗೆ ಅಧಿಕಾರವನ್ನು ನೀವು ಇಟ್ಟುಕೊಳ್ಳಿ. ಆಯಾ ಲೋಕಲ್ ಬಾಡಿಗಳಲ್ಲಿ ರಿನ್ಯೂಯಲ್‌ನ ಪ್ರತಿ ವರ್ಷ ಏನು ಇದೆ. ಅದನ್ನು ಇಟ್ಟುಕೊಳ್ಳಿ. ಐದು ವರ್ಷಗಳ ಕಾಲ ಇರುವಂಥದ್ದನ್ನು ತಾವು ಮತ್ತೆ ಅದನ್ನು ಎಕ್ಸ್‌ಟೆಂಡ್ ಮಾಡುವ ಕೆಲಸವನ್ನು ಮಾಡಬೇಡಿ. ಸೆಕ್ಷನ್ 346ರಲ್ಲಿ ಏನು ಇದೆ. ಅದು ಆಸ್ ಇಟ್ ಈಸ್ ಏನು ಇದೆ. ಅದನ್ನು ಉಳಿಸಿಕೊಳ್ಳುವಂಥ ಕೆಲಸವನ್ನು ಮಾಡಿ. ಅಮೆಂಡ್‌ಮೆಂಟ್ ಟು ಸೆಕ್ಷನ್ 348. ಸೆಕ್ಷನ್ 348ರಲ್ಲಿ provision of halting places and car stands. ಇಲ್ಲಿ ಒಂದು ಸೈಕಲ್ ಸ್ಟಾಂಡ್ ಪ್ರೈವೇಟ್‌ನವರಿಗೆಲ್ಲಾ ಕೊಡುತ್ತಾರಲ್ಲಾ, ಸೈಕಲ್ ಸ್ಟಾಂಡ್ ಇರಬಹುದು. ಗಾಡಿಗಳನ್ನು ನಿಲ್ಲಿಸಿಕೊಳ್ಳುವಂಥದ್ದು, ಆಮೇಲೆ ಪ್ರೈವೇಟ್ ಮಾರ್ಕೆಟಿಂಗ್‌ಗೆ ಎಂದು ಹೇಳಿ ತರಕಾರಿಗಳನ್ನು ಇಟ್ಟುಕೊಳ್ಳುವಂಥದ್ದು. ಇವೆಲ್ಲಾ ಒಂದು ಭಾಗ. ಒಂದು ಸಲ ಅವರನ್ನು ಕೇಳುತ್ತೇನೆ. ಈ ಬಿಲ್ ಪಾಸಾಗುವುದಕ್ಕೂ ಮುಂಚೆ ಕೆಂಪೇಗೌಡ ರೋಡಿಗೆ ಇವತ್ತು ಬರಬೇಕು. ಕಳೆದ ಹತ್ತು ದಿವಸಗಳ ಕಾಲದಿಂದ ಸುಮಾರು 60 ರಿಂದ 70 ಅಂಗಡಿಗಳು ಜಾಸ್ತಿಯಾಗಿದೆ.

ಇವತ್ತೂ ನಡೆಯುತ್ತಿದೆ ಅಲ್ಲಿ. ನಾನು ಅಲ್ಲಿಗೆ ಹೋಗಿ ಕೇಳಿದೆ ಏಕೆ ಎಂದು ಅವರಿಗೆ ಹೇಗೆ ಗೊತ್ತೋ ಗೊತ್ತಿಲ್ಲ. ಈ ಆಕ್ಟ್ ಬರುತ್ತೆ ಎಂದು. ಈ ಆ್ಯಕ್ಟಿನ ಷೆಲ್ಟರನ್ನು ತೆಗೆದುಕೊಳ್ಳುವುದಕ್ಕೋಸ್ಕರವಾಗಿ ಮುಖ್ಯವಾದ ರಸ್ತೆಗಳಲ್ಲಿ ಪೆಟ್ಟಿಗೆ ಅಂಗಡಿಗಳು ಅನ್ ಆಥರೈಸ್ ಆಗಿ. ಅದಕ್ಕೆ ತಾವು ಈಗ ಅವಕಾಶವನ್ನು ಮಾಡಿಕೊಡುತ್ತಿದ್ದೀರಿ, ಎಂದು ಕಾಣುತ್ತಾರೆ. ಯಾರಿಗೆ ಲೈಸೆನ್ಸ್ ಇಲ್ಲವೋ ಅಂಥವರು ಲೈಸೆನ್ಸ್ ಫೀ ಕಟ್ಟಿ ಅವರು ಐದು ವರ್ಷಗಳ ಕಾಲ ಅಲ್ಲಿರಬಹುದು ಎನ್ನುವುದಕ್ಕೆ ಮಾಡುವಂಥ ವ್ಯವಸ್ಥೆಗಳು ಇದು ಕರಾಳವಾದ ಶಾಸನವಾಗುತ್ತದೆ. ಆದ್ದರಿಂದ ಈ ಸೆಕ್ಷನ್ ಬಗ್ಗೆ ಒಂದು ಸಲ ಮರುಚಿಂತನೆಯನ್ನು ಮಾಡುವ ಅವಶ್ಯಕತೆ ಇದೆ. ಆ ದೃಷ್ಟಿಯಲ್ಲಿ ದಯವಿಟ್ಟು ಸೆಕ್ಷನ್ 348 ಏನು ಇದೆ ಅದು ಐದು ವರ್ಷ ಎಂದು ಇದೆ. ಅದನ್ನು ತೆಗೆದುಹಾಕಿದ್ದರೆ ಚೆನ್ನಾಗಿರುತ್ತಿತ್ತು ಎಂಬುದು ನನ್ನ ಮನಸ್ಸಿನ ಭಾವನೆ. ಅಮೆಂಡ್‌ಮೆಂಟ್ ಟು ಸೆಕ್ಷನ್ 351. Licence for private cart-stand. ಇದರಲ್ಲಿ 351ರಲ್ಲಿ ಆಯಾ ಸ್ಥಳೀಯ ಸಂಸ್ಥೆಗಳಿಗೆ ಪ್ರತಿವರ್ಷವೂ ಹರಾಜು ಮಾಡುತ್ತಾರೆ. ಅದು ಸ್ಕೂಟರ್ ಸ್ಟಾಂಡ್ ಇರಬಹುದು. ಸೈಕಲ್ ಸ್ಟಾಂಡ್ ಇರಬಹುದು. ಅಥವಾ ಬೇರೆ ಯಾವುದೇ ಆಗಿರಲಿ. ತನ್ನಲ್ಲಿರುವಂಥ ಒಂದು ಅರ್ನಿಂಗ್ಸ್‌ಗೆ ಏಕೆಂದರೆ ಪ್ರತಿ ವರ್ಷ ಹರಾಜಿನಲ್ಲಿ 10 ಪರ್‌ಸೆಂಟ್, 15 ಪರ್‌ಸೆಂಟ್, 20 ಪರ್‌ಸೆಂಟ್ ಜಾಸ್ತಿಯಾಗುತ್ತಾ ಹೋಗುತ್ತದೆ. ಆದರೆ ಇದನ್ನು ಒಂದು ವರ್ಷಕ್ಕೆ ಅವರೇನು ತೆಗೆದುಕೊಂಡಿದ್ದಾರೆ. ಅವರಿಗೆ ಐದು ವರ್ಷಗಳ ಅದೇ ರೀತಿ ಎಕ್ಸ್‌ಟೆಂಡ್ ಮಾಡಿದರೆ ಪರಿಸ್ಥಿತಿ ಏನು ನಾಳೆ? ಅಲ್ಲಿರುವಂಥ ಸ್ಥಳೀಯ ಸಂಸ್ಥೆಗಳಿಗೆ ಅರ್ನಿಂಗ್ ಕೆಪ್ಯಾಸಿಟಿ ಹೇಗೆ ಆಗುತ್ತದೆ? ಹಾಗಾಗಿ ಪ್ರತಿ ವರ್ಷ ಏನು ಅದನ್ನು ಅದು ಲೀಸಿಂಗ್ ಇರಬಹುದು. ಇನ್ನೊಂದು ಇರಬಹುದು. ಕೊಡಲಿಕ್ಕೆ ಅವಕಾಶ ಇದೆ. ಲೈಸೆನ್ಸಿಂಗ್‌ಗೆ ಪ್ರಾವಿಷನ್ ಮಾಡಿದ್ದೀರಿ. ಅದು ಮುಂಚೆ ಹೇಗಿತ್ತೋ, ಹಾಗೆ ಉಳಿಸಿಕೊಳ್ಳುವಂಥ ವ್ಯವಸ್ಥೆಗಳನ್ನು ಮಾಡಬೇಕೆನ್ನುವಂಥದ್ದು ನನ್ನ ವಿಚಾರ. ಮಟಲ್ ಸ್ಟಾಲ್‌ಗಳು ಇವೆಲ್ಲವೂ ಪ್ರತಿವರ್ಷ ರಿನ್ಯೂವಲ್ ಇದ್ದುದ್ದನ್ನು ಐದು ವರ್ಷ ಅಂತ ಮಾಡಲಾಗಿದೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಒಂದು ವರ್ಷ ಎಂದು ಇರುವುದನ್ನು ಐದು ವರ್ಷ ಎಂದು ಮಾಡಿದ್ದಾರಾ?

ಶ್ರೀ ಎ. ರಾಮದಾಸ್ : ಅದು ಹಾಗಲ್ಲ. ಪ್ರತಿಯೊಂದಕ್ಕೂ ನಾನು ಹೇಳುತ್ತಿಲ್ಲ. ಕೆಲವು ಪರ್ಟಿಕ್ಯುಲರ್ ಎಲ್ಲದಕ್ಕೂ ನಾನು ಹೇಳುತ್ತಿಲ್ಲ. ಲೈಸೆನ್ನಿಂಗ್ ಸಿಸ್ಟಂ ತನ್ನಿ ಎಂತಲ್ಲ. ಬ್ಲ್ಯಾಂಕ್ ಆಗಿ ಕೊಟ್ಟುಬಿಡಬೇಡಿ. ದಯವಿಟ್ಟು ಕೆಲವು ವಿಚಾರಗಳಲ್ಲಿ ಉದಾ:ಗೆ ಸೈಕಲ್ ಸ್ಟಾಂಡ್‌ಗೆ ಪ್ರಾವಿಷನನ್ನು ಮಾಡಿರುತ್ತೀರಿ. ಪ್ರತಿ ವರ್ಷವೂ ಅವರು ಹರಾಜು ಮಾಡುತ್ತಾರೆ. ಪ್ರತಿ ವರ್ಷವೂ ಹರಾಜು ಮಾಡಿದರೆ ಪ್ರತಿ ವರ್ಷವೂ ಲೋಕಲ್ ಬಾಡಿಗೆ ಹಣ ಜಾಸ್ತಿ ಬಂದಿರುತ್ತೆ. ಒಂದೇ ಸಲದಲ್ಲಿ ತಾವು ಐದು ವರ್ಷಗಳ ಕಾಲಕ್ಕೆ ಲೈಸೆನ್ಸಿಂಗ್‌ನ್ನು ಕೊಟ್ಟಂಥ ಸಂದರ್ಭದಲ್ಲಿ ಆಯಾ ಸ್ಥಳೀಯ ಸಂಸ್ಥೆಗಳಲ್ಲಿರುವಂಥ ಫೈನಾನ್ಸ್‌ಗೆ ಬಹಳ ಸಮಸ್ಯೆಗಳಾದಂತಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಡಿ.ಕೆ. ಶಿವಕುಮಾರ್ : ಅಂದರೆ ಮುಸ್ಲಿಂಗಳೆಲ್ಲಾ ಪ್ರತಿ ವರ್ಷವೂ ಕಾರ್ಪೋರೇಷನ್‌ಗೆ ಬರಲಿ. ಬೇರೆ ಜನವೆಲ್ಲಾ ಐದು ವರ್ಷಕ್ಕೆ ಒಂದು ಸಾರಿ ಬರಲಿ ಎಂತಲೋ? ಮಟನ್ ಸ್ಟಾಲ್ ಇದೆಲ್ಲಾ.

ಶ್ರೀ ಎ. ರಾಮದಾಸ್ : ನೀವೇ ಬರೆದಿದ್ದೀರಿ. ನಾನು ಹೇಳುತ್ತಿಲ್ಲ. ನಿಮ್ಮ ಲೈಸೆನ್ಸ್ ನಲ್ಲಿದೆಯಲ್ಲಾ, ಮಟನ್ ಸ್ಟಾಲ್ ಎಂದಾಕ್ಷಣ ಮುಸ್ಲಿಂ ಎಂದು ದಯವಿಟ್ಟು ತೆಗೆದುಕೊಳ್ಳಬೇಡಿ.

ಎಲ್ಲಾ ಸಮಾಜದವರೂ ಮಟನ್ ಸ್ಟಾಲ್‌ಗಳನ್ನು ಇಟ್ಟುಕೊಂಡಿದ್ದಾರೆ. ಏಕೆ ನಿಮಗೆ ಆ ತರಹ ಬಂತು? ಬಿಜೆಪಿ ಯವರು ಮಾತನಾಡುತ್ತಿದ್ದಾರೆ. ಅದು ಮಟನ್ ಸ್ಟಾಲ್ ಎಂದಾಕ್ಷಣ ಮುಸ್ಲಿಂರವರ ವಿರುದ್ಧವಾಗಿದೆ ಎನ್ನುವಂಥಾ ಭಾವನೆಗಳು ಬಂದರೆ ಇದು ಒಳ್ಳೆಯ ವಿಚಾರವಲ್ಲ. ಮಟನ್ ಸ್ಟಾಲ್ ಎಂದರೆ ಎಲ್ಲಾ ಸಮಾಜದವರೂ ಇದ್ದಾರೆ. ಆ ತರಹ ಭಾವನೆಗಳನ್ನು ಇಟ್ಟುಕೊಂಡು ಯಾರದೋ ದೃಷ್ಟಿಯಲ್ಲಿಟ್ಟುಕೊಂಡು ನಾನು ಮಾತನಾಡುತ್ತಿಲ್ಲ. ನಾನು ಸಪರೇಟಾಗಿ ಏನೂ ಓದುತ್ತಿಲ್ಲ. ಆ್ಯಕ್ಟ್‌ನಲ್ಲಿ ನೀವೇ ಹೇಳಿದ್ದೀರಿ. ಮಟನ್ ಸ್ಟಾಲ್‌ಗಳು, ನೀವೇ ಬರೆದುಕೊಂಡು ಬಂದಿದ್ದೀರಿ. ಬುಚರೀಸ್ ಅದರಲ್ಲಿರುವಂಥ ವಿಚಾರವನ್ನು ಓದಿದೆನೇ ಹೊರತು ನಾನಾಗಿ ಸಪರೇಟಾದಂಥ ಓದುವಂಥ ವ್ಯವಸ್ಥೆಗಳನ್ನೇನೂ ನಾನು ಮಾಡಿಲ್ಲ. ಹಾಗಾಗಿ ಪ್ರಮುಖವಾಗಿ ಇಂಥ ವಿಚಾರಗಳಲ್ಲಿ ತಾವು ಲೈಸೆನ್ಸಿಂಗ್ ವ್ಯವಸ್ಥೆಗಳನ್ನು ಕೊಡುವಾಗ ನಗರಪಾಲಿಕೆಯ ಒಂದು ಆರ್ಥಿಕ ಸ್ಥಿತಿಯನ್ನು ನೋಡಿಕೊಳ್ಳಬೇಕು. ಎನ್ನುವಂಥದ್ದು. ಇಲ್ಲಿ ಸೆಕ್ಷನ 353. ಅದರಲ್ಲಿ ಪ್ರತಿ ವರ್ಷಕ್ಕೆ ತಾವು ಅದರ ಬಗ್ಗೆ ಹೇಳಿದಿರಿ. ಯಾವುದೋ ಒಂದು ಗ್ಯಾರೇಜನ್ನು ನಡೆಸುತ್ತಿರುತ್ತಾರೆ. ಯಾವುದೇ ಒಂದು ಪ್ರದೇಶದಲ್ಲಿ ನಾಯ್ಸ್ ಇದೆ. ಅಲ್ಲಿ ಆಗುವುದಿಲ್ಲವೆಂದು ಹೇಳಿ ಅಲ್ಲಿ ಅಬ್ಜೆಕ್ಷನನ್ನು ಮಾಡಿದರೆ ರೆಸಿಡೆನ್ಸಿಯಲ್ ಏರಿಯಾ ಆದರೆ, ಪಕ್ಕದಲ್ಲಿ ಒಂದು ಆಸ್ಪತ್ರೆ ಬಂದರೆ, ಅಲ್ಲಿರುವಂಥ ಪಲ್ಯೂಷನ್ ಕಂಟ್ರೋಲ್ ಬೋರ್ಡ್ ಏನಾದರೂ ಕ್ಲಿಯರೆನ್ಸ್ ಕೊಡದೇ ಹೋದರೆ ಒಂದು ವರ್ಷದೊಳಗಡೆ ತೆಗೆದುಹಾಕುತ್ತೀರಿ. ನೀವು ಐದು ವರ್ಷಗಳ ಕಾಲ ಬ್ಲ್ಯಾಂಕ್ ಆಗಿ ಕೊಟ್ಟುಬಿಟ್ಟರೆ ಅಲ್ಲಿರುವ ನರ್ಸಿಂಗ್ ಹೋಂಗಳ ಕತೆಯೇನು? ಶಾಲೆಗಳ ಪರಿಸ್ಥಿತಿ ಏನು? ಅಲ್ಲಿರುವಂಥ ಸ್ಥಿತಿಗತಿಗಳೇನು? ಇಲ್ಲಿ ಕೇವಲ ಯಾವುದೋ ಒಂದು ಸಮಾಜದ ದೃಷ್ಟಿ ಇಟ್ಟುಕೊಂಡು ನಾನು ಮಾತನಾಡುತ್ತಿಲ್ಲ. ದಯಮಾಡಿ ಕ್ಷಮಿಸಿ. ರೆಸಿಡೆನ್ಸಿಯಲ್ ಪ್ರದೇಶದಲ್ಲಿ ವಾಸ ಮಾಡುವಂಥ ವ್ಯಕ್ತಿಗಳು ಅಲ್ಲಿ ಇಂಥ ಒಂದು ವ್ಯವಸ್ಥೆಗಳು ಯಾವುದೋ ಒಂದು ಟಿನ್ ರಿಪೇರಿ ಮಾಡುವಂಥದ್ದು, ನಮ್ಮಲ್ಲೇ ಒಂದು ಸಮಸ್ಯೆ ಬಂತು. ಯಾರು ಪ್ರತಿ ದಿವಸ ಎಣ್ಣೆ ಮತ್ತು ತುಪ್ಪವನ್ನು ತೆಗೆದುಕೊಂಡು ಹೋಗುವಂಥವರು ಟಿನ್‌ಗಳನ್ನು ಕ್ಲೀನ್ ಮಾಡಲಿಕ್ಕೋಸ್ಕರವಾಗಿ ಸಿಟಿ ಮಧ್ಯದಲ್ಲಿ ಒಂದು ಜಾಗವನ್ನು ಪಡೆದರು. ಅಲ್ಲಿ ಪ್ರತಿನಿತ್ಯ ಕಾಯಿಸುವುದು, ಒಡೆಯುವುದು, ಇಡೀ ರಾತ್ರಿ ಜನ ಮಲಗುವುದಕ್ಕಾಗುತ್ತಿರಲಿಲ್ಲ. ಕೊನೆಗೆ ಪಲ್ಯೂಷನ್ ಕಂಟ್ರೋಲ್ ಬೋರ್ಡ್ ಬಂದು ನಗರಪಾಲಿಕೆಗೆ ಲೈಸೆನ್ಸ್ ಕ್ಯಾನ್ಸಲೆ ಮಾಡಿ ಎಂದರು. ಆದರೆ ನೀವು ಐದು ವರ್ಷಗಳ ಕಾಲ ಬ್ಲ್ಯಾಂಕ್ ಆಗಿ ಕೊಟ್ಟು ಬಿಟ್ಟರೆ ಅವರ ಪರಿಸ್ಥಿತಿ ಏನಾಗಬೇಕು? ಇದು ನನ್ನ ದೃಷ್ಟಿಯಲ್ಲಿರುವಂಥದ್ದು. ದಯವಿಟ್ಟು ಇದರ ಬಗ್ಗೆ ಪುನರ್ ಚಿಂತನೆ ಮಾಡುವಂಥ ಒಂದು ಯೋಚನೆಯನ್ನು ಮಾಡಬೇಕೆನ್ನುವುದು ನನ್ನ ಮನಸ್ಸಿನ ಭಾವನೆ ಸೆಕ್ಷನ್ 372. ಇದರಲ್ಲಿ ನೀವೇನು ಮಾಡುತ್ತಿದ್ದೀರಿ, ತರಕಾರಿ, ಖಾಸಗಿಯಾಗಿ ತರಕಾರಿ ಮಾರುವಂಥದ್ದು ಇರಬಹುದು. ಬೇರೆ ಬೇರೆ ಪ್ರೈವೇಟ್ ಮಾರ್ಕೆಟ್‌ಗಳಿಗೆ ಪ್ರಾವಿಷನನ್ನು ಮಾಡಿಕೊಡುತ್ತೇವೆಂದು ಅದರಲ್ಲಿ ನಾನೂ ಕೂಡ ಸ್ವಾಗತವನ್ನು ಮಾಡುತ್ತೇನೆ. ಹಾಕರ್ಸ್ ಜೋನನ್ನು ಮಾಡಿಕೊಡುವಂಥದ್ದು ಆಗಬೇಕು. ಆದರೆ ಪ್ರತಿ ವರ್ಷ ಅದಕ್ಕೆ ಹಾಕರ್ಸ್ ಜೋನ್‌ನಲ್ಲಿ ಗುರುತು ಮಾಡಿ ಅವರಿಗೆ ತೆಗೆದುಕೊಳ್ಳುವಂಥ ವ್ಯವಸ್ಥೆಗಳಿವೆ. ಈ ಪ್ರೈವೇಟ್ ಮಾರ್ಕೆಟಿಂಗ್‌ಗೂ ಕೂಡ ನೀವು ಕೊಡುವ ವ್ಯವಸ್ಥೆಯಲ್ಲಿ ಐದು ವರ್ಷಗಳ ಕಾಲಕ್ಕೆ ಎಕ್ಸ್‌ಟೆಂಡ್ ಮಾಡುವುದು ಇದೆ. ಇದರ ಇಂಟೆನ್ಷನ್ ಏನು ಎಂಬುದು ನನಗೆ ಅರ್ಥವಾಗಿಲ್ಲ. ಏಕೆಂದರೆ ಅದರಲ್ಲೇನೂ ಹೇಳಿಲ್ಲ. ಯಾವ ಕಾರಣಗಳಿಗೋಸ್ಕರವಾಗಿ ನಾನು ತರುತ್ತಿದ್ದೇವೆ ಎಂದು ತಾವು ಹೇಳಿಲ್ಲ. ಹಾಗಾಗಿ ಆ ರಿನ್ಯೂಯಲ್

ಮಾಡುವಂಥದ್ದು ಏನು ಇದೆ. ಅದು ಪ್ರತಿ ವರ್ಷ ಇಡುವಂಥ ವ್ಯವಸ್ಥೆಗಳಾಗಬೇಕು ಎನ್ನುವುದು ನನ್ನ ಭಾವನೆ. ಹಾಗೆ ಪೌಲ್ಟ್ರೀಸ್‌ಗಳು, ಸೆಕ್ಷನ್ 381 ರಲ್ಲಿದೆ. ಪಲ್ಯೂಷನ್ ಕಂಟ್ರೋಲ್ ಬೋರ್ಡ್, ಇದು ಬೆಂಗಳೂರಿಗೆ ಮೈಸೂರಿಗೇನೂ ಸಮಸ್ಯೆ ಇಲ್ಲ. ಆಯಾ ಮುನಿಸಿಪಾಲಿಟಿಗಳನ್ನು ತೆಗೆದುಕೊಳ್ಳಿ. ಮುನಿಸಿಪಾಲಿಟಿಗೆ ಸೇರಿದಂಥ ಸಮಯದಲ್ಲಿ ಅಂದರೆ ಬಳ್ಳಾರಿಯಲ್ಲಿ ಕಳೆದ ಬಾರಿ ನಾವೊಂದು ವಿಸಿಟ್‌ಗೆ ಹೋಗಿದ್ದೆವು – ಸಂಡೂರಿನ ಪಕ್ಕದಲ್ಲೇ ಪೌಲ್ಟ್ರಿ ಫಾರಂಗಳಿಗೆ ಇದೇ ರೀತಿಯಾದಂಥ ಲೈಸೆನ್ಸ್‌ನ್ನು ಮುನಿಸಿಪಾಲಿಟಿ ಕೊಟ್ಟಿತು. ಆ ಸಂಡೂರಿನ ಪಕ್ಕದಲ್ಲಿ ಸುಮಾರು 1200 ಪೌಲ್ಟ್ರಿ ಫಾರಂಸ್‌ಗಳು ಬಂತು. ಆಶ್ಚರ್ಯವಾಗುತ್ತದೆ. ನನ್ನ ಹತ್ತಿರ ಫೋಟೋಸ್ ಕೂಡ ಇದೆ. ಅಲ್ಲಿ ಜನ ಏನು ಹೇಳಿದರು, ಮುನಿಸಿಪಾಲಿಟಿಗೆ ಪತ್ರವನ್ನು ಬರೆದರು. ನಾವು ಪ್ರತಿ ದಿವಸ ಮನೆಯಲ್ಲಿ ಊಟ ಮಾಡುವುದಕ್ಕಾಗುವುದಿಲ್ಲ. ಅಷ್ಟು ನೊಣಗಳು ನಮ್ಮಲ್ಲಿದೆ ಆಶ್ಚರ್ಯ ಇರಬಹುದು. ಬೇಕಾದರೆ ಅವರು ಅದನ್ನು ತರಿಸಿಕೊಳ್ಳಲಿ. ಅಲ್ಲಿಯ ಸ್ಥಳೀಯ ಸಂಸ್ಥೆ ಪ್ರತಿಯೊಬ್ಬರ ಮನೆಗೊಂದೊಂದು ಮಸ್ಕಿಟೋ ಕರ್ಟನ್‌ನನ್ನು ಕೊಟ್ಟರು. ಕಳೆದ ಮೂರು ವರ್ಷದಲ್ಲಿ ಅಲ್ಲಿರುವಂಥ ನೊಣಗಳನ್ನು ತಡೆಯಲಾರದೆ ಮಸ್ಕಿಟೋ ಕರ್ಟನ್ ಒಳಗಡೆ ಕುಳಿತು ಊಟ ಮಾಡುವಂಥದ್ದು. ಒಂದು ಫೋಟೋ ಡೆಕನ್ ಹೆರಾಲ್ಡ್‌ನಲ್ಲಿ ಬಂದಿತ್ತು. ಒಂದು ಮಗು ಒಂದು ಬೌಲನ್ನು ಇಟ್ಟುಕೊಂಡಿದೆ. ಅನ್ನದ ಬೌಲ್ ಮೇಲೆ ಅಷ್ಟು ನೊಣಗಳಿವೆ. ಆ ಒಂದು ಫೋಟೋ ಕೂಡ ಬಂದಿತ್ತು. ಅಲ್ಲಿ ಮೆಸ್ಕಿಟೋ ಕರ್ಟನ್‌ಗಳನ್ನು ಆಯಾ ಸ್ಥಳೀಯ ಸಂಸ್ಥೆಗಳು ಕೊಟ್ಟು ಅದರೊಳಗಡೆ ಕುಳಿತು ಊಟ ಮಾಡಿ ಎನ್ನುವುದಾದರೆ ನೀವು ಸೆಕ್ಷನ್ 381 ಅಡಿಯಲ್ಲಿ ಏನು ಮಾಡಿದ್ದೀರಿ? 381 ರಲ್ಲಿ ಪೌಲ್ಟ್ರಿ, ಹಾಗೆಯೇ ಇನ್ನೂ ಬಹಳಷ್ಟು ಇದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಐದು ವರ್ಷದ ಕೊನೆಯವರೆಗೂ ಅವರು ನಮ್ಮ ಹತ್ತಿರ ಬರಬೇಕಾಗಿಲ್ಲ. ಐದು ವರ್ಷದ ಕೊನೆಯವರೆಗೂ ಅವರು ನಮ್ಮ ಹತ್ತಿರ ಬರಬೇಕಾಗಿಲ್ಲವೆನ್ನುವುದಾಧರೆ ಪಲ್ಯೂಷನ್ ಕಂಟ್ರೋಲ್ ಬೋರ್ಡ್ ಇರಬಹುದು. ಬೇರೆ ಬೇರೆ ವ್ಯವಸ್ಥೆಗಳು ಏನು ಇದೆ, ಏಕೆಂದರೆ ಸ್ಥಳೀಯ ಸಂಸ್ಥೆಗಳಲ್ಲಿ ವಿಶೇಷವಾಗಿ ಜನರು ವಾಸ ಮಾಡುವಂಥ ಪ್ರದೇಶದಲ್ಲಿ ಕೇವಲ ಟ್ಯಾಕ್ಸ್ ಮಾತ್ರವಲ್ಲ. ನಾವು ಅವರ ರಕ್ಷಣೆಯನ್ನು ಮಾಡುವ ಉದ್ದೇಶದಿಂದಲೂ ಕೂಡ ಈ ವಿಚಾರವನ್ನು ಹೇಳುತ್ತಿದ್ದೇನೆಂದು ಹೇಳುತ್ತಾ ಕೊನೆಯ ಒಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇವತ್ತು ನಿಮ್ಮ 34 ಇದರಲ್ಲಿ – Transitory provision:

"Notwithstanding anything contained in the Principal Act as amendeded by this Act for the year 2002-03 and 2003-04, the property tax payable shall be paid within the 30th September and on such payment no penalty shall be levied.

It the person liable to pay the property tax, files returns and also pays tax due within 30th September 2003, he shall be allowed a rebate of 5% of tax payable by him."

ಇಲ್ಲಿ ಯಾವುದೇ ಆಕ್ಟ್ ತಂದರೂ ಕೂಡ ಇವತ್ತು ನಾವು ಈ ಬಿಲ್‌ನ್ನು ಪಾಸ್ ಮಾಡಿ ಕೊಡುತ್ತೇವೆ. ಅಥವಾ ಆರ್ಡಿನೆನ್ಸ್ ನಿಮ್ಮ ಹತ್ತಿರ ಬಂದಿದೆ. ಅವತ್ತಿಂದ ಮುಂದಕ್ಕೆ ಜಾರಿಗೆ ತನ್ನಿ. ಹೇಗೆ 2002ಕ್ಕೆ

ನೀವು ತರಲಿಕ್ಕೆ ಸಾಧ್ಯ ಇದೆ? ಯಾವುದೇ ಆಕ್ಟ್ ಕಾನೂನು ಪ್ರಕಾರದಲ್ಲಿ ಯಾವ ದಿನ ಪಾಸಾಗುತ್ತೋ ಅಲ್ಲಿಂದ ಮುಂದಕ್ಕೆ ಬರುವಂಥದ್ದೇ ಹೊರತು ರೆಟ್ರಾಸ್ಪೆಕ್ಟೀವ್ ಎಲ್ಲಿಂದ ಬರುತ್ತೆ? ಈ ದೇಶದಲ್ಲಿ ಎಲ್ಲೂ ನಾನು ಕಂಡಿಲ್ಲ. ಇವತ್ತು ನ್ಯಾಯಾಲಯದಲ್ಲಿ ತಡೆಯಾಜ್ಞೆ ಕೊಟ್ಟಿರುವುದೂ ಕೂಡ ಅದರ ಆಧಾರದ ಮೇಲೆ. ಅದು ನನ್ನ ವಿಚಾರ. ಯಾವುದೇ ಒಂದು ಕಾನೂನು ಬಂದರೆ ಅದು ಪ್ರಾಸ್ಪೆಕ್ಟೀವ್ ಆಗಿರುತ್ತದೆಯೇ ಹೊರತು ರೆಟ್ರಾಸ್ಪೆಕ್ಟೀವ್ ಆಗಿರುವುದಿಲ್ಲ. ರೆಟ್ರಾಸ್ಪೆಕ್ಟೀವ್ ಆಗಿ ಇವತ್ತು ಜಾರಿಗೆ ಹೇಗೆ ಕೊಡುತ್ತೀರಿ?

(ಶ್ರೀ ಬಿ.ಆರ್. ಯಾವಗಲ್ ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು) 2002 ರಿಂದ 2003ರವರೆಗೆ ಕೊಡಬೇಕಾಗಿರುವಂತಹ ಕಂದಾಯವನ್ನು ಕೊಟ್ಟರೆ ಐದು ಪರ್ಸೆಂಟ್, ಕೊಡಲಿಲ್ಲ ಎನ್ನುವುದಾದರೆ ಫೆನಾಲ್ಟಿ ಎಂದರೆ ಹೌ ಕನ್ ಇಟ್ ಬಿ ಹಾಗಾಗಿ ದಯವಿಟ್ಟು ಅದನ್ನು ತೆಗೆಯಬೇಕು. ಕಾನೂನಿಗೆ ಬಾಹಿರವಾಗಿರುವಂತಹದು, ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್‌ಗೆ ವಿರುದ್ಧವಾಗಿರುವಂತಹದು. ಆ ದೃಷ್ಟಿಯಲ್ಲಿ ನಾವು ಹೇಳಿದಂತಹ ಇಷ್ಟೂ ಅಮೆಂಡ್‌ಮೆಂಟ್‌ಗಳು ಏನು ಇವೆ ಇದು ಕಾನೂನು ಬಾಹಿರವಾಗಿರುವಂತಹದು, ಜೊತೆಗೆ ಜನಗಳಿಗೆ ಪೂರಕವಾಗಿರುವಂತಹದು. ಜನಗಳ ಮೇಲೆ ಒಂದು ದೊಡ್ಡ ಆಘಾತವನ್ನು ನಿರ್ಮಾಣ ಮಾಡುವಂತಹದು. ಈ ದೃಷ್ಟಿಯಲ್ಲಿ ಇಷ್ಟೂ ವಿಚಾರಗಳಿಗೆ ಅಮೆಂಡ್‌ಮೆಂಟನ್ನು ತರುವುದಾದರೆ ನಾವೆಲ್ಲರೂ ಕೂಡ ಸ್ವಾಗತ ಮಾಡುತ್ತೇವೆ. ಅಮೆಂಡ್‌ಮೆಂಟ್ ತರಲಿಕ್ಕೆ ಏನಾದರೂ ಸ್ವಲ್ಪ ಸಮಸ್ಯೆಗಳು ಇಲ್ಲಿ ಬಂದರೆ ದಯಮಾಡಿ ಇದನ್ನೂ ಕೂಡ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕೊಡಿ. ಅವರುಗಳು ಮುನಿಸಿಪಾಲಿಟಿಗಳಿಗೆ ಹೋಗಿ ಎಲ್ಲಾ ವಿಚಾರಗಳನ್ನೂ ತಿಳಿದುಕೊಂಡು ಬರಲಿ. 4–6 ಮುನಿಸಿಪಾಲಿಟಿ, 4–6 ಕಾರ್ಪೊರೇಷನ್‌ಗೆ ಹೋಗಿ ಬರಲಿ. ಅನಂತರದಲ್ಲಿ ಅದನ್ನು ಜಾರಿಗೆ ಕೊಡುವಂತಹದು ಮಾಡಿ. ಆಗ ವೈಜ್ಞಾನಿಕವಾಗಿ ಕೊಟ್ಟಾಗ ನಾವು ಸ್ವಾಗತವನ್ನು ಮಾಡುತ್ತೇವೆ. ಆದರೆ ಇದನ್ನು ಆನ್ ಇಟ್ ಈಸ್ ತರುವುದಾದರೆ ಇದಕ್ಕೆ ನಮ್ಮ ಸಂಪೂರ್ಣವಾದಂತಹ ವಿರೋಧ ಇದೆ. ಕಾರಣ ಎಂದರೆ ಇದು ಸುಪ್ರೀಂ ಕೋರ್ಟಿನ ವಿರುದ್ಧವಾಗಿದೆ. ನ್ಯಾಯಾಲಯದ ನಿಂದನೆ ಆಗುತ್ತದೆ ಎಂದು ಹೇಳುವ ಮೂಲಕ ಅವಕಾಶ ಕೊಟ್ಟಂತಹ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

† **ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ)** : ನಾನು ಕೆಲವೇ ನಿಮಿಷಗಳ ಸಮಯವನ್ನು ತೆಗೆದುಕೊಳ್ಳುತ್ತೇನೆ. ಈಗ ಖಾಲಿ ಭೂಮಿಯ ವಿಚಾರ ಹೇಳಿದರು. ಖಾಲಿ ಭೂಮಿ ಇದ್ದದ್ದಕ್ಕೆ ಕಟ್ಟಡವನ್ನು ಕಟ್ಟದೇ ಇದ್ದಾಗ ತೆರಿಗೆ ಹಾಕುವುದನ್ನು ನಾನು ಒಪ್ಪುತ್ತೇನೆ. ಕಟ್ಟಡವನ್ನು ಕಟ್ಟಿದ ಮೇಲೆ 225 ಚದರ ಮೀಟರ್‌ಗೆ ಕಟ್ಟಡ ಇದ್ದಲ್ಲಿ 50 ಚದರ ತೆರಿಗೆ ವಿನಾಯಿತಿಯನ್ನು ಕೊಟ್ಟಿದ್ದಾರೆ. ಆದರೆ ನಾನು ಏನು ಹೇಳುತ್ತೇನೆ ಎಂದರೆ ಕಟ್ಟಡವನ್ನು ಕಟ್ಟಿದ ಮೇಲೆ ಸುತ್ತಲೂಎಷ್ಟು ಜಾಗವನ್ನು ಬಿಟ್ಟಿದ್ದಾರೆ, ಅದಕ್ಕೆ ಸಂಪೂರ್ಣವಾದಂತಹ ವಿನಾಯಿತಿಯನ್ನು ಕೊಡಬೇಕಾಗುತ್ತದೆ. ನಾವೀಗ ಅಲ್ಲಿ ಗಿಡಗಳನ್ನು ನೆಡುವುದಕ್ಕೆ, ಗ್ರೀನರಿ ಮಾಡಲಿಕ್ಕೆ ನಾವೇನು ಒತ್ತನ್ನು ಕೊಡುತ್ತೇವೆ ಅದಕೋಸ್ಕರ ಪುನಃ ಅದಕ್ಕೆ ತೆರಿಗೆ ಹಾಕುವುದು ಸರಿಯಲ್ಲ. ಅದನ್ನು ಮಾನ್ಯ ಸಚಿವರು ತೆರಿಗೆ ಹಾಕುವುದನ್ನು ವಾಪಸ್ ಪಡೆದರೆ ಬಹಳ ಸಂತೋಷ. ಮಾನ್ಯ ರಾಮದಾಸ್ ಅವರು ಒಂದು ಮಾತನ್ನು ಹೇಳಿದರು. ಇಲ್ಲಿ ಮಾಡಿದಂತಹ ಶಾಸನಗಳು ನ್ಯಾಯಾಲಯದಲ್ಲಿ ತಡೆ ಆಜ್ಞೆ ಆಗುತ್ತದೆ ಎಂದು ಹೇಳಿದರು. ನಾವು ಚರ್ಚೆಯನ್ನು

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಮಾಡಿದ್ದು, ಕೇವಲ ಚರ್ಚೆಗೋಸ್ಕರ ಬಿಟ್ಟರೆ, ಅದನ್ನು ತಿದ್ದುಪಡಿ ಮಾಡಲಿಕ್ಕೆ ಸರ್ಕಾರ ಒಪ್ಪದೇ ಕೇವಲ ಸಂಖ್ಯಾಬಲದಿಂದ ಪಾಸ್ ಮಾಡಿಕೊಂಡು ಹೋದರೆ ಬೇರೆ ಏನೂ ಆಗುವುದಿಲ್ಲ ನಾವೇನಾದರೂ ಸಲಹೆಗಳನ್ನು ಕೊಟ್ಟಾಗ ಅದನ್ನು ಒಪ್ಪ ಸಣ್ಣ ಪುಟ್ಟ ತಿದ್ದುಪಡಿಗಳನ್ನು ಮಾಡಿದಾಗ ಖಂಡಿತವಾಗಿ ಅಲ್ಲಿ ನ್ಯಾಯಾಲಯದಲ್ಲಿ ತಡೆ ಆಜ್ಞೆ ಆಗುವುದಿಲ್ಲ. ಏಕೆಂದರೆ ನಾವೇನು ಸಲಹೆಗಳನ್ನು ಕೊಟ್ಟಿರುತ್ತೇವೆ ಸುಮ್ಮನೆ ವಿಷಯವನ್ನು ತಿಳಿದುಕೊಳ್ಳದೇ ಸಲಹೆ ಕೊಡುವುದಿಲ್ಲ. ಅದಕ್ಕೋಸ್ಕರ ಸಣ್ಣ ಪುಟ್ಟ ಸಲಹೆಗಳನ್ನು ಕೊಟ್ಟಾಗ ಅದು ಕಾನೂನುಬದ್ಧವಾಗಿದೆಯೋ ಇಲ್ಲವೋ ತಿಳಿದುಕೊಂಡು ಅದನ್ನು ತಿದ್ದುಪಡಿಯನ್ನು ಮಾಡಿಕೊಳ್ಳುವ ಉದಾರತೆ ಸರ್ಕಾರಕ್ಕೆ ಇರಬೇಕಾಗುತ್ತದೆ. ಮುಖ್ಯವಾಗಿ ಹೊಸ ಹೊಸ ಜಾಗಗಳು. ಮುನಿಸಿಪಾಲಿಟೀಸ್ ವಿಸ್ತರಣೆ ಆದಾಗ ಆ ಭಾಗದಲ್ಲಿ ಏನಾಗುತ್ತದೆ? ದೊಡ್ಡ ದೊಡ್ಡ ಕಾಂಪೌಂಡ್ ವಾಲ್ ಇರುತ್ತದೆ ನಮ್ಮ ಭಾಗದಲ್ಲಿ ಮಗ್ಗುಲಲ್ಲಿ ಒಂದು ಮನೆ ಇರುತ್ತದೆ. ನೀವು ಪುನಃ ಓಪನ್ ಲ್ಯಾಂಡಿಗೆ ಟ್ಯಾಕ್ಸನ್ನು ಹಾಕಿದಾಗ ಮನೆಗಿಂತ ಜಾಸ್ತಿ ಟ್ಯಾಕ್ಸ್ ಓಪನ್ ಲ್ಯಾಂಡಿಗೆ ಕೊಡುವಂತಹ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಅದನ್ನು ಸಂಪೂರ್ಣವಾಗಿ ವಿನಾಯಿತಿ ಮಾಡುವಂಥದ್ದು ಮಾಡಬೇಕು. ಮತ್ತೆ ಮಳೆ ನೀರಿಗೆ ಗುಂಡಿ ಮಾಡುವಂತಹದು ಇದೆ. ಅಲ್ಲಿ ನೀರು ಸ್ಟೋರೇಜ್ ಮಾಡಲಿಕ್ಕೆ ಇರುತ್ತದೆ. ಅದಕ್ಕೂ ಕೂಡ ಟ್ಯಾಕ್ಸ್ ಕೊಡುವಂತಹ ಪರಿಸ್ಥಿತಿ ಬರಬಾರದು. ಒಂದು ವಿಷಯವನ್ನು ಮಾನ್ಯ ರಾಮದಾಸ್ ಅವರು ಹೇಳಿದರು. ಹರಾಜು ಪದ್ಧತಿ ಎಂದು ಹೇಳಿದರು. ಅದರಲ್ಲಿ ನಾವು ಡಿಫರೆನ್ಸಿಯೇಟ್ ಮಾಡಬೇಕಾಗುತ್ತದೆ. ಕಟ್ಟಿದ ಅಂಗಡಿಗೆ ಲೈಸೆನ್ಸ್ ಕೊಡುವುದಕ್ಕೂ, ವ್ಯಾಪಾರಕ್ಕೆ ಲೈಸೆನ್ಸ್ ಕೊಡುವುದಕ್ಕೂ ಕಾರ್ಪೋರೇಷನ್ ಮತ್ತು ಮುನಿಸಿಪಾಲಿಟಿಯವರು ಹರಾಜು ಮಾಡುತ್ತಾರೆ. ಒಂದು ಜಾಗವನ್ನು ಬಿಸಿನೆಸ್‌ಗೋಸ್ಕರ ಹರಾಜು ಹಾಕುವುದಕ್ಕೂ ವ್ಯತ್ಯಾಸ ಇದೆ. ನೀವು ಲೈಸೆನ್ಸನ್ನು ಅಂಗಡಿಗೆ ಕೊಡುವಂತಹದು ಐದು ವರ್ಷಕ್ಕೆ ಇರಬೇಕಾಗುತ್ತದೆ. ಇಲ್ಲದಿದ್ದರೆ ಪ್ರತಿ ವರ್ಷ ಅಲ್ಲಿ ಅಧಿಕಾರಿಗಳ ಹತ್ತಿರ ಹೋಗಿ ಚರ್ಚೆಯನ್ನು ಮಾಡುವಂತಹದು, ಅಲ್ಲಿ ಸಮಸ್ಯೆ ಉಂಟಾಗುವುದು ಆಗಬಾರದು. ಮಟನ್ ಸ್ಟಾಲ್ ಬಗ್ಗೆ ಅನಾವಶ್ಯಕ ಚರ್ಚೆ ಆಯಿತು. ಮಟನ್ ಸ್ಟಾಲನ್ನು ಪ್ರತಿ ವರ್ಷ ಹರಾಜು ಹಾಕುವುದು, ಐದು ವರ್ಷಕ್ಕೆ ಲೈಸೆನ್ಸ್ ಕೊಡುವುದಾದರೆ, ಅವನ ಅಂಗಡಿಗೂ ಐದು ವರ್ಷ ಲೈಸೆನ್ಸ್ ಕೊಡಬೇಕಾಗುತ್ತದೆ. ಒಂದು ವೇಳೆ ಕಾರ್ಪೋರೇಷನ್ ಅಥವಾ ಮುನಿಸಿಪಾಲಿಟಿಯವರು ಅವರ ಕಟ್ಟಡವನ್ನು ಆಕ್ಷನ್ ಕೊಡುತ್ತಾರೆ? ಅದು ಅವರು ತೀರ್ಮಾನ ಮಾಡಲಿ. ಒಂದು ವರ್ಷಕ್ಕೆ ಕೊಡುತ್ತೇವೆ ಅಥವಾ ಐದು ವರ್ಷಕ್ಕೆ ಕೊಡುತ್ತೇವೆಂದು ಅವರು ತೀರ್ಮಾನ ಮಾಡಲಿ. ಅದು ಕಾನೂನಿನಲ್ಲಿ ಬರುವಂತಹ ಅವಶ್ಯಕತೆ ಇಲ್ಲ. ಅದನ್ನು ನಾವು ಡಿಫರೆನ್ಸಿಯೇಟ್ ಮಾಡದೇ ಇದ್ದರೆ ಯಾವುದೋ ಒಂದು ಕಾರಣಕ್ಕೆ ಐದು ವರ್ಷ ಮಾಡುತ್ತಾರೆ. ಒಬ್ಬನಿಗೆ ಐದು ವರ್ಷ ಕೊಟ್ಟು ಮತ್ತೊಬ್ಬನಿಗೆ ಒಂದು ವರ್ಷ ಕೊಡುವುದಕ್ಕೆ ಆಗುವುದಿಲ್ಲ. ಕಾನೂನನ್ನು ಮಾಡಿದ ಮೇಲೆ ಒಂದೇ ರೀತಿಯ ಕಾನೂನು ಎಲ್ಲರಿಗೂ ಬರಬೇಕಾಗುತ್ತದೆ. ಮಾಡಿದರೆ ನೀವು ಐದು ವರ್ಷ ಎಲ್ಲರಿಗೂ ಮಾಡಿ, ಇಲ್ಲದೇ ಇದ್ದರೆ ಎಲ್ಲರಿಗೂ ಒಂದು ವರ್ಷ ಎಂದು ಮಾಡಿ. ಐದು ವರ್ಷ ಮಾಡುವುದು ಸೂಕ್ತ ಎಂದು ನನ್ನ ಅಭಿಪ್ರಾಯ. ಆನ್ಯುಯಲ್ ರೆಂಟ್ ಈಸ್ ದಿ ಕ್ರೈಟೀರಿಯಾ ಎಂದು ಮಾಡಬೇಡಿ. ಏಕೆಂದರೆ ಕೆಲವರು ಬಾಡಿಗೆಗೆ ಕೊಡುವುದಿಲ್ಲ. ಸ್ವಂತ ಕಟ್ಟಡದಲ್ಲಿ ಇದ್ದಾಗ ಅವರಿಗೆ ಯಾವ ರೀತಿ ಟ್ಯಾಕ್ಸ್ ಹಾಕುವುದು ಎಂದು ಆಗಬೇಕಾಗುತ್ತದೆ. ಅದರ ಬಗ್ಗೆ

ಚರ್ಚೆ ನಡೆಯಲಿ. ನಾವು ಸ್ವಂತ ಮನೆಯಲ್ಲಿದ್ದಾಗ ಎಷ್ಟು ಬಾಡಿಗೆ ಮಾಡಬೇಕು? ಅದಕ್ಕೆ ಸಪರೇಟ್ ಟ್ಯಾಕ್ಸ್ ಸ್ಟ್ರಕ್ಚರ್ ಮಾಡಿ. ಬಾಡಿಗೆ ಕೊಟ್ಟಾಗ ಆದಕ್ಕೆ ಸಪರೇಟ್ ಸ್ಟ್ರಕ್ಚರ್ ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ತಾವು ಈ ಕಾನೂನನ್ನು ತಂದಿದ್ದೀರಿ. ಸೆಲ್ಫ್ ಅಸೆಸ್‌ಮೆಂಟ್ ಕಾನೂನು ತಂದಿದ್ದೀರಿ. ನಾವು ಸ್ವಾಗತವನ್ನು ಮಾಡಿದ್ದೇವೆ. ನಮ್ಮ ಭಾಗದಲ್ಲಿ ಕೆಲವು ಪಟ್ಟಣ ಪಂಚಾಯಿತಿ, ಮುನಿಸಿಪಾಲಿಟಿಗಳಲ್ಲಿ ಜಾರಿಗೆ ತರಲಿಕ್ಕೆ ಹೋದಾಗ ತಮ್ಮದೇ ಸದಸ್ಯರು ವಾಕೌಟ್ ಮಾಡಿದಂತಹ ಪರಿಸ್ಥಿತಿಯನ್ನು ನೀವು ನೋಡಬೇಕಾಗುತ್ತದೆ. ನಮ್ಮಲ್ಲಿ ಹಾಗೆ ಆಯಿತು. ಕಾಂಗ್ರೆಸ್ ಪಕ್ಷದ ಒಬ್ಬರೇ ಸದಸ್ಯರು, ನಾಮಿನೇಟೆಡ್ ಮೆಂಬರ್ಸ್ ಮೂರು ಜನ ಇದ್ದರು. ಅಂದರೆ ನಾಲ್ಕು ಜನ ವಾಕೌಟ್ ಮಾಡುತ್ತಾರೆ. ಜನರಿಗೆ ತೋರಿಸಲಿಕ್ಕೆ, ಅದು ಕಾಂಗ್ರೆಸ್‌ನವರು ತಂದಿದ್ದು ಅಲ್ಲ, ವಿರೋಧ ಪಕ್ಷದವರು ತಂದಿದ್ದು ಎಂದು. ನಿಮ್ಮ ಪಕ್ಷದ ಸದಸ್ಯರು ಬೇರೆ ಬೇರೆ ಮುನಿಸಿಪಾಲಿಟಿಯಲ್ಲಿ, ಪಟ್ಟಣ ಪಂಚಾಯಿತಿಯಲ್ಲಿ, ಕಾರ್ಪೊರೇಷನ್‌ನಲ್ಲಿ ಇರುತ್ತಾರೆ ಅವರಿಗೆ ನೀವು ಸುದ್ದಿಯನ್ನು ತಿಳಿಸಿ. ಸರ್ಕಾರ ತಂದ ಕಾನೂನಿಗೆ ನಿಮ್ಮ ಸದಸ್ಯರೇ ವಿರೋಧ ಮಾಡಿದರೆ ಅಭಾಸ ಆಗುತ್ತದೆ ಎಂದು ತಿಳಿ ಹೇಳುವಂತಹ ಅವಶ್ಯಕತೆ ಇದೆ. ಅದನ್ನು ನೀವು ಮಾಡಬೇಕಾಗುತ್ತದೆ.

ಶ್ರೀ ಎ. ನಾಗರಾಜು : ಮಾನ್ಯ ಹೆಗಡೆಯವರೆ, ಅಲ್ಲಿ ವಾಕೌಟ್ ಮಾಡಿರುವುದು ಕನ್‌ಸ್ಟ್ರಕ್ಷನ್ ಕಾಸ್ಟ್, ಮತ್ತು ಗೈಡೆನ್ಸ್ ವ್ಯಾಲ್ಯೂ ಇರುತ್ತದಲ್ಲಾ ಅದನ್ನು ಜಾಸ್ತಿ ಮಾಡಿದ್ದಕ್ಕೆ ವಾಕೌಟ್ ಆಗಿದ್ದು. ಬಿಲ್ ಮೇಲೆ ಅಲ್ಲ ವಾಕೌಟ್ ಆಗಿರುವುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇಲ್ಲಿ ಅದು ಆಗಲಿಲ್ಲ. ತಮಗೆ ಗೊತ್ತಿಲ್ಲ. ಅದು ಜಾರಿಗೆ ತರುತ್ತೇವೆಂದ ಕೂಡಲೇ ವಾಕೌಟ್ ಮಾಡಿದರು. ನಾನೇ ಮೀಟಿಂಗ್‌ನಲ್ಲಿ ಕುಳಿತಿದ್ದೆ. ನೀವು ಇಲ್ಲ ಎಂದು ಹೇಳಿದರೆ ನಾನು ಹೇಗೆ ಒಪ್ಪುವುದು. ನಾನು ಮೀಟಿಂಗ್‌ನಲ್ಲಿ ಪ್ರೆಸೆಂಟ್ ಇದ್ದೆ. ನಾನು ನನ್ನ ಕಾನ್‌ಸ್ಟಿಟ್ಯೂಯೆನ್ಸಿನಲ್ಲಿ ನಾನು ಪ್ರೆಸೆಂಟ್ ಇದ್ದಾಗ ನೀವು ಇಲ್ಲಿ ಇಲ್ಲ ಎಂದರೆ ನಾನು ಒಪ್ಪಲಿಕ್ಕೆ ಆಗುತ್ತದಾ? ನಾನು ನಡೆದಂತಹ ವಿಷಯ ಹೇಳುತ್ತಿದ್ದೇನೆ. ನಾನು ಹೇಳುತ್ತಿದ್ದೇನೆ ಮೀಟಿಂಗ್‌ನಲ್ಲಿ ಪ್ರೆಸೆಂಟ್ ಆಗಿದ್ದೆ. ನೀವು ಇಲ್ಲಿ ಕುಳಿತುಕೊಂಡು ಇಲ್ಲ ಎಂದರೆ ನಾನು ಒಪ್ಪುವುದಕ್ಕೆ ಆಗುತ್ತದಾ ಹಾಗಾದರೆ ನೀವು ಇನ್‌ಫರ್ಮೇಷನ್ ತರಿಸಿಕೊಳ್ಳಿ. ಮುನಿಸಿಪಲ್ ಆಫೀಸ್‌ನಿಂದ ಮಾಹಿತಿ ತರಿಸಿಕೊಳ್ಳಿ.

ಛೇರ್ಮನ್ : ಆಯಿತು, ಅದನ್ನು ಬಿಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾನು ನಡೆದಂತಹ ಘಟನೆಯನ್ನೂ ಹೇಳುವಾಗ ಇವರು ಇಲ್ಲ ಎಂದು ಹೇಳುವಂತಹದು ಸರಿಯಾಗುವುದಿಲ್ಲ. ಅದಕ್ಕೋಸ್ಕರ ಇಂತಹ ಕೆಲವು ನ್ಯೂನತೆಗಳು ಇವೆ.

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾನು ಹೇಳಿದ್ದು ಏನು ಅಂದರೆ ನೀವು ಮಾಡಿದ ಕಾನೂನನ್ನು ಜಾರಿಗೆ ತರುವಾಗ ನಿಮ್ಮ ಸದಸ್ಯರು ವಾಕೌಟ್ ಮಾಡಿದ ವಿಚಾರ ಹೇಳಿದ್ದು. ನಾನು ಹಾಜರಿ ಇದ್ದ ಸಭೆಯಲ್ಲಿ ಏನಾಯಿತು ಎಂದು ಹೇಳುವಾಗ ಇವರು ಒಪ್ಪದೇ ಇದ್ದರೆ ಹಾಗಾದರೆ ಇನ್ನೊಂದು ಸಭೆಗೆ ಅವರು ಬರಬೇಕಾಗುತ್ತದೆ.

ಛೇರ್ಮನ್ : ಅಲ್ಲಿ ನಡೆದ ವಿಚಾರದ ಬಗ್ಗೆ ನಾವೇಕೆ ಚರ್ಚೆ ಮಾಡಬೇಕು? ಇಲ್ಲಿ ವಿಷಯ ಮಾತನಾಡೋಣ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದಕ್ಕೋಸ್ಕರ ಇಷ್ಟು ವಿಷಯಗಳನ್ನು ಹೇಳುತ್ತಾ ಮುಖ್ಯವಾಗಿ ಖಾಲಿ ಜಾಗಗಳಿಗೆ ವಿನಾಯಿತಿ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಏಕೆಂದರೆ ಉಳಿದೆಲ್ಲಾ ವಿಷಯಗಳ ಬಗ್ಗೆ ಮಾನ್ಯ ರಾಮದಾಸ್ ಅವರು ವಿಸ್ತಾರವಾಗಿ ಮಾತನಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಛೇರ್ಮನ್ ಅವರೇ...

ಛೇರ್ಮನ್ : ಬಹಳ ಬ್ರೀಫಾಗಿ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬಹಳ ಬ್ರೀಫಾಗಿ ಹೇಳುತ್ತೇವೆ. ಮಾನ್ಯ ವಿರೋಧಿ ಪಕ್ಷದ ನಾಯಕರು, ಸ್ವತಃ ಸೋಮಶೇಖರ್ ಅವರು, ರಾಮದಾಸ್ ಅವರು, ಜಯಪ್ರಕಾಶ್ ಹೆಗ್ಡೆಯವರು ಎಲ್ಲಾ ಮಾತನಾಡಿದ್ದಾರೆ. ರಾಮದಾಸ್ ಅವರು ಬಹಳ ವಿಸ್ತಾರವಾಗಿ ಮಾತನಾಡಿದ್ದಾರೆ.

ಛೇರ್ಮನ್ : ಈ ಸಂಸ್ಥೆಗಳಿಗೆ ತಾವು ಬರದೇ ಇರುವುದರಿಂದ, ತಮ್ಮ ಸಂಸ್ಥೆ ಇದೆಯಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಇಡೀ ರಾಜ್ಯದಲ್ಲಿ ಬಹುಶಃ ಸಿರ್ಸಿ ನಗರಸಭೆ ಚೆನ್ನಾಗಿದೆ. ಅಲ್ಲಿ ನಾನು ಹಾಗೂ ಮಾನ್ಯ ವಿವೇಕಾನಂದ ವೈದ್ಯರು ಇದ್ದೇವೆ. ಸಿರ್ಸಿ ನಗರ ಸಭೆ ಮತ್ತು ಟೌನ್ ಪಂಚಾಯತಿ ಎರಡು ಇದೆ. ಅಂಕೋಲಾ ಮತ್ತು ಯಲ್ಲಾಪುರ ಟೌನ್ ಪಂಚಾಯಿತಿ ಇದೆಯಲ್ಲಾ ಇದಕ್ಕೂ ಅನ್ವ ಆಗುತ್ತದೆ. ಸಿರ್ಸಿ ವಿಚಾರ ನಾನು ಹೇಳುತ್ತಿದ್ದೆ. ಇಡೀ ರಾಜ್ಯದಲ್ಲಿ ಹತ್ತು ಸಾವಿರ ಜನ ಇದನ್ನು ವಿರೋಧಿಸಿ ಫಾರ್ಮನನ್ನು ತುಂಬಿಕೊಟ್ಟರು ಸರ್ಕಾರಕ್ಕೆ ಹಾಗಾಗಿ ನಾನು ಮತ್ತೆ ಹಿಂದಿನ ಅಧಿವೇಶನದಲ್ಲಿ ಸಹ ಈ ವಿಷಯ ಕುರಿತಂತೆ ಮಾತನಾಡಿದೆ. ಆದರೆ ಮಾನ್ಯ ರಾಮದಾಸ್ ಅವರು ವಿಸ್ತಾರವಾಗಿ ಮಾತನಾಡಿದ್ದಾರೆ. ಆದ್ದರಿಂದ ನಾನು ವಿವರಕ್ಕೆ ಹೋಗಲು ಬಯಸುವುದಿಲ್ಲ. ನಾನು ಈ ಸಂದರ್ಭದಲ್ಲಿ ಈ ಒಂದು ಕರ್ನಾಟಕ ಪೌರ ನಿಗಮ (ತಿದ್ದುಪಡಿ) ವಿಧೇಯಕ, 2003ನ್ನು ಸರ್ಕಾರ ವಾಪಸ್ ತೆಗೆದುಕೊಳ್ಳಬೇಕು. ಮಾನ್ಯ ಸಚಿವರು ಇದನ್ನು ಜಂಟಿ ಸದನ ಸಮಿತಿಗೆ ಒಂದು ಶಿಫಾರಸ್ಸು ಮಾಡಿ ಅಲ್ಲಿ ಇನ್ನಷ್ಟು ಹೆಚ್ಚು ವಿಸ್ತೃತವಾದ ಚರ್ಚೆ ಆಗಿ ಅಲ್ಲಿ ಸೂಕ್ತವಾದ ತಿದ್ದುಪಡಿಯೊಂದಿಗೆ ನಾವು ಇದನ್ನು ಮುಂದೆ ಸರ್ವಾನುಮತದಿಂದ ಪಾಸ್ ಮಾಡಬಹುದು. ನಿನ್ನೆ ಹೇಗೆ ಗ್ರಾಮೀಣ ಅಭಿವೃದ್ಧಿ ಕುರಿತಂತೆ ಒಂದು ಮಸೂದೆಯನ್ನು ನಾವೆಲ್ಲರೂ ಅಂಗೀಕಾರ ಹೇಗೆ ಮಾಡಿದ್ದೆವೋ ಆ ರೀತಿ ಅಂಗೀಕಾರ ಮಾಡಬಹುದು. ಇದಕ್ಕೆ ಸರ್ಕಾರ ಮುಂದಾಗಬೇಕು. ಇದರೊಳಗೆ ಯಾರದ್ದೂ ವೈಯಕ್ತಿಕವಾದಂತಹ ಪ್ರತಿಷ್ಠೆ ವಿಷಯ ಇಲ್ಲ. ನಮ್ಮದೂ ಇಲ್ಲ, ನಿಮ್ಮದೂ ಇಲ್ಲ. ನೀವೂ ಹಿಂದೆ ತಂದಿರುವಂತಹ ಒಂದು ಮಸೂದೆಗೆ ಸಾಕಷ್ಟು ತಿದ್ದುಪಡಿ ತರುವುದಕ್ಕೆ ವಿಸ್ತೃತವಾಗಿ ಚರ್ಚೆ ಮಾಡಿ ಈ ತಿದ್ದುಪಡಿಯನ್ನು ತಂದಿದ್ದೀರಿ. ಆದರೆ ಇದು ಇನ್ನೂ ಸಮರ್ಪಕವಾಗಿಲ್ಲ. ಮಾನ್ಯ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ ನೀವು ಸಾಕಷ್ಟು ಪ್ರಯತ್ನ ಮಾಡಿದ್ದೀರಿ. ಸಾಕಷ್ಟು ಪ್ರಯತ್ನ ಮಾಡಿದ್ದರೂ ಜನತೆಯ ದೃಷ್ಟಿಯಿಂದ ನಾವು ಯೋಚನೆ ಮಾಡುವಂತಹ ಸಂದರ್ಭದಲ್ಲಿ ಇದು ಪೂರ್ಣ ಸಮರ್ಪಕವಾಗಿಲ್ಲ. ಕೆಲವು ತಿದ್ದುಪಡಿಯನ್ನು ತಂದಿರುವುದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಇದನ್ನು ಪೂರ್ಣ ಸಮರ್ಪಕವಾಗುವಂತೆ ಜಂಟಿ ಸದನ ಸಮಿತಿಗೆ ಹೋಗಿ ಅಲ್ಲಿ ಚರ್ಚೆ ಆಗಿ, ಅಲ್ಲಿ ಜನತೆಯ ಪರವಾಗಿ ಇದು ಯೋಚನೆ ಆಗುವಂತಹ ಅಗತ್ಯತೆ ಇದೆ ಎನ್ನುವಂತಹದನ್ನು ಹೇಳುತ್ತೇನೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತಿರುವುದು ತಮಗೂ ಗೊತ್ತಿದೆ. ನಮಗೆ ಬಹುಶಃ ಇತ್ತೀಚಿನ ವರ್ಷಗಳಲ್ಲಿ ಈ ಒಂದು ಸ್ವಯಂ ಘೋಷಿತ ಆಸ್ತಿ ತೆರಿಗೆಯ ಪದ್ಧತಿಯನ್ನು

ವಿರೋಧಿಸಿ ನಡೆದಂತಹ ಹೋರಾಟ ಅತ್ಯಂತ ದೊಡ್ಡ ಹೋರಾಟ. ರಾಜ್ಯದ ಎಲ್ಲಾ ನಗರ ಪ್ರದೇಶಗಳಲ್ಲಿ ನಡೆದಂತಹ ಹೋರಾಟಗಳಲ್ಲಿ ಇತ್ತೀಚಿನ ವರ್ಷದಲ್ಲಿ ಸರ್ಕಾರದ ಕಣ್ಣು ತೆರೆಸಿರುವಂತಹ ಜನರು ಜಾಗೃತರಾಗಿ ಇದಕ್ಕೆ ಸ್ಪಂದಿಸಿರುವಂತಹ ಒಂದು ದೊಡ್ಡ ಹೋರಾಟ ಇದು. ಪಕ್ಷಾತೀತವಾಗಿ ಹೋರಾಟ ನಡೆದಿದೆ. ಅನೇಕ ಕಡೆಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುವ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿರುವವರೂ ಸಹ ಇದರ ವಿರುದ್ಧವಾಗಿ ಠರಾವು ಅಂಗೀಕರಿಸಿದ್ದಾರೆ. ಅಷ್ಟೇ ಅಲ್ಲ, ಕೋರ್ಟುಗಳಿಗೂ ಹೋಗಿ ಸಲ್ಲಿಸಿದ್ದಾರೆ. ಹಾಗಾಗಿ, ಇದು ಇದು ಜನ ವಿರೋಧಿ ನಿಲುವಾಗುತ್ತದೆಂದು ಭಾವಿಸಿ ಸರ್ಕಾರ ಇದನ್ನು ಪುನರ್ ವಿಮರ್ಶೆ ಮಾಡುವ ಮೂಲಕ ಈ ಮಸೂದೆ ತಂದಿತ್ತು. ಈಗಲೂ ನಾನು ವಿನಂತಿಸಿಕೊಳ್ಳುವುದೇನೆಂದರೆ, ಇದು ಸಮರ್ಪಕವಾಗಿಲ್ಲ. ಜಂಟಿ ಸದನ ಸಮಿತಿಗೆ ತಕ್ಷಣ ಇದನ್ನು ಪರಿಶೀಲನೆಗಾಗಿ ವಹಿಸಬೇಕು. ಇದನ್ನು ವಾಪಸ್ಸು ತೆಗೆದುಕೊಳ್ಳಿ. ಸರ್ಕಾರ ಪ್ರತಿಷ್ಠೆ ಮೇಲೆ ನಿಲ್ಲುವುದು ಬೇಡ. ನಾನು ಒಂದು ಸಲಹೆ ಕೊಡುತ್ತಾ, ಇದಕ್ಕೆ ಸಂಬಂಧಿಸಿದಂತೆ 2–3 ವಿಚಾರಗಳನ್ನು ಪ್ರಸ್ತಾಪಿಸಬಯಸುತ್ತೇನೆ. ಖಾಲಿ ಜಾಗಕ್ಕೆ ಸಂಬಂಧಿಸಿದಂತೆ ವಿಷಯ ಪ್ರಸ್ತಾಪವಾಗಿದೆ. ಈಗ ಪಾಯಿಂಟ್ 3 ರಿಂದ 1ಕ್ಕೆ ತಂದಿದ್ದಾರೆ. ಆದರೆ, ಖಾಲಿ ಜಾಗಕ್ಕೆ ತೆರಿಗೆ ವಿಧಿಸಬಾರದು. ಆದಕಾರಣ, ಸರ್ಕಾರ ಇದನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಬೇಕಾದ ಅಗತ್ಯವಿದೆ. ಇನ್ನೊಂದು ವಿಚಾರವೇನೆಂದರೆ, ಸ್ವಂತ ಜಾಗದಲ್ಲಿ ಅಂಗಡಿ ಕಟ್ಟಿಕೊಂಡರೆ 50 ಪರ್ಸೆಂಟ್ ಟ್ಯಾಕ್ಸ್ ಎಂದು ಮೊದಲು ಏನು ಹೇಳಿದ್ದರು, ಅದನ್ನು ಈಗ ಒಂದು ನೂರು ಪರ್ಸೆಂಟ್ ಮಾಡುತ್ತಿದ್ದಾರೆ. ನಮ್ಮ ಜಾಗದಲ್ಲಿ ನಾವು ಅಂಗಡಿ ಕಟ್ಟಿಕೊಂಡರೆ, ನಮ್ಮ ಮನೆ ಇರುವ ಜಾಗದಲ್ಲಿ ನಾವು ಅಂಗಡಿ ಕಟ್ಟಿಕೊಂಡು ಅದನ್ನು ಬಾಡಿಗೆಗೆ ಕೊಟ್ಟರೆ ಅದಕ್ಕೆ ಒಂದು ನೂರು ಪರ್ಸೆಂಟ್ ಟ್ಯಾಕ್ಸ ವಿಧಿಸುವ ಯೋಚನೆ ಇದೆ. ನಮ್ಮ ಸ್ವಂತ ಜಾಗದಲ್ಲಿ ನಾವು ಅಂಗಡಿ ಕಟ್ಟಿಕೊಂಡು ಅದನ್ನು ನಡೆಸಿದರೆ ಅದಕ್ಕೆ ಒಂದು ನೂರು ಪರ್ಸೆಂಟ್ ತೆರಿಗೆ ವಿಧಿಸಲು ಅನುಕೂಲವಾಗುವಂತೆ ತಂದಿರುವ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ನಮ್ಮ ಜಾಗದಲ್ಲಿ ನಾವು ಅಂಗಡಿ ಕಟ್ಟಿಕೊಂಡರೆ ಏಕೆ ಒಂದು ನೂರು ಪರ್ಸೆಂಟ್ ಟ್ಯಾಕ್ಸ್ ಕೊಡಬೇಕು? ಹಾಗಾಗಿ, ಇದನ್ನು ಹಿಂತೆಗೆದುಕೊಳ್ಳಬೇಕಾದ ಅಗತ್ಯತೆ ಇದೆ. ಇನ್ನೊಂದು ವಿಷಯ, ವ್ಯಾಲ್ಯುಯೇಷನ್ ವ್ಯವಸ್ಥೆಯಲ್ಲಿ ದೊಡ್ಡ ದೋಷವಿದೆ. ನಮ್ಮ ಮನೆಯಲ್ಲಿ ಬಾವಿ, ಎಇಹೆಚ್, ಮನೆಗೆ ಕಾಂಪೌಂಡ್ ಹಾಕಿದ್ದರೆ ಅದಕ್ಕೆ ವ್ಯಾಲ್ಯುಯೇಷನ್ ಹೆಚ್ಚಾಗುತ್ತದೆಂಬ ಕಾರಣಕ್ಕಾಗಿ ನಾವು ಟ್ಯಾಕ್ಸ್ ಕೊಡಬೇಕಾಗುತ್ತದೆಂದಾದರೆ ಇದನ್ನು ಯಾರು ಒಪ್ಪಲು ಸಾಧ್ಯ? ಕಾಂಪೌಂಡ್, ಬೋರ್‌ವೆಲ್, ಬಾವಿ, ಎಇಹೆಚ್ ಕನೆಕ್ಷನ್ ಇದ್ದರೆ ನಾವು ಹೆಚ್ಚು ಟ್ಯಾಕ್ಸ್ ಕೊಡಬೇಕೆನ್ನುವ ಸ್ಥಿತಿ ಬಂದರೆ ಇದನ್ನು ಯಾರು ಒಪ್ಪಲು ಸಾಧ್ಯ? ಈ ರೀತಿಯಾಗಿ ವ್ಯಾಲ್ಯುಯೇಷನ್‌ನಲ್ಲಿ ದೊಡ್ಡ ದೋಷವಿದೆ. ವ್ಯಾಲ್ಯುಯೇಷನ್ ವ್ಯವಸ್ಥೆ ಬಗ್ಗೆ ಮತ್ತೊಮ್ಮೆ ಪುನರ್ ವಿಮರ್ಶೆ ಮಾಡಬೇಕಾಗುತ್ತದೆ. ಕೊನೆಯದಾಗಿ, ಡಿಪ್ರಿಷಿಯೇಷನ್ ವಿಷಯದ ಬಗ್ಗೆ ಹೇಳುವುದಾದರೆ, ಸಮರ್ಪಕವಾದ ರೀತಿಯಲ್ಲಿ ಇದರ ಯೋಜನೆ ಮಾಡಬೇಕಾಗುತ್ತದೆ. ಉದಾಹರಣೆಗೆ, ಶಿರಸಿಯಲ್ಲಿ 55 ಪರ್ಸೆಂಟ್ ಡಿಪ್ರಿಷಿಯೇಷನ್ ಎಂದು ಹೇಳಿದ್ದಾರೆ. ಆದರೆ, ನಾವು ಪಕ್ಕದ ಧಾರವಾಡ ಜಿಲ್ಲೆಗೋ, ಹಾವೇರಿ ಜಿಲ್ಲೆಗೋ ಅಥವಾ ಇನ್ನಾವುದೋ ಜಿಲ್ಲೆಗೆ ಹೋದರೆ ಅಲ್ಲಿ 75 ಪರ್ಸೆಂಟ್ ಡಿಪ್ರಿಷಿಯೇಷನ್ ಎಂದು ಹೇಳುತ್ತಾರೆ. ಹಾಗೆ ನೋಡಿದರೆ ಮಲೆನಾಡಿನಂಥ ನಮ್ಮ ಜಿಲ್ಲೆಯಲ್ಲಿ ಜಾಸ್ತಿ ಡಿಪ್ರಿಷಿಯೇಷನ್ ಬರಬೇಕು. ಡಿಪ್ರಿಷಿಯೇಷನ್ ಬಗ್ಗೆ ಸರಿಯಾದ ಅಳತೆಗೋಲು ಇಲ್ಲ. ಯಾವ್ಯಾವ ಊರಿಗೆ ಎಷ್ಟೆಷ್ಟು

ಡಿಪ್ರಿಷಿಯೇಷನ್ ಆಗಬೇಕೆಂಬ ಬಗ್ಗೆ ಸ್ಪಷ್ಟತೆಯಿಲ್ಲ. ಈಗಿರುವ ಡಿಪ್ರಿಷಿಯೇಷನ್ ಯೋಜನೆ ಆಗಬೇಕಾದಂಥ ಅವಶ್ಯಕತೆಯಿದೆ. ಇದರ ಬಗ್ಗೆ ವಿಸ್ತೃತವಾಗಿ ಇನ್ನೂ ಹೆಚ್ಚು ವಿಷಯಗಳನ್ನು ಪ್ರಸ್ತಾಪಿಸಲು ಬಯಸದೆ ಸರ್ಕಾರ ಯಾವುದೇ ಪ್ರತಿಷ್ಠೆ ಮೇಲೆ ನಿಲ್ಲದೆ, ಈಗಾಗಲೇ ಇದಕ್ಕೆ ಸಾಕಷ್ಟು ಜನರಿಂದ ವಿರೋಧ ವ್ಯಕ್ತವಾಗಿ, ಕೋರ್ಟು ಇತ್ಯಾದಿಗಳಲ್ಲಿ ಸಾಕಷ್ಟು ಮೊಕದ್ದಮೆಗಳನ್ನು ಎದುರಿಸುತ್ತಿರುವಂಥ ಸಂದರ್ಭದಲ್ಲಿ ಸರ್ಕಾರ ಪ್ರತಿಷ್ಠೆ ಮೇಲೆ ನಿಲ್ಲದೆ ಜನತೆಯ ಭಾವನೆಗೆ ಸ್ಪಂದಿಸುವ ದೃಷ್ಟಿಯಿಂದ ಇದನ್ನು ಜಂಟಿ ಸದನ ಸಮಿತಿಯ ಪರಿಶೀಲನೆಗಾಗಿ ರೆಫರ್ ಮಾಡಬೇಕು. ಆ ರೀತಿಯಲ್ಲಿ ನಿರ್ಧಾರ ಕೈಗೊಳ್ಳುವಂತೆ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಸಚಿವರಿಗೆ ಸೂಚಿಸಬೇಕು ಅಥವಾ ಸರ್ಕಾರವಾಗಿ ತಾನೇ ಆ ನಿರ್ಧಾರ ತೆಗೆದುಕೊಳ್ಳುವ ಮೂಲಕ ಜಂಟಿ ಸದನ ಸಮಿತಿಗೆ ಒಪ್ಪಿಸುವ ಮೂಲಕ ಅಲ್ಲಿ ಇದರ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಲಿ ಎಂಬ ಅಭಿಪ್ರಾಯ ವ್ಯಕ್ತಪಡಿಸಿ, ತಂದಿರುವ ತಿದ್ದುಪಡಿಯನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು)** : ಮಾನ್ಯ ಚೇರ್ಮನ್‌ರವರೆ, ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಆಳುವ ಪಕ್ಷ ಕಾಂಗ್ರೆಸ್, ವಿರೋಧ ಪಕ್ಷ ಭಾರತೀಯ ಜನತಾ ಪಕ್ಷ. ಆದರೆ, ಎರಡೂ ಪಕ್ಷಗಳ ಸದಸ್ಯರು ಮಾತ್ರವಲ್ಲ. ಇಂಡಿಪೆಂಡೆಂಟ್ ಆಗಿ ಗೆದ್ದವರೂ ಸಹ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿ ಏನು ತಂದಿದ್ದಾರೆ, ಈ ವಿಧಾನ ಸರಿಯಿಲ್ಲ. ಇದರಲ್ಲಿ ಜನ ವಿರೋಧಿ ಭಾವನೆ ಇದೆಯೆಂದು ಸ್ಪಷ್ಟವಾಗಿ ಅದರ ವಿರುದ್ಧವಾಗಿ ಸರ್ವಾನುಮತದಿಂದ ತೀರ್ಮಾನ ಕೈಗೊಂಡಿದ್ದಾರೆ. ಆ ತೀರ್ಮಾನದ ಭಾಗವಾಗಿ ನಾನು ಈಗ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಇದರಲ್ಲಿರುವ ಅನೇಕ ಕೆಟ್ಟ ಅಂಶಗಳು ಅಥವಾ ಜನ ವಿರೋಧಿಯ ಅಂಶಗಳನ್ನು, ಜನರ ಹಿತಾಸಕ್ತಿಯನ್ನು ಧಿಕ್ಕರಿಸುವಂಥ ಅಂಶಗಳನ್ನು ತಾವು ಹಿಂತೆಗೆದುಕೊಳ್ಳುವ ನಿಟ್ಟಿನಲ್ಲಿ ನಾನು ಸರ್ಕಾರದ ಗಮನ ಸೆಳೆಯಬಯಸುತ್ತೇನೆ. ಮೊದಲನೆಯದಾಗಿ, ಬೆಂಗಳೂರು ಘಟಕದಲ್ಲಿ 60x40 ಇರುವುದಕ್ಕೆ ತಾವು ಮಾನ್ಯತೆ ಕೊಟ್ಟಿದ್ದೀರಿ, ನಮ್ಮಲ್ಲಿ ಸಣ್ಣ ಸಣ್ಣ ಮನೆಗಳಿಗೂ ಕೂಡ ಕಾಂಪೌಂಡ್ ಇರುತ್ತದೆ. ಹೆಚ್ಚಿನ ಕಡೆಗಳಲ್ಲಿ 60x40 ಕ್ಕಿಂತಲೂ ಹೆಚ್ಚು ಜಾಗವೇ ಇರುವುದು. ಖಾಲಿ ಜಾಗಕ್ಕೆ ಯಾವುದೇ ಕಾರಣಕ್ಕೂ ತೆರಿಗೆ ವಿಧಿಸಬಾರದೆಂಬ ಸ್ಪಷ್ಟ ಭಾವನೆಯನ್ನು ಇಲ್ಲಿ ವ್ಯಕ್ತಪಡಿಸುತ್ತಾ ಖಾಲಿ ಜಾಗದ ಮೇಲೆ ವಿಧಿಸಿರುವ ತೆರಿಗೆಯನ್ನು ತಾವು ರದ್ದುಗೊಳಿಸಬೇಕೆಂಬ ವಿನಂತಿಯನ್ನು ಪ್ರಪ್ರಥಮವಾಗಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಲ್ಯಾಂಡ್ ವ್ಯಾಲ್ಯುಯೇಷನ್ ಬಗ್ಗೆ ಪ್ರಸ್ತಾಪಿಸುವುದಾದರೆ, ಜಿಲ್ಲಾಧಿಕಾರಿಗಳು ಲ್ಯಾಂಡ್ ವ್ಯಾಲ್ಯುಯೇಷನ್ ಅನ್ನು ನಿರ್ಧರಿಸುವಂಥ ಸಂದರ್ಭದಲ್ಲಿ ಕೆಲವು ಜಾಗಗಳಲ್ಲಿ ನಾಲ್ಕು ಲಕ್ಷವೆಂದು ನಿರ್ಧರಿಸಿದ್ದಾರೆ. ಇವೊತ್ತು ಎರಡು ಲಕ್ಷ ರೂಪಾಯಿಗಳಿಗೂ ಆ ಜಾಗದ ಒಂದು ಸೆಂಟ್ ಕೂಡ ಮಾರಾಟವಾಗಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಇವೊತ್ತು ಕಡ್ಡಾಯವಾಗಿ ಎರಡು ಲಕ್ಷ ರೂಪಾಯಿಗಳಿಗೆ ಮಾರಾಟವಾದರೂ ಸಹ ರಿಜಿಸ್ಟ್ರೇಷನ್ ವ್ಯಾಲ್ಯೂ ಮತ್ತು ಇನ್ನಿತರ ವೆಚ್ಚಗಳೂ ಒಳಗೊಂಡಂತೆ ನಾಲ್ಕು ಲಕ್ಷ ರೂಪಾಯಿಗಳನ್ನು ಭರಿಸುವ ಸನ್ನಿವೇಶ ಅಲ್ಲಿ ಉದ್ಭವವಾಗಿದೆ. ಈ ಎಲ್ಲಾ ಕಾರಣಗಳಿಗೋಸ್ಕರ ವ್ಯಾಲ್ಯುಯೇಷನ್ ಕೂಡ ಸ್ಥಳೀಯ ಮಟ್ಟದಲ್ಲಿರುವ ನಗರಸಭಾ ಸದಸ್ಯರ ಸಮಿತಿಯಲ್ಲಿ ನಿರ್ಧಾರವಾಗುವ ನಿಟ್ಟಿನಲ್ಲಿ ಅದಕ್ಕೆ ಬೇಕಾದಂಥ ಒಂದು ಅವಕಾಶವನ್ನು ತಾವು ಕಲ್ಪಿಸಿಕೊಡಬೇಕು. ಈಗಿರುವ ವಿಧಾನದಲ್ಲಿ ಯಾವುದೇ ಕಾರಣಕ್ಕೂ ನಾವು ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ನಂತರ, ತೆರಿಗೆ ನಮೂನೆಗಳನ್ನು ಭರ್ತಿ ಮಾಡಿ ಕೊಟ್ಟಿದ್ದನ್ನು

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಒಪ್ಪದಿದ್ದಲ್ಲಿ ಮತ್ತು ಹೆಚ್ಚಿನ ತೆರಿಗೆ ವಿಧಿಸಿದಲ್ಲಿ ಜನರು ಪ್ರಶ್ನಿಸಿ, ಅಪೀಲ್ ಸಲ್ಲಿಸುವ ಅವಕಾಶ ಸ್ಥಳೀಯ ಆಡಳಿತ ಸಂಸ್ಥೆಗೆ ಇರುವುದಿಲ್ಲ. ಅದನ್ನು ನೇರವಾಗಿ ಜಿಲ್ಲಾ ನ್ಯಾಯಾಲಯಗಳಲ್ಲಿ ಪ್ರಶ್ನಿಸಬೇಕಾಗಿರುತ್ತದೆ. ಈಗಾಗಲೇ 10–12 ವರ್ಷಗಳಿಂದ ಇತ್ಯರ್ಥಗೊಳ್ಳದಿರುವ ಕೇಸ್‌ಗಳು ಯಾವುದಿದೆ, ಇತ್ತ ಕಡೆ ಮಹಾನಗರ ಪಾಲಿಕೆಗೆ ತೆರಿಗೆಯೂ ಸಂದಾಯವಾಗುತ್ತಿಲ್ಲ. ಅತ್ತ ಕಡೆ ವ್ಯಾಜ್ಯಗಳೂ ಕೂಡ ಇತ್ಯರ್ಥವಾಗಿಲ್ಲ. ಇಂತಹ ಸನ್ನಿವೇಶದಲ್ಲಿ ಪುನಃ ಅದನ್ನು ಜಿಲ್ಲಾ ನ್ಯಾಯಾಲಯವೆಂದು ತಾವು ಸೂಚಿಸಿದ್ದರೂ ಯಾವುದೇ ಕಾರಣಕ್ಕೂ ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇದನ್ನು ನಾನು ಖಂಡಿತವಾಗಿಯೂ ವಿರೋಧಿಸುತ್ತೇನೆ. ಇದರ ಬಗ್ಗೆ ನಿರ್ಧರಿಸುವ ಹಕ್ಕನ್ನು ತಾವು ಸ್ಥಳೀಯ ಆಡಳಿತಕ್ಕೆ ಕೊಡಬೇಕೆಂದು ಈ ಸಂದರ್ಭದಲ್ಲಿ ವಾದಿಸಲು ಇಚ್ಛಿಸುತ್ತೇನೆ. ಎರಡನೆಯದಾಗಿ, ಅರ್ಜಿದಾರರು ಭರ್ತಿ ಮಾಡಿ ಸಲ್ಲಿಸಿದ ನಮೂನೆಗಳು ಯಾವುದಿದೆಯೋ, ಇದನ್ನು ಪರಿಶೀಲಿಸುವುದಕ್ಕಾಗಲಿ, ತಿರಸ್ಕರಿಸುವುದಕ್ಕಾಗಲಿ ಕಾಲಮಿತಿ ವಿಧಿಸಿಲ್ಲ. ಕಾಲಮಿತಿ ಹಾಕದಿರುವುದರಿಂದ ಅರ್ಜಿ ನಮೂನೆ ಭರ್ತಿ ಮಾಡಿ ಒಂದು ಸಲ ಕೊಟ್ಟ ನಂತರ ಮೂರು ತಿಂಗಳೊಳಗೆ ಅದರ ಬಗ್ಗೆ ಏನಾದರೂ ಅಬ್ಜೆಕ್ಷನ್ ಸ್ಥಳೀಯ ಆಡಳಿತಾಧಿಕಾರಿಗಳ ಕಡೆಯಿಂದ ಬರುವುದಕ್ಕೆ ಅವಕಾಶವಿಲ್ಲದೆ, ಅದನ್ನು ಅದೇ ರೀತಿ ಬಿಟ್ಟರೆ ಕೆಲವು ವರ್ಷಗಳ ನಂತರ ನೀವು ಕೊಟ್ಟಿರುವ ಅರ್ಜಿ ನಮೂನೆ ಸರಿಯಿಲ್ಲವೆಂಬ ಆಕ್ಷೇಪಣೆಗಳನ್ನು ಸಲ್ಲಿಸಿ ಅವರಿಂದ ಹಣ ವಸೂಲು ಮಾಡುವುದು ಅಥವಾ ಬೇರೆ ರೀತಿಲ್ಲಿ ದಂಡ ವಿಧಿಸುವ ಒಂದು ಅವಕಾಶ ಅದರಲ್ಲಿ ಇರುವುದರಿಂದ ಇದಕ್ಕೂ ಕಾಲಮಿತಿ ಹಾಕಿಕೊಳ್ಳದಿದ್ದರೂ ಕೂಡ ಅವಶ್ಯಕತೆ ಇದೆಯೆಂದು ಹೇಳುತ್ತೇನೆ. ಹಿಂದೆ ನಗರ ವ್ಯಾಪ್ತಿ ಮಿತಿ ಪಾಯಿಂಟ್ ಇದ್ದಾಗ ಅರ್ಧ ಎಕರೆ ಖಾಲಿ ಸ್ಥಳಕ್ಕೆ ರಿಯಾಯಿತಿ ಹಾಗೂ ಪ್ರತಿ ಮನೆ ಸುತ್ತಲೂ 25 ಸೆಂಟ್ಸ್ ಜಾಗಕ್ಕೆ ರಿಯಾಯಿತಿ ಇರುವುದರಿಂದ ಇದನ್ನೂ ಕೂಡ ತಾವು ಗಮನಿಸಬೇಕು. ಈ ಹಿನ್ನೆಲೆಯಲ್ಲಿ ಯಾವುದೇ ಕಾರಣಕ್ಕೂ ಖಾಲಿ ಜಾಗದ ಮೇಲೆ ತೆರಿಗೆ ವಿಧಿಸುವುದಕ್ಕೆ ನಮ್ಮ ಸ್ಪಷ್ಟವಾದ ವಿರೋಧವಿದೆಯೆಂದು ಈ ಸಂದರ್ಭದಲ್ಲಿ ಉಲ್ಲೇಖಿಸಲು ಇಚ್ಛೆಪಡುತ್ತೇನೆ. ಅಷ್ಟು ಮಾತ್ರವಲ್ಲ, ಇನ್ನಿತರ ಕೆಲವು ಪ್ರಮುಖ ಅಂಶಗಳಿದ್ದರೂ ಸಹ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಈ ಕಾಯ್ದೆಯಡಿ ಆಸ್ತಿ ಮೌಲ್ಯವನ್ನು ಪ್ರತಿ ವರ್ಷವೂ ನಿರ್ಧರಿಸಿ ತೆರಿಗೆ ಕಟ್ಟಬೇಕಾಗಿದೆ. ಆಸ್ತಿ ಮೌಲ್ಯ ನಿರ್ಧರಿಸಿದ ನಂತರವೂ ಮಹಾನಗರ ಪಾಲಿಕೆಯಲ್ಲಿ ಇದಕ್ಕೆ ಸಂಬಂಧಿಸಿದ ಲೆಕ್ಕಾಚಾರಗಳನ್ನು, ಇದಕ್ಕೆ ಸಂಬಂಧಿಸಿದ ಫಾರ್ಮ್‌ಗಳನ್ನು ಫಿಲ್–ಅಪ್ ಮಾಡುವುದು, ಇವೆಲ್ಲದರ ಹೊರೆ ಬೀಳುತ್ತದೆಂಬುದನ್ನು ತಾವು ಗಮನಿಸಬೇಕು. ಮತ್ತು ಜಾಗದ ಮೌಲ್ಯದ ಆಧಾರದಲ್ಲಿ ನಿರ್ಧರಿಸುವ ಸಂಬಂಧ ಜನರು ಪಡುತ್ತಿರುವಂಥ ಬವಣೆಯನ್ನು ಗುರ್ತಿಸಿ ಇದನ್ನು ಪುನರ್ ವಿಮರ್ಶೆ ಮಾಡಬೇಕು. ವಿಶೇಷವಾಗಿ, ನನಗೆ ಒಂದು ರೀತಿಯಲ್ಲಿ ಸಂತೋಷ ಕೂಡ ಆಗುತ್ತಿದೆ. ತಮ್ಮ ಆಳುವ ಪಕ್ಷದ ಅಧ್ಯಕ್ಷರು ನನ್ನ ಕ್ಷೇತ್ರದಿಂದ ಬಂದವರಾಗಿದ್ದರೂ ಅದನ್ನು ಸ್ಪಷ್ಟವಾಗಿ ವಿರೋಧಿಸಿದ್ದಾರೆ. ತಾವು ಇದನ್ನು ತರುತ್ತಿರುವಂಥ ಸಂದರ್ಭದಲ್ಲಿ ಅವರೊಂದಿಗೆ ಸಮಾಲೋಚಿಸುವಂಥ ಕನಿಷ್ಠ ಸೌಜನ್ಯವನ್ನಾದರೂ ತಾವು ತೋರಬೇಕಾಗಿತ್ತು. ಅದನ್ನು ಕೂಡ ಮಾಡಿಲ್ಲ. ಈ ಕಾರಣಕ್ಕೋಸ್ಕರ ತಮಗೆ ನಾನು ಸ್ಪಷ್ಟವಾಗಿ ಹೇಳುತ್ತಿರುವುದೇನೆಂದರೆ, ಇದನ್ನು ಪರಿಶೀಲನೆಗಾಗಿ ಜಂಟಿ ಸದನ ಸಮಿತಿಗೆ ವಹಿಸಿ, ಅದನ್ನು ಸಮಗ್ರವಾಗಿ ಯಾವ ರೀತಿಯಲ್ಲಿ ವ್ಯವಸ್ಥಿತವಾಗಿ ಮಾಡಬೇಕೆಂಬುದರ ಬಗ್ಗೆ ಆಮೂಲಾಗ್ರವಾಗಿ ಪರಿಶೀಲಿಸಿದ ಬಳಿಕ ಕಾರ್ಯರೂಪಕ್ಕೆ ತರಬೇಕು. ಅಲ್ಲಿಯ ತನಕ ಯಥಾಪ್ರಕಾರ ಇದನ್ನು ಅನುಷ್ಠಾನಕ್ಕೆ ತರಬಾರದೆಂಬ ವಿನಂತಿಯನ್ನು

ಕೂಡ ಮಾಡುತ್ತೇನೆ. ಬೆಂಗಳೂರಿಗೊಂದು ಕಾನೂನು, ಮಂಗಳೂರಿಗೊಂದು ಕಾನೂನು ತಂದರೆ ಖಂಡಿತವಾಗಿಯು ನಡೆಯುವುದಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಯಾವ ಕಾರಣಕ್ಕೋಸ್ಕರ ಬೆಂಗಳೂರಿಗೆ ವಿಶೇಷ ಸೌಲಭ್ಯ ಕೊಡುತ್ತಿದ್ದೀರಿ? ಮಂಗಳೂರಿಗೆ ಏಕೆ ಈ ಸೌಲಭ್ಯ ಇಲ್ಲ? ಇನ್ನಿತರ ಪುರಸಭೆಗಳಿಗೆ ಏಕಿಲ್ಲ? ಇಂತಹ ತಾರತಮ್ಯ ನೀತಿಯನ್ನು ತಾವೇಕೆ ತರುತ್ತಿದ್ದೀರಿ? ಇದನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಖಂಡಿಸುವ ಮೂಲಕ ನನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಿ ಇದನ್ನು ಪರಾಮರ್ಶೆಗಾಗಿ ಜಂಟಿ ಸದನ ಸಮಿತಿಗೆ ಒಪ್ಪಿಸಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

4. ಕರ್ನಾಟಕದ ಮಧ್ಯಮಾವಧಿ ಆರ್ಥಿಕ ಯೋಜನೆ 2003–2004 ರಿಂದ 2006–2007ನ್ನು ಸದನದ ಮುಂದೆ ಮಂಡಿಸುವುದು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) : ಮಾನ್ಯ ಚೇರ್ಮನ್‌ರವರೆ, ನಿನ್ನೆ ನಾನು ಸದನಕ್ಕೆ ಆಶ್ವಾಸನೆ ಕೊಟ್ಟಂತೆ ಇವೊತ್ತು ಕರ್ನಾಟಕ ಮಧ್ಯಮಾವಧಿ ಆರ್ಥಿಕ ಯೋಜನೆ 2003–04 ರಿಂದ 2006–07 ಅನ್ನು ಸದನದ ಮುಂದೆ ಮಂಡಿಸಲು ತಮ್ಮ ಅಪ್ಪಣೆ ಬೇಡುತ್ತೇನೆ.

5. ಚೇರ್ಮನ್ : ಮಂಡಿಸಲಾಯಿತು

5. ಶಾಸನ ರಚನೆ

(1) ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ 2003 (ಮುಂದು)

† ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಚೇರ್ಮನ್‌ರವರೆ, 2003ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕದ ಬಗ್ಗೆ ಸುಮಾರು ಎರಡು ಗಂಟೆಗಳ ಕಾಲ ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್, ಬಿ. ಸೋಮಶೇಖರ್, ಎ. ರಾಮದಾಸ್, ಕೆ. ಜಯಪ್ರಕಾಶ್ ಹೆಗ್ಡೆ, ವಿಶ್ವೇಶ್ವರ ಹೆಗಡೆ ಕಾಗೇರಿ, ಮತ್ತು ಎನ್. ಯೋಗೀಶ್ ಭಟ್‌ರವರು ಮಾತನಾಡಿ ಅನೇಕ ವಿಚಾರ, ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮೂಲಕ ಕೆಲವು ವಿಚಾರಗಳ ಮೇಲೆ ಬೆಳಕನ್ನೂ ಕೂಡ ಚೆಲ್ಲಿದ್ದಾರೆ.

12.50 ಪಿಎಂ

ಕೆಲವು ಸಂದರ್ಭದಲ್ಲಿ ಅಭಿನಂದನೆಯನ್ನೂ ಸಲ್ಲಿಸಿದ್ದಾರೆ. ಕೆಲವು ಕಡೆ ವಿರೋಧ ಕೂಡ ಮಾಡುತ್ತೇವೆಂದು ಪ್ರಸ್ತಾಪ ಸಹ ಮಾಡಿದ್ದಾರೆ. ಮುಖ್ಯಮಂತ್ರಿಗಳು ಎಲ್ಲಿಯವರೆಗೆ ಈ ಸದನದಲ್ಲಿ ಇರಲಿಲ್ಲ, ಅಲ್ಲಿಯವರೆಗೆ ಎಲ್ಲಾ ಚೆನ್ನಾಗಿ ಮಾಡಿದ್ದೀರಿ, ಅಭಿನಂದನೆಗಳು, ಸ್ವಾಗತಾರ್ಹವೆಂದು ಹೇಳುತ್ತಿದ್ದಿರಿ. ಮುಖ್ಯಮಂತ್ರಿಗಳು ಬಂದ ತಕ್ಷಣ, ಉತ್ತರ ಕನ್ನಡ ಶಾಸಕರು, ಇಲ್ಲಾ ನಾವು ಇದನ್ನು ವಿರೋಧ ಮಾಡುತ್ತೇವೆ. ಜಂಟಿ ಸದನದ ಸಮಿತಿಗೆ ರೆಫರ್ ಮಾಡಿ ಎಂದು ಹೇಳುತ್ತಿದ್ದಾರೆ. ರಾಮದಾಸ್‌ರವರ ಭಾಷಣವನ್ನು ನಾನು ನೋಡುತ್ತಿದ್ದಾಗ..., ನಾನು ಈ ಕಾರ್ಪೊರೇಷನ್ ಇಲಾಖೆ ಬಂದ ತಕ್ಷಣ ನಗರಗಳ ಚರಿತ್ರೆಗಳಿಗೆ ಬಂದೆ. ನಗರಗಳ ಚರಿತ್ರೆ ಎಲ್ಲಿದೆ ಎಂದು ನಾನು ಬಂದೆ. ಏಕೆಂದರೆ ನಾನು ಹಳ್ಳಿಯಿಂದ ಬಂದವನು. ಈ ಇಲಾಖೆಯನ್ನು ಮುಖ್ಯಮಂತ್ರಿಗಳು ಕೊಟ್ಟಮೇಲೆ, ಈ ಇಲಾಖೆಯ ಬಗ್ಗೆ ಅಭ್ಯಾಸ ಮಾಡಿ ನೋಡಿದಾಗ, ಇಲ್ಲಿ ಎಂತೆಂಥ ಪಂಡಿತರು, ಬುದ್ಧಿವಂತರು, ರಾಷ್ಟ್ರದ ನಾಯಕರು, ಜವಹರಲಾಲ್‌ನೆಹರೂರಂಥವರು, ಡಾ: ರಾಧಾಕೃಷ್ಣನ್‌ಅಂತವರು, ನೇತಾಜಿ ಬೋಸ್‌ರಂತವರು, ರಾಜಾಜಿಯುವರು, ಕೆಂಗಲ್ ಹನುಮಂತಯ್ಯನವರು, ವಲ್ಲಬಾಯಿ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)